ಗ್ರಂಥಾಲಯ ಇಲಾಖೆಯು ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ವರ್ಗಾಯಿಸಿ ಮೀಸಲಾಗಿಟ್ಟಿರುವ ಉದ್ದೇಶಕ್ಕೆ ಮಾತ್ರ ಈ ಹಣವನ್ನು ಉಪಯೋಗಿಸಿಕೊಳ್ಳುವ ಮೂಲಕ ಕನ್ನಡ ಭಾಷೆಯ ಸಣ್ಣ ಪ್ರಕಾಶಕರು, ಬರಹಗಾರರು ಹಾಗೂ ಲೇಖಕರಿಗೆ ಸಹಾಯ ಮಾಡುವಂತೆ ಸರಕಾರವನ್ನು ಕೋರುತ್ತೇನೆ ಹಾಗೂ ಈ ಬಗ್ಗೆ ಸರಕಾರದ ನಿಲುವನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು),— ಮಾನ್ಯ ಅಧ್ಯಕ್ಷರೆ, ಉತ್ತರವನ್ನು ತರಿಸಿಕೊಡುತ್ತೇನೆ.

೧೧–೩೦ ಎ.ಎಂ

## ವಿತ್ತೀಯ ಕಾರ್ಯಕಲಾಪಗಳು

## ೧೯೯೦–೯೧ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

† ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ) ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರುವಂತಹ ಈ ಸಾಲಿನ ಮುಂಗಡ ಪತ್ರವನ್ನು ಅತ್ಯಂತ ಧೈರ್ಯದ, ಸಾಹಸದ ಹಾಗೂ ಸಮತೋಲನದಿಂದ ಕೂಡಿದಂತಹ ಯಾವ ಮುಂಗಡ ಪತ್ರವನ್ನು ಮಂಡಿಸಿದ್ದಾರೆ ಅದನ್ನು ನಾನು ತುಂಬ ಅಭಿಮಾನದಿಂದ ಅತ್ಯಂತ ಮೆಚ್ಚುಗೆಯಿಂದ ಸ್ವಾಗತಿಸುತ್ತೇನೆ, ಹಿಂದಿನ ಸರ್ಕಾರದ ಆರ್ಥಿಕ ದಿವಾಳಿತನದ ಬಳುವಳಿ ಇದ್ದರೂ ಕೂಡ, ಹಿಂದಿನ ಸರ್ಕಾರದಲ್ಲಿ ೨೦ ರೂಪಾಯಿಗಳ ಚೆಕ್ಕುಗಳು ಕೂಡ ಬೌನ್ಸ್ ಆಗುವಂತಹ ಪರಿಸ್ಥಿತಿ ಇದ್ದರೂ ಇಂತಹ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ದಿವಾಳಿತನದ ಹೊರೆಯನ್ನು ಹೊತ್ತಂತ ನಮ್ಮ ಸರ್ಕಾರ, ನಮ್ಮ ಅರ್ಥ ಮಂತ್ರಿಗಳು ಇವತ್ತು ಈ ಕರ್ನಾಟಕ ರಾಜ್ಯದ ಶ್ರೀಸಾಮಾನ್ಯನು ಮೆಚ್ಚುವಂತಹ ಅದರಲ್ಲೂ ಕೂಡ ರಾಜ್ಯದ ಹಾಗೂ ರಾಷ್ಟ್ರದ ಸುದ್ದಿ ಮಾಧ್ಯಮಗಳು ಶ್ಲಾಘಿಸುವಂತಹ ಒಂದು ಮುಂಗಡ ಪತ್ರವನ್ನು ಈ ಸಾರಿ ಮಂಡಿಸಿದ್ದಾರೆ. ಈ ಒಂದು ಮುಂಗಡ ಪತ್ರ ಮಾನ್ಯ ಅರ್ಥ ಸಚಿವರ ಅತ್ಯಂತ ಸಾಹಸಮಯವಾದಂತ ಒಂದು ಮುಂಗಡ ಪತ್ರ ಎಂದು ವ್ಯಕ್ತಪಡಿಸುತ್ತದೆ. ಪ್ರಥಮವಾಗಿ ನಾನು ಅವರನ್ನು ತಮ್ಮ ಮೂಲಕ ಈ ಸದನದಲ್ಲಿ ಅಭಿನಂದಿಸಲಿಕ್ಕೆ ಇಚ್ಛೆಪಡುತ್ತೇನೆ. ಹೆಂಡದ ಮಾರಾಟ ರದ್ದು ಮಾಡುವ ಮೂಲಕ ಇಡೀ ರಾಜ್ಯದಲ್ಲಿ ದಲಿತರ ಕೂಗು ಏನಿತ್ತು ಅವರ ಘೋಷಣೆ ಏನಿತ್ತು, ವಿಷದ ಹೆಂಡ ನಮಗೆ ಬೇಡ, ಎಂಬ ಕೂಗು ಏನಿತ್ತು ಅದರಲ್ಲೂ ರಾಜ್ಯದ ಪ್ರಮುಖವಾಗಿ ಹರಿಜನ ಗಿರಿಜನ ಬಾಂಧವರ ನಿರಂತರ ಶೋಷಣೆ ಏನಾಗುತ್ತಿತ್ತು ಅಂತಹ ಒಂದು ಪದ್ಧತಿಯನ್ನು ಮಾನ್ಯ ವಿತ್ತ ಸಚಿವರು ರದ್ದು ಮಾಡುವ ನಿರ್ಧಾರ ತೆಗೆದುಕೊಂಡಿದ್ದಾರೆ ರಾಜ್ಯದ ದೀನದಲಿತರ ಹಿತಾಸಕ್ತಿಯ ದೃಷ್ಟಿಯಿಂದ ಕರ್ನಾಟಕ ದಲಿತ ಸಂಘರ್ಷ ಸಮಿತಿಯವರು ಇದರ ಬಗ್ಗೆ ಸುದೀರ್ಘವಾದ ಹೋರಾಟವನ್ನು ಮಾಡುತ್ತಿದ್ದರು. ಈವಿಷದ ಹೆಂಡವನ್ನು ರದ್ದು ಮಾಡಬೇಕು ಮತ್ತು ಅದಕ್ಕೆ ಅಂತ್ಯ ಕಾಣಿಸಬೇಕೆನ್ನುವುದಕ್ಕೆ ಮನ್ನಣೆಇತ್ತು ಮಾನ್ಯ ವಿತ್ತ ಸಚಿವರು ರದ್ದು ಮಾಡಿದ್ದಾರೆ. ಅವರಿಗೆ ಸದನದ ಮೂಲಕ ತಮ್ಮ ಮೂಲಕ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯದ ಅತ್ಯಂತ ಸಮರ್ಥಶಾಲಿ ಮಾಧ್ಯಮವಾದ ಚಲನಚಿತ್ರಮಾಧ್ಯಮ ಏನಿದೆ ಅದರ ಮೇಲೆ ಸೇಲ್ಸ್ ಟ್ಯಾಕ್ಸ್ ಆನ್ ಫೀಚರ್ ಫಿಲಂ ಮೇಲೆ ತೆರಿಗೆ ಹಾಕುವಂಥಾದ್ದು ಅದರಲ್ಲಿಯೂ ಕೂಡ ಹಲವಾರು ಹಂತಗಳಲ್ಲಿ ತೆರಿಗೆಯನ್ನು ವಿಧಿಸುವ ನಿರ್ಧಾರ ತೆಗೆದುಕೊಂಡಿದ್ದಾರೆ. ಈ ಬಗ್ಗೆ ನಾನಾದರೂ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ಒಂದು ನಿರ್ಧಾರ ಸಾಧುವಾದುದಲ್ಲ. ಕನ್ನಡಿಗರ ಹಿತಾಸಕ್ತಿಯನ್ನು ಕಾಪಾಡುವಂಥ ಚಲನಚಿತ್ರ ಮಾಧ್ಯಮ ಏನಿದೆ ಅದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಮಾಜವನ್ನು ಪ್ರತಿಬಿಂಬಿಸುವ ಮಾಧ್ಯಮ ಏನಿದೆ, ಮತ್ತು ಹಲವಾರು ಹಂತಗಳಲ್ಲಿ ಚಲನಚಿತ್ರವನ್ನು ವಿತರಣೆ ಮಾಡುವಂಥ ವ್ಯವಸ್ಥೆ ಏನಿದೆ ಅದು ಅತ್ಯಂತ ಪೂರ್ವದಿಂದಲೂ ಕೂಡ ನಡೆದು ಬಂದಿದೆ.

ಉದಾಹರಣೆಗೆ ಹೇಳುವುದಾದರೆ ನಿರ್ಮಾಣ ಹಂತದಲ್ಲಿ ನಮ್ಮ ವಿತ್ತ ಸಚಿವರು ೫ ಪರ್ಸೆಂಟ್ ತೆರಿಗೆಯನ್ನು ವಿಧಿಸಿದ್ದಾರೆ. ನಿರ್ಮಾಣ ಹಂತವಾದ ನಂತರ ಅಲ್ಲಿಂದ ಜಿಲ್ಲಾ ಕೇಂದ್ರಕ್ಕೆ ಈ ಚಲನಚಿತ್ರ ವಿತರಣೆಯಾದಾಗ ಜಿಲ್ಲಾ ಕೇಂದ್ರದ ಒಬ್ಬ ವಿತರಕನು ಕೂಡ ಶೇಕಡ ೫ ಪರ್ಸೆಂಟ್ ತೆರಿಗೆಯನ್ನು ಕೊಡಬೇಕಾದಂತಹ ಒಂದು ಸರಕಾರದ ನಿರ್ಧಾರ ಏನು ಇದೆ ಅದು ಈ ಮಾಧ್ಯಮಕ್ಕೆ ಮಾರಕವಾಗುವಂತಹ ನಿರ್ಧಾರವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಅಲ್ಲಿಂದ ನೇರವಾಗಿ ಒಬ್ಬ ಸಹ ವಿತರಕನನಿಂದ ಇನ್ನೊಂದು ಹಂತವನ್ನು ತಲುಪಿದಾಗ ಅಲ್ಲೂ ಕೂಡ ೫ ಪರ್ಸೆಂಟ್ ತೆರಿಗೆಯನ್ನು ವಿಧಿಸುವಂತಹ ನಿರ್ಧಾರ ಏನು ಇದೆ ಇದರಿಂದ ಈ ಮಾಧ್ಯಮದ ಶೋಷಣೆಯಾಗುತ್ತದೆ. ಇದನ್ನು ತಪ್ಪಿಸಬೇಕೆಂದು ನಾನು ವಿನಂತಿಸುತ್ತೇನೆ. ಈ ಬಗ್ಗೆ ಮಾನ್ಯ ವಿತ್ತ ಸಚಿವರನ್ನು ಒತ್ತಾಯ ಪೂರ್ವಕ

ವಾಗಿ ಮನವಿ ಮಾಡುತ್ತಿದ್ದೇನೆ. ಜೊತೆಗೆ ಸಿನಿಮಾ ಕೇಂದ್ರಗಳಲ್ಲಿ ಕೂಡ ಅದನ್ನು ಮಾರಾಟ ಮಾಡಿ ಸುಮಾರು ೩–೪ ವಾರಗಳ ಕಾಲ ಅಲ್ಲಿ ಚಲನಚಿತ್ರ ನಡೆಯಬೇಕಾದರೆ ಅಲ್ಲೂ ಕೂಡ ೫ ಪರ್ಸೆಂಟ್ ತೆರಿಗೆಯನ್ನು ಕೊಡಬೇಕಾಗುತ್ತದೆ. ಇಂತಹ ವಿವಿಧ ಹಂತಗಳ ತೆರಿಗೆಗಳ ಪದ್ಧತಿಯನ್ನು ರದ್ದು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು ನಮ್ಮ ಸಮಾಜದಲ್ಲಿ ಇವತ್ತು ವಿಡಿಯೋ ಪಾರ್ಲರ್‌ಗಳ ಹಾವಳಿ ಏನು ಇದೆ ಇದರಿಂದ ನಮ್ಮ ಯುವ ಜನಾಂಗದ ನೈತಿಕತೆ ಹಾಳಾಗುತ್ತಿದೆ ಮತ್ತು ಅಲ್ಲಿ ಅಶ್ಲೀಲ ಚಿತ್ರಗಳನ್ನು ತೋರಿಸುವಂತಹ ಯಾವ ಒಂದು ವ್ಯವಸ್ಥೆ ಇದೆ ಇದರಿಂದ ಯುವಕರು ಹಾಳಾಗುತ್ತಿದ್ದಾರೆ. ಯುವ ಜನಾಂಗ ಹಾದಿ ತಪ್ಪುವ ವ್ಯವಸ್ಥೆ ಇದೆ ಇದನ್ನು ತಪ್ಪಿಸಬೇಕು ಇದನ್ನು ಮೂಲಭೂತವಾಗಿ ತೆಗೆದುಹಾಕುವಂತಹ ವ್ಯವಸ್ಥೆ ಮಾಡಬೇಕು. ನಮ್ಮ ವಿತ್ತ ಸಚಿವರು ಒಂದೂವರೆ ಕೋಟಿ ರೂಪಾಯಿ ತೆರಿಗೆಯನ್ನು ಹಾಕುವ ನಿರ್ಧಾರವನ್ನು ಮಾಡುವ ಮೂಲಕ ಒಂದು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದಾರೆ. ರಾಜ್ಯಕ್ಕೆ ಬೇರೆ ಬೇರೆ ಬಾಬುಗಳಿಂದ ಸುಮಾರು ೫ ಕೋಟಿ ರೂಪಾಯಿಗಳ ಆದಾಯ ಬರಬೇಕಾದುದು ಏನು ಇದೆ ಅದನ್ನು ತಪ್ಪಿಸಿಕೊಳ್ಳುವಂತಹ ಒಂದು ವಿಪರ್ಯಾಸವನ್ನು ತಪ್ಪಿಸಿ ಸರಿಯಾಗಿ ತೆರಿಗೆಯನ್ನು ವಸೂಲು ಮಾಡಬೇಕು. ಸೋರಿ ಹೋಗದ ರೀತಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಒಂದೂವರೆ ಕೋಟಿ ರೂಪಾಯಿಯ ತೆರಿಗೆಯ ಆಸೆಯಿಂದ ವಸೂಲು ಮಾಡುವುದನ್ನು ಸರಿಯಾಗಿ ವಸೂಲು ಮಾಡದಿದ್ದರೆ ತೊಂದರೆಯಾಗುತ್ತದೆ ಆದರಿಂದ ವಂಚಿತರಾಗುವುದು ಬೇಡ. ಇಂತಹ ವಿಪರ್ಯಾಸವನ್ನು ತಪ್ಪಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳು ಈ ವಿಡಿಯೋ ಪಾರ್ಲರ್‌ಗಳನ್ನು ರದ್ದು ಮಾಡಬೇಕು. ಇಂತಹ ನಿರ್ಧಾರವನ್ನು ಈಗಾಗಲೇ ಕೇರಳ, ಆಂಧ್ರ ತಮಿಳುನಾಡಿನಲ್ಲಿ ಸಾಮಾಜಿಕ ಹಿತದೃಷ್ಟಿಯಿಂದ ಕೈಗೊಂಡಿದ್ದಾರೆ. ಇದನ್ನು ರದ್ದು ಮಾಡುತ್ತೇವೆಂಬ ಬಗ್ಗೆ ಈ ಸದನದಲ್ಲಿ ಹೇಳಬೇಕು. ಇದನ್ನು ತಪ್ಪಿಸುವ ಮೂಲಕ ಚಲನ ಚಿತ್ರ ಮಾಧ್ಯಮ ಏನು ಇದೆ ಅದು ಈ ನಾಡಿನಲ್ಲಿ ಬೆಳೆಯುವಂತಹ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ೧೯೮೬ರ ತನಕ ಸಬ್ಸಿಡಿಯನ್ನು ಏರಿಸಿದರೂ ಕೂಡ ಇಂದಿನ ಆರ್ಥಿಕ ಪರಿಸ್ಥಿತಿಯಿಂದ ನಿರ್ಮಾಣದ ವೆಚ್ಚವನ್ನು ಅವಲಂಬಿಸಿದಾಗ ಇವತ್ತು ಚಲನ ಚಿತ್ರ ಮಾಧ್ಯಮ ದುಬಾರಿಯಾಗುತ್ತಿದ್ದು ದುಬಾರಿ ನಿರ್ಮಾಣದ ವೆಚ್ಚವನ್ನು ತಯಾರಕರು ಎದುರಿಸುವಂತಹ ಪರಿಸ್ಥಿತಿ ಇದೆ. ಕನ್ನಡ ಚಲನ ಚಿತ್ರದ ಏಳಿಗೆಯ ದೃಷ್ಟಿಯಿಂದ ಕನ್ನಡವನ್ನು ಉಳಿಸಿ ಬೆಳೆಸಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಸುಮಾರು ಮೂರೂವರೆ, ನಾಲ್ಕೂವರೆ ಲಕ್ಷ ರೂಪಾಯಿಗಳಿಗೆ ಸಬ್ಸಿಡಿಯನ್ನು ಏರಿಸುವ ಮೂಲಕ ಈ ಮಾಧ್ಯಮವನ್ನು ಬೆಳೆಸಬೇಕು. ಚಲನಚಿತ್ರ ವಾಣಿಜ್ಯ ಮಂಡಲಿಯವರೂ ಕೂಡ ಈಗಾಗಲೇ ತಮ್ಮನ್ನು ಅಂದರೆ ಮಂತ್ರಿಮಹೋದಯರನ್ನು ಭೇಟಿ ಮಾಡಿದ್ದಾರೆ. ನಮ್ಮ ಕರ್ನಾಟಕದ ಕನ್ನಡದ ಅಭಿಮಾನಿ, ಶ್ರೇಷ್ಠ ಕಲಾವಿದ ಡಾ: ರಾಜಕುಮಾರ್‌ರವರು ಆ ನಿಯೋಗದ ನೇತೃತ್ವವನ್ನು ವಹಿಸಿದ್ದಾರೆ. ಅವರ ಅಭಿಮತವನ್ನು ಪುರಸ್ಕರಿಸುವ ಮೂಲಕ ಈ ಚಲನಚಿತ್ರ ಉದ್ಯಮ ಬೆಳೆಯುವುದಕ್ಕೆ ತಾವು ಎಲ್ಲಾ ಅವಕಾಶವನ್ನೂ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಸ್ವಾಮಿ, ಇವತ್ತು ತಾವು ಈ ಸದನದ ಅಧ್ಯಕ್ಷ ಪೀಠದಲ್ಲಿದ್ದೀರಿ ತಾವು ಕನ್ನಡಾಭಿಮಾನಿಗಳು, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮ ಸೇವೆಯನ್ನು ಸಲ್ಲಿಸುತ್ತಿದ್ದೀರಿ ಇದು ತುಂಬಾ ಹೆಮ್ಮೆಯ ಸಂಗತಿ. ಇವತ್ತು ನಮ್ಮ ರಾಜ್ಯ ಸರ್ಕಾರದವರು ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದಕ್ಕೆ ಹೊರಟಿದ್ದಾರೆ. ಆ ಸ್ಥಳ ಯಾವುದು ಎಂದರೆ ಐತಿಹಾಸಿಕವಾದ, ಚಾರಿತ್ರಿಕವಾದ ಸ್ಥಳವಾದ ಹಂಪೆ. ಮುಕ್ಕೋಟಿ ಕನ್ನಡಿಗರ ಆಶೋತ್ತರಕ್ಕೆ ಸ್ಪಂದಿಸಿ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಪ್ರಾಮಾಣಿಕ ಮತ್ತು ಉತ್ತಮ ಕೆಲಸವನ್ನು ತೆಗೆದುಕೊಂಡಿದ್ದೀರಿ. ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವ ನಿಮ್ಮ ನಿಲುವನ್ನು ರಾಜ್ಯದ ಇಡೀ ಕನ್ನಡ ಜನತೆ ಮೆಚ್ಚುತ್ತದೆ. ಇದು ತುಂಬಾ ಅಭಿಮಾನದ ಸಂಗತಿ ಎಂದು ಹೇಳಬಯಸುತ್ತೇನೆ.

ಇನ್ನು ನಾನು ನಗರಪ್ರದೇಶದಿಂದ ಬಂದಿರತಕ್ಕ ಒಬ್ಬ ಶಾಸಕ. ೫೦ ವರ್ಷಗಳ ಹಿಂದೆ ಇದ್ದಂಥ ನಗರಾಭಿವೃದ್ಧಿ ಕಾರ್ಯಕ್ರಮಗಳು ಇತ್ತೀಚೆಗೆ ನಿಂತು ಹೋಗಿದ್ದುವು. ಮಹಾರಾಜರ ಆಡಳಿತ ಕಾಲದಲ್ಲಿ ಮೈಸೂರು ನಗರದ ನೀರಿನ ವ್ಯವಸ್ಥೆ ಮತ್ತು ಒಳಚರಂಡಿ ವ್ಯವಸ್ಥೆ ಏನಿತ್ತು ಅದೂ ಕೂಡ ೧೯೦೩ನೇ ಇಸವಿಯಿಂದ ಇಂದಿನವರೆಗೂ ಕುಂಟುತ್ತಾ ನಡೆದುಕೊಂಡು ಬರುತ್ತಿತ್ತು. ಅಲ್ಲಿ ನಗರಾಭಿವೃದ್ಧಿ ಕಾರ್ಯಕ್ರಮಗಳು ಸಮರ್ಪಕವಾಗಿ ಆಗುತ್ತಿರಲಿಲ್ಲ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಬೆಳಗಾಂನಿಂದ ಹಿಡಿದು ಚಾಮರಾಜನಗರದವರೆಗೆ ದೊಡ್ಡ ದೊಡ್ಡ ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರನ್ನೊದಗಿಸಲು ೧೩೦ ಕೋಟಿ ರೂಪಾಯಿ ಗಳನ್ನು ಇಟ್ಟಿದ್ದಾರೆ. ನಗರದ ನಾಗರೀಕರ ಅದರಲ್ಲೂ ತಾಯಂದಿರು ಮತ್ತು ಅಕ್ಕ ತಂಗಿಯರ ಹಿತದೃಷ್ಟಿಯಿಂದ ಬಹಳ ಅತ್ಯುತ್ತಮ ಕಾರ್ಯ ವನ್ನು ಕೈಗೊಂಡಿದ್ದಾರೆ. ಇದು ನಿಜವಾಗಿಯೂ ಶ್ಲಾಘನೀಯ ಮತ್ತು ಅಭಿನಂದನೀಯವಾದುದು ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಈ ದಿಸೆಯಲ್ಲಿ ನಮ್ಮ ಸರ್ಕಾರವನ್ನು ಬಹಳ ಮುಖ್ಯವಾಗಿ

ಅಭಿನಂದಿಸಬೇಕಾದುದು ಎಂದರೆ ಈ ಮುಂಬರುವ ಬೇಸಿಗೆಯಲ್ಲಿ ನಗರದ ನಾಗರೀಕರಿಗೆ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸುವ ದೃಷ್ಟಿಯಿಂದ, ಈ ಸಮಸ್ಯೆಯನ್ನು ತೀವ್ರವಾಗಿ ಎದುರಿಸುವ ದೃಷ್ಟಿಯಿಂದ ತುರ್ತು ಕಾರ್ಯಕ್ರಮವನ್ನು ಕೈಗೊಂಡಿದ್ದಾರೆಂದು ನಾನು ಹೇಳಬಯಸುತ್ತೇನೆ.

ಇನ್ನು ಗೃಹನಿರ್ಮಾಣ ಮಂಡಲಿಯ ಬಗ್ಗೆ ಹೇಳುವುದಾದರೆ, ಈ ಕಾರ್ಯಕ್ರಮಕ್ಕೆ ಸರ್ಕಾರದವರು ಹೆಚ್ಚು ಒತ್ತುಕೊಟ್ಟಿದ್ದಾರೆ. ನಾನು ನನ್ನ ಅನುಭವದಲ್ಲಿ ಹೇಳುವುದಾದರೆ ಗ್ರಾಮೀಣ ಪ್ರದೇಶದಿಂದ ಶೋಷಣೆಗೆ ಒಳಗಾಗಿ ನಗರ ಪ್ರದೇಶಗಳಿಗೆ, ಪಟ್ಟಣ ಪ್ರದೇಶಗಳಿಗೆ ಬಂದಂಥ ಜನರು ಯಾರಿದ್ದಾರೆ ಅವರಿಗೆ ಸರ್ಕಾರದವರು ಪಟ್ಟಣ ಪ್ರದೇಶ ಮತ್ತು ನಗರ ಪ್ರದೇಶಗಳಲ್ಲಿ ಮನೆಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕಾಗಿತ್ತು. ನಾಗರೀಕ ಸೌಲಭ್ಯಗಳನ್ನು ಅವರಿಗೆ ಒದಗಿಸಿಕೊಡಬೇಕಾಗಿತ್ತು. ಇದು ಈ ಸರ್ಕಾರದ ಜವಾಬ್ದಾರಿ; ಅಥವಾ ಪ್ರಾಧಿಕಾರಗಳ ಜವಾಬ್ದಾರಿ ಎಂಬ ಮಾತನ್ನು ನಾನು ವಿಧಿಯಿಲ್ಲದೆ ಹೇಳಬೇಕಾಗಿದೆ. ನಿಮಗೆ ಉದಾಹರಣೆಗಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ ಮೈಸೂರು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಗಳು ಏನಿವೆ ಇವುಗಳ ಕರ್ತವ್ಯದ ವೈಫಲ್ಯದ ಫಲದಿಂದಾಗಿ ಇವತ್ತು ಈ ರೆವಿನ್ಯೂ ನಿವೇಶನಗಳ ಸಮಸ್ಯೆ ಉದ್ಭವಿಸಿದೆ. ಈ ಸಮಸ್ಯೆಯನ್ನು ಪರಿಹರಿಸುವ ಕೆಲಸಕ್ಕೆ ಹೆಚ್ಚು ಒತ್ತು ಕೊಡುವುದಾಗಿ ಇಲ್ಲಿ ತಿಳಿಸಿದ್ದಾರೆ.

ಈಗಾಗಲೇ ರೆವಿನ್ಯೂ ನಿವೇಶನದಾರರು ನಗರ ಸೌಲಭ್ಯಗಳನ್ನು ಪಡೆಯುವಲ್ಲಿ ವಂಚಿತರಾಗಿದ್ದಾರೆ. ಅದರ ಜೊತೆಗೆ ಅವರಿಂದ ಸರ್ಕಾರಕ್ಕೆ ನಗರಸಭೆಗಳಿಗೆ ಬರತಕ್ಕಂಥ ಕಂದಾಯದಿಂದ ಸರ್ಕಾರ ವಂಚಿತವಾಗಿದೆ. ಈ ವ್ಯವಸ್ಥೆಯ ವಿಪರ್ಯಾಸವನ್ನು ತಪ್ಪಿಸಿದಂತಾಗುತ್ತದೆಂದು ಹೇಳಿ ಇದನ್ನು ತುರ್ತು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಜೊತೆಗೆ ಉದ್ಯೋಗ ವಿಷಯದ ಬಗ್ಗೆ ನಮ್ಮ ಮಾನ್ಯ ಅರ್ಥ ಸಚಿವರು ಒಂದು ಮಾತನ್ನು ಹೇಳಿದ್ದಾರೆ. ನಾನಾದರೂ ಕೂಡ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದನ್ನು ಹೇಳುತ್ತೇನೆ ೫೮ ವರ್ಷದಿಂದ ೫೫ ವರ್ಷಕ್ಕೆ ಸರ್ಕಾರಿ ನೌಕರರ ಸೇವೆಯ ಅವಧಿಯನ್ನು ಕಡಿಮೆ ಮಾಡುತ್ತೇವೆಂದು ಹೇಳಿರುತ್ತಾರೆ. ಇದು ಅತ್ಯಂತ ಸ್ವಾಗತಾರ್ಹವಾದ ವಿಚಾರವಾಗಿರುತ್ತದೆ. ಸರ್ಕಾರಿ ನೌಕರರ ಸೇವಾ ಅವಧಿಯನ್ನು ಕಡಿಮೆ ಮಾಡುವ ವಿಷಯ ಜೊತೆಗೆ ಯಾರು ರಾಜ್ಯದಲ್ಲಿ ನಿರುದ್ಯೋಗದಿಂದ ಬಳಲುತ್ತಿದ್ದಾರೆ ಆ ವಿದ್ಯಾವಂತ ನಿರುದ್ಯೋಗಿ ಜನರಿಗೆ ಸರ್ಕಾರ ಪ್ರಾಮಾಣಿಕವಾಗಿ ಸ್ಪಂದಿಸುವ ಕೆಲಸ ಮಾಡಲು ನಿರ್ಧಾರ ಮಾಡಿದೆ ಎಂದು ಹೇಳಿ ಅವರಿಗೆ ನನ್ನ ಅಭಿಮಾನವನ್ನು ವ್ಯಕ್ತಪಡಿಸುತ್ತೇನೆ. ಜೊತೆಗೆ ಸ್ಟೈಫಂಡರಿ ಪದವೀಧರರು ಕೂಡ ೫-೬ ಸಾವಿರ ಜನರು ಯಾರು ಉಳಿದಿದ್ದಾರೆ ಅವರಿಗೂ ಕೂಡ ಈ ರೀತಿಯ ಆಧಾರದ ಮೇಲೆ ನಾವು ಉದ್ಯೋಗವನ್ನು ಕೊಡುತ್ತೇವೆಂದು ಹೇಳಿಕೆಯನ್ನು ಕೊಟ್ಟಿರುವುದಕ್ಕೆ ತಮ್ಮ ಮೂಲಕ ಅದನ್ನು ಸ್ವಾಗತಿಸುತ್ತೇನೆ. ಈ ಒಂದು ಸಂದರ್ಭದಲ್ಲಿ ಒಂದು ಸಲಹೆಯನ್ನು ಕೂಡ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ನಮ್ಮ ರಾಜ್ಯದಲ್ಲಿ ಈ ಬಾಲ ಕಾರ್ಮಿಕ ವೃತ್ತಿಯನ್ನು ತಪ್ಪಿಸಬೇಕೆಂದು ಒಂದು ಕಾಯಿದೆಯೂ ಕೂಡ ಇದೆ. ಯಾರು ಬಾಲಕಾರ್ಮಿಕರು ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಆ ಕೆಲಸದಿಂದ ತಪ್ಪಿಸುವ ಮುಖಾಂತರ ವಯಸ್ಕ ಯುವಕರನ್ನು ಉದ್ಯೋಗಗಳಲ್ಲಿ ತೊಡಗಿಸುವ ಕಾಯಿದೆಯನ್ನು ಮಾಡುವ ವ್ಯವಸ್ಥೆಯಾಗಬೇಕು. ಆದ್ದರಿಂದ ಈ ಬಾಲಕಾರ್ಮಿಕರನ್ನು ಕೆಲಸದಲ್ಲಿ ತೊಡಗಿಸದಂತೆ ಒಂದು ನಿಷೇಧ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಜೊತೆಗೆ ನಮ್ಮ ಕೃಷ್ಣಾ ಕಾವೇರಿ ಯೋಜನೆಯ ಬಗ್ಗೆ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಹಾಗೆಯೇ ೭೫೦ ಕೋಟಿ ರೂಪಾಯಿಗಳನ್ನು ಕಾವೇರಿ ಯೋಜನೆಗೆ ಕೊಟ್ಟಿದ್ದೀರಿ. ನಾನಾದರೂ ಕೂಡ ಈ ಒಂದು ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಕಾವೇರಿ ಜಲಾಶಯದ ಅಕ್ಕಪಕ್ಕದವರನ್ನು ನೋಡಿದ್ದೇವೆ. ಕಾವೇರಿ ನದಿಗೆ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿ ಸುಂದರವಾದ ಕಾವೇರಿ ತಾಯಿಯನ್ನು ನಿಲ್ಲಿಸಿಕೊಂಡಿದ್ದೇವೆ. ಈ ಕಾವೇರಿ ನದಿಯ ನೀರನ್ನು ಸಮಗ್ರವಾಗಿ ನಾವು ಉಪಯೋಗಿಸಿಕೊಳ್ಳುತ್ತಿಲ್ಲ. ಅದನ್ನು ತಮಿಳುನಾಡ ಜನ ಉಪಯೋಗಿಸಿಕೊಳ್ಳುತ್ತಿರುವುದು ನಮ್ಮ ದುರ್ದೈವ. ಆದರೆ ನಮ್ಮ ಅರ್ಥಸಚಿವರು ತಮ್ಮ ಹೇಳಿಕೆಯಲ್ಲಿ ಇನ್ನು ಎರಡು ದಶಕಗಳ ಕಾಲದಲ್ಲಿ ಕಾವೇರಿ ಯೋಜನೆಯನ್ನು ಪೂರ್ಣಗೊಳಿಸುತ್ತೇವೆಂದು ಹೇಳಿದ್ದಾರೆ. ಇಲ್ಲಿಯವರೆಗೆ ಈ ಯೋಜನೆಯನ್ನು ಮಾಡಿಕೊಳ್ಳದಿರುವುದರಿಂದ ಪ್ರತಿವರ್ಷ ಕರ್ನಾಟಕ ರಾಜ್ಯದ ಒಂದು ಸಾವಿರ ಕೋಟಿ ರೂಪಾಯಿಗಳ ನೀರು ತಮಿಳುನಾಡಿಗೆ ಹರಿದುಹೋಗುವಂಥ ವ್ಯವಸ್ಥೆ ಇದೆ. ಕಾವೇರಿ ನದಿ ನೀರು ತಮಿಳುನಾಡಿಗೆ ಹರಿದುಹೋಗುವುದರಿಂದ ಕರ್ನಾಟಕದ ಪ್ರತಿ ಪ್ರಜೆಯ ಒಂದು ದಿವಸದ ಎಂಟು ಆಣೆಯ ನೀರು ನೇರವಾಗಿ ತಮಿಳುನಾಡಿಗೆ ಹರಿದುಹೋಗುವಂಥ ವ್ಯವಸ್ಥೆ ಇದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕಾವೇರಿ ನೀರು ತಮಿಳುನಾಡಿಗೆ ಹರಿದುಹೋಗುವುದರಿಂದ ಕರ್ನಾಟಕದ ಕೃಷಿ ಹತ್ತಿ ತಮಿಳುನಾಡಿಗೆ ಹೋಗುತ್ತಿದೆ. ಅವರು ತಯಾರು ಮಾಡಿದ ಹತ್ತಿಬಟ್ಟೆ ನಮಗೆ ಬರುತ್ತಿದೆ.

ಕರ್ನಾಟಕದಲ್ಲಿ ಬೆಳೆದಂಥ ರೇಷ್ಮೆಯಿಂದ ಧರ್ಮಾವರಮ್, ಕಾಂಚೀವರಮ್ ಸೀರೆಗಳಾಗಿ ನಮ್ಮ ಕರ್ನಾಟಕಕ್ಕೆ ಬರುತ್ತಿದೆ. ಕೃಷಿಯಿಂದ ಬರತಕ್ಕಂಥ ಅವಕಾಶವೇನು ಇದೆ ಅದು ತಪ್ಪಿಹೋಗದ ಹಾಗೆ ಕರ್ನಾಟಕ ಸರ್ಕಾರದವರು ಒಂದು ಆರ್ಥಿಕ ತಜ್ಞರ ಸಮಿತಿಯನ್ನು ಮಾಡಿ ಕರ್ನಾಟಕ ರಾಜ್ಯಕ್ಕೆ ಪ್ರತಿ ವರ್ಷ ಸುಮಾರು ಒಂದು ಸಾವಿರ ಕೋಟಿ ಆರ್ಥಿಕ ಮಗಮಾನ ಶೋಷಣೆಯಾಗುವುದನ್ನು ತಪ್ಪಿಸಬೇಕು. ಇದರ ಬಗ್ಗೆ ಒಂದು ಪ್ರಾಮಾಣಿಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಮಾನ್ಯ ಅರ್ಥ ಸಚಿವರು ಯಾವ ಒಂದು ಮುಂಗಡಪತ್ರವನ್ನು ಮಂಡಿಸಿರುತ್ತಾರೆ ಅದನ್ನು ಸ್ವಾಗತಿಸುತ್ತಾ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **ಪ್ರೊ. ಎಂ.ಡಿ. ನಂಜುಂಡಸ್ವಾಮಿ** (ಧಾರವಾಡ ಗ್ರಾಮಾಂತರ).—ಮಾನ್ಯ ಸಭಾಧ್ಯಕ್ಷರೆ, ಈ ಸಾಲಿನ ಆಯವ್ಯಯದ ಮೇಲೆ ೪ನೇ ದಿನದ ಚರ್ಚೆ ನಡೆಯುತ್ತಿದೆ. ಕಳೆದ ಮೂರು ದಿವಸಗಳಿಂದ ಮಾತನಾಡಿದ ನನ್ನ ಎಲ್ಲಾ ಸ್ನೇಹಿತರೂ ರೈತರ ಬಗ್ಗೆ ಹೆಚ್ಚು ಮಾತನಾಡಿರುವುದರಿಂದ ನಾನು ನೇರವಾಗಿ ಈ ಬಡ್ಜೆಟ್‌ನಲ್ಲಿರುವಂತಹ ಮೂಲ ದೋಷಗಳ ಬಗ್ಗೆ ಸಭೆಯ ಮತ್ತು ಮಾನ್ಯ ಅರ್ಥ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ. ಈ ಬಡ್ಜೆಟ್ಟಿನಲ್ಲಿರುವಂಥ ಮೂಲ ದೋಷಗಳನ್ನು ನಾವು ಗುರುತಿಸದೆ ಮುಂದುವರಿದರೆ ಈ ವರ್ಷದ ಬಡ್ಜೆಟ್ ಯಾವುದೇ ಒಂದು ಪರಿಣಾಮ ಮಾಡದೆ ಇರುವಂತಹ ನಿಷ್ಪ್ರಯೋಜಕವಾದ ಬಡ್ಜೆಟ್ ಆಗುವುದರಲ್ಲಿ ಏನೇನು ಅನುಮಾನವಿಲ್ಲ. ಈ ಮೂಲ ದೋಷಗಳು ಈ ವರ್ಷ ಕಂಡುಬಂದಂತಹ ಮೂಲದೋಷಗಳೂ ಅಲ್ಲ, ಹಲವಾರು ವರ್ಷಗಳಿಂದ ಬಂದಿರುವಂತಹ ಈ ಮೂಲ ದೋಷಗಳು ಈ ವರ್ಷವೂ ಮುಂದುವರಿಯುತ್ತಿವೆ ಈ ಬಡ್ಜೆಟ್ಟಿನಲ್ಲೇ. ಆ ಕಾರಣದಿಂದ ಈಗಲಾದರೂ ಕಾಲ ಮಿಂಚಿಲ್ಲ, ಈ ಮೂಲ ದೋಷಗಳನ್ನು ನಾವು ತೆಗೆದುಹಾಕಬೇಕು. ಇದರಲ್ಲಿ ಮುಖ್ಯವಾಗಿ ಎರಡು ಮೂಲ ದೋಷಗಳಿವೆ. ಒಂದನೆಯದು, ಈ ಸರ್ಕಾರದ ಎಲ್ಲಾ ಕಾರ್ಯಕ್ರಮಗಳು ಪಾಶ್ಚಾತ್ಯ ವಿಚಾರಗಳ ಮೇಲೆ ಅವಲಂಬಿತವಾಗಿವೆ. ಎರಡನೆಯದು, ಈ ಸರ್ಕಾರದ ಮುಖ್ಯವಾದ ಎಲ್ಲಾ ಕೆಲಸಗಳು ವಿದೇಶಿ ಸಹಾಯ ಮತ್ತು ಸಾಲದ ಮೇಲೆ ಅವಲಂಬಿತವಾಗಿರುತ್ತವೆ. ಈ ವಿದೇಶಿ ವಿಚಾರದ ಆಲೋಚನಾ ಕ್ರಮ ಮತ್ತು ವಿದೇಶಿ ಸಾಲದ ಮೇಲಿನ ಅವಲಂಬನೆ ಇವೆರಡನ್ನು ನಾವು ಕೈಬಿಡದಿದ್ದರೆ ನಮ್ಮ ಈಗಿನ ಸರ್ಕಾರ ಏನು ತನ್ನ ಈ ವರ್ಷದ ಕಾರ್ಯಕ್ರಮದಲ್ಲಿ ಆಶೋತ್ತರಗಳನ್ನು ಇಟ್ಟುಕೊಂಡಿದೆಯೋ ಆ ಆಶೋತ್ತರಗಳು ಈಡೇರುವುದಿಲ್ಲ. ಮಾನ್ಯ ಅರ್ಥ ಮಂತ್ರಿಗಳು ತಮ್ಮ ಭಾಷಣದಲ್ಲಿ ತಮ್ಮ ಆಶೋತ್ತರಗಳನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಸಾಮಾನ್ಯ ಮನುಷ್ಯ ನಮ್ಮ ಕಾರ್ಯಕ್ರಮದ ಕೇಂದ್ರಬಿಂದು, ಸಮಾನತೆಯ ಬುನಾದಿಯ ಮೇಲೆ, ನಾವು ಒಂದು ಸಮೃದ್ಧ ಸಮಾಜವನ್ನು ಸೃಷ್ಟಿ ಮಾಡುತ್ತೇವೆ ಅನ್ನುವುದು ಈ ಸರ್ಕಾರದ ಆಶೋತ್ತರ. ಆದರೆ ಸರ್ಕಾರ ಹಾಕಿರುವಂತಹ ಮೂಲ ಕಾರ್ಯಕ್ರಮಗಳನ್ನು ನೋಡಿದರೇ ಸರ್ಕಾರದ ಕಾರ್ಯಕ್ರಮಗಳೇ ಈ ಸರ್ಕಾರದ ಆಶೋತ್ತರಗಳನ್ನು ನಾಶ ಮಾಡುವಂಥ ಒಂದು ಅಂಶ ಕಾಣುತ್ತದೆ. ಉದಾಹರಣೆಗೆ ನಮ್ಮ ಅರ್ಥ ಮಂತ್ರಿಗಳು ತಮ್ಮ ಭಾಷಣದಲ್ಲಿ ಒಂದು ಮುಖ್ಯವಾದ ರಾಜ್ಯದ ಸಮಸ್ಯೆಯನ್ನು ಗುರುತಿಸಿದ್ದಾರೆ.

Agriculture in Karnataka is largely dependent on rainfall. ಈ ಮೂರು ದಿವಸದ ಚರ್ಚೆಯಲ್ಲಿ ಕಂಡುಬಂದಿರುವುದು ನಾಲ್ಕು ವರ್ಷದ ಬರಗಾಲದಲ್ಲಿ ೧೧೯೬ ಕೋಟಿ ರೂಪಾಯಿ ಆಹಾರೋತ್ಪಾದನೆಯಲ್ಲಿ ನಷ್ಟ ಆಯಿತು ಎನ್ನುವುದು. ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಮಾಡಿದೆ ಎಂಬುದು ಈ ಕಾರಣ, It is not just that Karnataka agriculture is dependent on rainfall but the entire Karnataka's economy is dependent on rainfall. ಇಂಥ ಒಂದು ಮುಖ್ಯ ಅಂಶವನ್ನು ಮಾನ್ಯ ಅರ್ಥ ಮಂತ್ರಿಗಳು ಗುರುತಿಸಿದ್ದಾರೆ. ಆದರೆ ಈ ಅಂಶವನ್ನು ತೆಗೆದುಹಾಕುವಂಥ ಕಾರ್ಯಕ್ರಮ ಈ ಬಜೆಟ್‌ನಲ್ಲಿ ಕಾಣಿಸುತ್ತಿಲ್ಲ. ಶೇಕಡ ೯೦ ಭಾಗ ಮಳೆ ಆಧಾರಿತ ಬೇಸಾಯ, ನಮ್ಮಲ್ಲಿದೆ. ಶೇಕಡ ೯೦ ಭಾಗ ಮಳೆ ಆಧಾರಿತ ಬೇಸಾಯ, ಅದರಿಂದ ಉದ್ಭವವಾಗತಕ್ಕ ಬರಗಾಲ, ಆ ಬರಗಾಲದಿಂದ ನಮ್ಮ ಅರ್ಥ ವ್ಯವಸ್ಥೆ ಮೇಲೆ ಆಗತಕ್ಕ ಪರಿಣಾಮ ಇದನ್ನು ನಿರ್ಮೂಲನ ಮಾಡಲಿಕ್ಕೆ ಬೇಕಾದಂಥ ಶಾಶ್ವತ ಕಾರ್ಯಕ್ರಮ ಈ ಬಜೆಟ್‌ನಲ್ಲಿ ಕಾಣಿಸುತ್ತಿಲ್ಲ. ಇದಕ್ಕೆ ಕಾರಣ ಇಷ್ಟೆ.

ಶ್ರೀ ಬಿ. ಬಸವಲಿಂಗಪ್ಪ....ತಾವು ಓದಿ. ಇದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ.—ಮಾನ್ಯ ಸಭಾಧ್ಯಕ್ಷರ ಮೂಲಕ ನನ್ನ ವಿನಂತಿ ಏನೆಂದರೆ ನನ್ನ ಹಿರಿಯ ಸ್ನೇಹಿತರಾದ ಬಸವಲಿಂಗಪ್ಪನವರು ಮಧ್ಯೆ ಮಾತನಾಡಬಾರದು.

ಶ್ರೀ ಬಿ. ಬಸವಲಿಂಗಪ್ಪ.—ಆಯಿತು ಮಾತನಾಡಿ ಸ್ವಾಮಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ.— ದಕ್ಕೆ ಕಾರಣ ಇಷ್ಟೆ. ನಾನು ಮೊದಲೇ ಹೇಳಿದಹಾಗೆ ಪಾಶ್ಚಾತ್ಯ ವಿಚಾರಗಳ ಪ್ರಭಾವದಿಂದಾಗಿ ಭಾರಿ ನೀರಾವರಿಗೆ ಹೆಚ್ಚು ಒತ್ತು ಕೊಡುತ್ತಿದ್ದೇವೆ. ಅತ್ಯಂತ ಕನಿಷ್ಟ ಕಾಲದಲ್ಲಿ ಅತ್ಯಂತ ಕನಿಷ್ಟ ಬಂಡವಾಳ ಹೂಡಿಕೆಯಿಂದ ಶೇಕಡ ೯೦ರಷ್ಟು ಮಳೆ ಆಧಾರಿತ ಬೇಸಾಯ ಏನಿದೆ ಅದಕ್ಕೆ ನೀರು ಕೊಡುವಂಥ ಕೆಲಸ ಮಾಡುವುದು ಕಷ್ಟದ ವಿಚಾರ ಅಲ್ಲ. ಆದರೆ ನಮ್ಮ ಯೋಜನೆಗಳು, ನಮ್ಮ ಕಾರ್ಯಕ್ರಮಗಳು ವಿದೇಶಿ ಹಣ, ವಿದೇಶಿ ಸಾಲದ ಅವಲಂಬನೆಯಿಂದಿರುವುದರಿಂದ ವಿದೇಶಿ ಯೋಜಕರು ಏನು ಹೇಳುತ್ತಾರೆ ಆ ಪ್ರಕಾರ ದೇಶೀಯ ಯೋಜಕರು ಕೆಲಸ ಮಾಡುವಂಥ ಒಂದು ಒತ್ತಡಕ್ಕೆ ಸಿಕ್ಕಿ ಈ ದೋಷಗಳು ನಮ್ಮ ಆಯವ್ಯಯದಲ್ಲಿ ಕಾಣಿಸಿಕೊಳ್ಳುತ್ತಿವೆ. ಬರಗಾಲ ಬಂದಿದ್ದಾಗ ಮೂರು ನಾಲ್ಕು ವರ್ಷಗಳಿಂದ ನಾವು ಸರ್ಕಾರಕ್ಕೆ ಶಾಶ್ವತ ಬರಗಾಲ ನಿರ್ಮೂಲನಾ ಕಾರ್ಯಕ್ರಮ ಹಾಕಬೇಕು ಎಂದು ಒತ್ತಾಯ ತರುತ್ತಲೇ ಇದ್ದೇವೆ ಅದಕ್ಕೆ ಬೇಕಾದಂಥ ಒಂದು ವ್ಯವಸ್ಥೆ ಈಗಾಗಲೇ ರಾಜ್ಯ ಸರ್ಕಾರದಲ್ಲಿದೆ. ಅದಕ್ಕೆ ಬೇಕಾದಂಥ ಕೊಳವೆಬಾವಿಗಳನ್ನು ತೆಗೆಯುವಂಥ ಇನ್‌ಫ್ರಾಸ್ಟ್ರಕ್ಚರ್ ನಮ್ಮ ಸರ್ಕಾರದಲ್ಲಿ ಸಂಪೂರ್ಣವಾಗಿದೆ ಸಾಮೂಹಿಕ ಕೊಳವೆ ಬಾವಿಯನ್ನು ತೆಗೆಯುವಂಥ ನೀತಿಯನ್ನು ಸರ್ಕಾರದ ಗಮನಕ್ಕೆ ತಂದವರು ನಾವೇ. ಅತ್ಯಂತ ಗರಿಷ್ಟ ಬಂಡವಾಳದಲ್ಲಿ ಸ್ವಾತಂತ್ರ್ಯ ಬಂದಮೇಲೆ ಶೇಕಡ ೧೦ ಭಾಗ ಕರ್ನಾಟಕದ ಭೂಮಿಯನ್ನು ನೀರಾವರಿ ಮಾಡಿದ್ದೇವೆ ಇನ್ನು ೧೦ ಭಾಗ ನೀರಾವರಿ ಮಾಡುವುದಕ್ಕೆ. ಅಂತರ್‌ಜಲದ ಮೂಲಕ ನೀರಾವರಿ ಮಾಡುವುದಕ್ಕೆ ಮತ್ತು ಅಂತರ್‌ಜಲವನ್ನು ಬಹಳ ಜೋಪಾನವಾಗಿ ಅಭಿವೃದ್ಧಿ ಮಾಡುವುದಕ್ಕೆ ಬೇಕಾದಂಥ ಸ್ಪ್ರಿಂಕ್ಲರ್ ಜೋಡಣೆಗೆ ನಮ್ಮ ಸರ್ಕಾರ ಕೇವಲ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಕರ್ನಾಟಕದಲ್ಲಿ ೪೩ ವರ್ಷಗಳಿಂದ ಏನು ನೀರಾವರಿ ಮಾಡಿದ್ದೆವು ಅದೇ ಪ್ರಮಾಣದ ನೀರಾವರಿಯನ್ನು ಅಂದರೆ ಇನ್ನೂ ಶೇಕಡ ೧೦ರಷ್ಟು ಹೆಚ್ಚಿಗೆ ನೀರಾವರಿಯನ್ನು ೬ ತಿಂಗಳೊಳಗೆ ಮಾಡಬಹುದು. ಮುಂದಿನ ವರ್ಷ ಬರಗಾಲ ಇಲ್ಲದ ರೀತಿಯಲ್ಲಿ ಮಾಡಬಹುದು. ಇಂಥ ಕಾರ್ಯಕ್ರಮದ ಅಭಾವ ಇದೆ ಬಜೆಟ್‌ನಲ್ಲಿ ಆದಕ್ಕೆ ಕಾರಣ ನಾನು ಹೇಳಿದಹಾಗೆ ವಿದೇಶಿ ಸಾಲದ ಮೇಲಿನ ಅವಲಂಬನೆ, ಆದರಿಂದ ಉದ್ಭವವಾದಂಥ ಕಟ್ಟುಪಾಡು. ಇದು ಮೊದಲನೆಯ ವಿರೋಧಾಭಾಸವಾದರೆ ಎರಡನೆಯ ವಿರೋಧಾಭಾಸ ಇನ್ನೊಂದು ಬಜೆಟ್‌ನಲ್ಲಿ ಕಾಣುತ್ತಿದೆ, ಉದ್ಯೋಗ ನೀತಿಯ ಬಗ್ಗೆ ಮಾತನಾಡುತ್ತಾ ಮಾನ್ಯ ಅರ್ಥ ಮಂತ್ರಿಗಳು ೧೨ ಲಕ್ಷ ಜನ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾವಣಿ ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ.

೧೨-೦೦ ಮಧ್ಯಾಹ್ನ

(ಶ್ರೀ ಜಿ. ರಾಜೂಗೌಡ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಮತ್ತೆ ಮುಂದುವರಿಯುತ್ತಾ ಸರಿಯಾದ ಲೆಕ್ಕಾಚಾರ ಮಾಡಿದರೆ ನಿರುದ್ಯೋಗಿಗಳ ಸಂಖ್ಯೆ ಇನ್ನೂ ಹೆಚ್ಚು ಇರಬಹುದು ಎಂದೂ ಸಹ ಅಭಿಪ್ರಾಯಪಟ್ಟಿದ್ದಾರೆ. ನಿಜವಾಗಿಯೂ ನಿರುದ್ಯೋಗ ಕರ್ನಾಟಕದಲ್ಲಿ ಎಷ್ಟು ಇದೆ ಎಂದು ಲೆಕ್ಕ ಹಾಕುವುದು ದೊಡ್ಡ ಕಷ್ಟ ಅಲ್ಲ. ರಾಜ್ಯದ ವಾರ್ಷಿಕ ಸಂಪತ್ತು ಉತ್ಪಾದನೆ ಎಷ್ಟು ಇದೆ ಅದನ್ನು Minimum Wages Act ಪ್ರಕಾರ ಕನಿಷ್ಟ ಕೂಲಿಯಿಂದ ಭಾಗ ಮಾಡಿ ೩೬೫ ದಿವಸಗಳಿಂದ ಭಾಗ ಮಾಡಿದರೆ ಅರೆ ಉದ್ಯೋಗ ಮತ್ತು ನಿರುದ್ಯೋಗದ ಒಟ್ಟು ಮೊತ್ತ ಬರುತ್ತದೆ. ಸಾಮಾನ್ಯ ಭಾಗಾಕಾರದ ಕೆಲಸ. ಅದನ್ನು ಮಾಡಿದರೆ ನನ್ನ ಲೆಕ್ಕಾಚಾರದಲ್ಲಿ ಅರೆ ಉದ್ಯೋಗಿಗಳನ್ನು ಸೇರಿಸಿದರೆ ಸುಮಾರು ೧ ಕೋಟಿ ಜನ ನಿರುದ್ಯೋಗಿಗಳು ಕರ್ನಾಟಕದಲ್ಲಿ ಇದ್ದಾರೆ. ಆದರೆ ನಮ್ಮ ಅರ್ಥ ಮಂತ್ರಿಗಳ ಲೆಕ್ಕಾಚಾರದಲ್ಲಿ ೧೨ ಲಕ್ಷ ಜನ ಮಾತ್ರ ನಿರುದ್ಯೋಗ ಕೇಂದ್ರದಲ್ಲಿ ನೋಂದಾವಣಿ ಮಾಡಿಕೊಂಡಿದ್ದಾರೆ. ಅದು ಏನೇ ಇರಲಿ ಈ ೧೨ ಲಕ್ಷ ಜನರಿಗೆ ಉದ್ಯೋಗ ಕೊಡುವ ಒಂದು ಆರ್ಥಿಕ ನೀತಿ ಈ ಬಡ್ಜೆಟ್‌ನಲ್ಲಿ ಇದೆಯೋ ಎಂದು ನೋಡಬೇಕು. ಇದನ್ನು ನೋಡುವಾಗ ಮತ್ತೆ ನಮ್ಮ ಗಮನಕ್ಕೆ ಬರುವುದು ಈ ಸರ್ಕಾರದ ಕೃಷಿ ನೀತಿ ದೋಷಪೂರಿತವಾಗಿರುವುದು, ಕೈಗಾರಿಕಾ ನೀತಿ ದೋಷಪೂರಿತವಾಗಿರುವುದು. ಕೈಗಾರಿಕಾ ನೀತಿ ಬಗ್ಗೆ ಮಾತನಾಡುತ್ತಾ ಅರ್ಥ ಮಂತ್ರಿಗಳು ಹೇಳುತ್ತಾರೆ, ಈ ವರ್ಷ ಕೂಡಾ electronic and high-tech industry ಗೆ ಆದ್ಯತೆ ಕೊಡುತ್ತೇವೆಂದು. High-tech industries ಇವತ್ತು ಉದ್ಯೋಗವನ್ನು ಸೃಷ್ಟಿ ಮಾಡುವ ಕೈಗಾರಿಕೆಗಳೋ ಅಥವಾ ನಿರುದ್ಯೋಗವನ್ನು ಸೃಷ್ಟಿ ಮಾಡುವ ಕೈಗಾರಿಕೆಗಳೋ ಎಂದು ಗಂಭೀರವಾಗಿ ಆಲೋಚನೆ ಮಾಡಬೇಕು. ಒಂದು ಉದಾಹರಣೆ ಹೇಳುತ್ತೇನೆ. Not so modern industry or we can call it a half-modern industry ಇಂಥದೊಂದು ಮಂಗಳೂರು ಫರ್ಟಿಲೈಸರ್ಸ್ ಎಂಬುದು ನಮ್ಮ ಕರ್ನಾಟಕದಲ್ಲಿ ಇದೆ. ಅದರಲ್ಲಿ ತೊಡಗಿಸಿರುವ ಹಣ ೨೦೦ ಕೋಟಿ ರೂಪಾಯಿಗಳು. ಆದರೆ ಉದ್ಯೋಗ ಸೃಷ್ಟಿ ಆಗಿರುವುದು ೮೮೦.

ಎಂದರೆ ೧ ಕೋಟಿ ರೂಪಾಯಿಗೆ ೪ ಉದ್ಯೋಗ ಸೃಷ್ಟಿ ಮಾಡುವ ಕೈಗಾರಿಕಾ ನೀತಿ. ಇದನ್ನು ಜಾರಿಗೆ ತಂದು ನಾವು ಈ ೧೨ ಲಕ್ಷ ಜನರ ನಿರುದ್ಯೋಗವನ್ನು ನಿವಾರಣೆ ಮಾಡುತ್ತೇವೆಯೋ ? ಅಥವಾ ನಾವು ಬೇರೆ ರೀತಿಯ ಕೈಗಾರಿಕಾ ನೀತಿಯನ್ನು ಅಳವಡಿಸಿಕೊಳ್ಳಬೇಕೆ ? ಆಲೋಚನೆ ಮಾಡಬೇಕು. ಅದೇ ರೀತಿ ಉದ್ಯೋಗವನ್ನು ಸೃಷ್ಟಿ ಮಾಡಬೇಕಾದರೆ ಮತ್ತೊಂದು ಮುಖ್ಯ ಕ್ಷೇತ್ರ ಕೃಷಿ ಕ್ಷೇತ್ರ.ಕೃಷಿ ಕ್ಷೇತ್ರದಲ್ಲಿ ದೋಷಪೂರಿತವಾದ ನಮ್ಮ ನೀರಾವರಿ ನೀತಿಯಿಂದ ಮತ್ತೆ ನಿರುದ್ಯೋಗ ಸೃಷ್ಟಿ ಆಗುತ್ತದೆಯೋ ಹೊರತು ನಿರುದ್ಯೋಗ ನಿವಾರಣೆ ಆಗುವುದಿಲ್ಲ. ನಮ್ಮ ಅರ್ಥ ಮಂತ್ರಿಗಳು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಇನ್ನೂ ೩೦೦೦ ಕೋಟಿ ರೂಪಾಯಿ ವಿದೇಶೀ ಸಾಲ ತಂದು ಇನ್ನು ೨೦ ವರ್ಷಗಳೊಳಗಾಗಿ ಮುಗಿಸಬೇಕೆಂದು ಹೇಳುತ್ತಾರೆ. ಇದು ೨೦ ವರ್ಷಗಳಲ್ಲಿ ಮುಗಿಯುವುದಿಲ್ಲ. ಏಕೆಂದರೆ ಅಲ್ಲಿಯ ಎಂಜಿನಿಯರುಗಳು ಎಲ್ಲಿಯವರೆಗೆ ಅನ್ನ ತಿನ್ನುವುದನ್ನು ಪ್ರಾರಂಭ ಮಾಡುವುದಿಲ್ಲವೋ ಅಲ್ಲಿಯವರೆಗೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಗುವುದಿಲ್ಲ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಪ್ರಾರಂಭ ಆದಾಗಿನಿಂದ ಅಲ್ಲಿರುವ ಎಂಜಿನಿಯರ್‌ಗಳು ಅನ್ನವನ್ನು ತಿನ್ನುವುದು ಬಿಟ್ಟಿದ್ದಾರೆ. ಅವರು ಕಬ್ಬಿಣ ಮತ್ತು ಸಿಮೆಂಟನ್ನು ತಿನ್ನುತ್ತಿರುವುದರಿಂದ ಈ ವಿಳಂಬ ಆಗುತ್ತಾ ಇರುವುದು. ನಾವು ೩೦೦೦ ಕೋಟಿ ವಿದೇಶೀ ಸಾಲ ತಂದರೂ ಇನ್ನೂ ೨೦ ವರ್ಷಗಳಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಗುವುದಿಲ್ಲ. ಆ ಬಗ್ಗೆ ನಾನು ತಮಗೆ ವಿನಂತಿ ಮಾಡಿ ಕೊಳ್ಳುವುದು ಇಷ್ಟೇ. ವಿಶೇಷವಾಗಿ ಈಗ ಇರುವ ಮುಖ್ಯ ಮಂತ್ರಿಯವರಿಗೆ ಏಕೆ ಕೇಳುತ್ತಿದ್ದೇನೆಂದರೆ ಬರಗಾಲದ ಬೇಗೆಯಲ್ಲಿ ಬಹಳ ದಿವಸಗಳಿಂದ ಬೆಂದಿರುವವರು ನಾವು. ಕರ್ನಾಟಕದಲ್ಲಿ ೧೧ ಜನ ಮುಖ್ಯಮಂತ್ರಿಗಳು ಅಧಿಕಾರ ನಡೆಸಿದ್ದಾರೆ. ಈ ೧೧ ಜನ ಮುಖ್ಯ ಮಂತ್ರಿಗಳೂ ಮಳೆ ಆಧಾರಿತ ಪ್ರದೇಶದಿಂದ ಬಂದಿರುವವರು ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಇವರಲ್ಲಿ ೩ ಜನರು ಮಲೆನಾಡಿನಿಂದ ಬಂದಿರುವವರಾದರೆ, ಇನ್ನು ೮ ಜನ ಗುಲ್ಬರ್ಗ, ಬಿಜಾಪುರ ಚಿತ್ರದುರ್ಗ, ಕೋಲಾರ, ಬೆಂಗಳೂರು ಎನ್ನುವ ಮಳೆ ಆಧಾರಿತ ಪ್ರದೇಶದಿಂದ ಬಂದಿರುವವರು ಆಗಿದ್ದಾರೆ. ಏಕೋ ಏನೋ ನಮ್ಮ ದುರಾದೃಷ್ಟ ಖಾಯಂ ಬರಗಾಲ ನಿರ್ಮೂಲನ ಕಾರ್ಯಕ್ರಮ ಗಳನ್ನು ಇವರುಗಳು ಹಾಕಲಿಲ್ಲ. ಆ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಅರ್ಥ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು, ಸಾಮೂಹಿಕ ಕೊಳವೆ ಬಾವಿ ಯೋಜನೆ ಮತ್ತು ಸ್ಪ್ರಿಂಕ್ಲರ್ ಜೋಡಣೆ ಮೂಲಕ ಖಾಯಂ ಬರಗಾಲ ನಿರ್ಮೂಲನ ಕಾರ್ಯಕ್ರಮವನ್ನು ದಯಮಾಡಿ ಮಾಡಬೇಕು. ಸುಮಾರು ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಒಂದು ವರ್ಷದಲ್ಲಿ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರತಕ್ಕ ಸಿಬ್ಬಂದಿಯನ್ನು ಉಪಯೋಗಿಸಿ ಕರ್ನಾಟಕ ರಾಜ್ಯದಲ್ಲಿ ಬರಗಾಲ ಇಲ್ಲದೇ ಇರುವಂತಹ ಸ್ಥಿತಿಯನ್ನು ತಂದುಕೊಡಬಹುದು ಕರ್ನಾಟಕದ ಜನರಿಗೆ ಎಂದು ನಮ್ಮ ರೈತ ಸಂಘದವರು ಲೆಕ್ಕ ಹಾಕಿದ್ದೇವೆ. ಮತ್ತೆ ನೀರಾವರಿ ನೀತಿಯಲ್ಲಿ ನಮ್ಮ ದೇಶೀಯ ನೀರಾವರಿಗೆ ಅಲಕ್ಷ್ಯ ತೋರಿಸಿದ್ದಾರೆ. ಅಂತರಜಲ ಬಳಕೆಗೆ ನಾವು ಪ್ರಯತ್ನ ಮಾಡಿದ್ದೇವೆ ಆದರೆ ಅಂತರಜಲವನ್ನು ರೀಚಾರ್ಜ್ ಮಾಡುವ ಕಾರ್ಯಕ್ರಮ ಏನೇನು ಇಲ್ಲ ಈ ಸರ್ಕಾರಕ್ಕೆ ಮಾಡುವ ವಿನಂತಿ ಏನೆಂದರೆ ಗ್ರೌಂಡ್ ವಾಟರ್ ಮ್ಯಾನೇಜ್‌ಮೆಂಟ್ ಜೊತೆಗೆ ಸರ್ಫೇಸ್ ವಾಟರ್ ಮ್ಯಾನೇಜ್‌ಮೆಂಟ್‌ಗೂ ಆದ್ಯತೆ ಯನ್ನು ಕೊಡಬೇಕು. ಸರ್ಫೇಸ್ ವಾಟರ್ ಮ್ಯಾನೇಜ್‌ಮೆಂಟ್ ಅಂದರೆ ಕೆರೆ ನೀರಾವರಿ ಮಳೆ ನೀರನ್ನು ಉಪಯೋಗ ಮಾಡಿಕೊಳ್ಳುವಂತಹ ಒಂದು ಕಾರ್ಯಕ್ರಮ. ಕೇವಲ ಗ್ರೌಂಡ್ ವಾಟರ್ ಮ್ಯಾನೇಜ್ ಮೆಂಟ್‌ಗೆ ಆದ್ಯತೆಯನ್ನು ಕೊಟ್ಟು ಸರ್ಫೇಸ್ ವಾಟರ್ ಮ್ಯಾನೇಜ್‌ಮೆಂಟನ್ನು ಅಲಕ್ಷ್ಯ ಮಾಡಿದರೆ ಸ್ವಲ್ಪ ದಿವಸಗಳಲ್ಲಿಯೇ ಈಗಿರುವ ಕೊಳವೆ ಬಾವಿಗಳು ಬತ್ತಿ ಹೋಗುತ್ತವೆ, ನೀರು ಇಲ್ಲದ ಕರ್ನಾಟಕ ರಾಜ್ಯವನ್ನು ನಾವು ನೋಡಬೇಕಾಗುತ್ತದೆ. ಈ ಕಾರಣದಿಂದ ಸರ್ಫೇಸ್ ವಾಟರ್ ಮ್ಯಾನೇಜ್‌ಮೆಂಟ್‌ಗೆ ಗಮನವನ್ನು ಕೊಡಬೇಕು. ಈ ಬಜೆಟ್‌ನಲ್ಲಿರುವಂತಹ ಮತ್ತೊಂದು ವಿಪರ್ಯಾಸ ಅಥವಾ ವಿರೋಧಾಭಾಸ ಏನೆಂದರೆ ವಲಸೆಯನ್ನು ತಡೆಯಬೇಕೆಂದು ಮಾತನಾಡುತ್ತಾರೆ. ಆದರೆ ಇಂತಹ ಕೃಷಿ ನೀತಿಯನ್ನು ಇಟ್ಟುಕೊಂಡು ಇಂತಹ ಕೈಗಾರಿಕೆಯ ನೀತಿಯನ್ನು ಇಟ್ಟುಕೊಂಡು ಇಂತಹ ನೀರಾವರಿ ನೀತಿಯನ್ನು ಇಟ್ಟುಕೊಂಡು ಗುಲ್ಬರ್ಗ, ಬಿಜಾಪುರ, ಜಿಲ್ಲೆಗಳಲ್ಲಿ ಗುಳೇ ಹೋಗುವಂತಹದ್ದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಸಮಗ್ರವಾಗಿ ಕೃಷಿ ನೀತಿಯನ್ನು ಬದಲಾವಣೆ ಮಾಡಿದರೆ, ಕೈಗಾರಿಕಾ ನೀತಿಯನ್ನು ಬದಲಾವಣೆ ಮಾಡಿದರೆ, ನೀರಾವರಿ ನೀತಿಯನ್ನು ಬದಲಾವಣೆ ಮಾಡಿದರೆ ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳಿಂದಲೇ ಅಲ್ಲ, ಮಳೆ ಆಧಾರಿತ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಿಂದ ನಗರ ಪ್ರದೇಶಗಳಿಗೆ ವಲಸೆ ಬರುವುದನ್ನು ತಪ್ಪಿಸಲಿಕ್ಕೆ ಸಾಧ್ಯ. ರೈತರ ಬಗ್ಗೆ ಎಲ್ಲಾ ಸ್ನೇಹಿತರು ಮಾತನಾಡಿದ್ದಾರೆ. ಎಲ್ಲಾ ಸ್ನೇಹಿತರಲ್ಲೂ ರೈತರ ಬಗ್ಗೆ ಬಹಳ ಕಳಕಳಿ ಪ್ರಾರಂಭವಾಗಿದೆ. ೧೯೯೦ರ ದಶಕದಲ್ಲಿ ಕರ್ನಾಟಕ ರಾಜ್ಯದ ರೈತರಿಗೆ ಒಂದು ಸುವರ್ಣ ಯುಗ ಪ್ರಾರಂಭವಾಗಿದೆ. ಎಲ್ಲರೂ ಮಾತನಾಡಿದ ಸಮಸ್ಯೆಯನ್ನು ನಾನು ಮಾತನಾಡುವುದಿಲ್ಲ. ಈ ಸಂಬಂಧದಲ್ಲಿ ಒಂದು ವಿಷಯವನ್ನು ಹೇಳುತ್ತೇನೆ. ಈ ದೇಶದ ಪತ್ರಿಕೆಗಳಲ್ಲಿ ಒಂದು ವಿಚಾರ ಪ್ರಕಟವಾಗಿದೆ. ಈ ದೇಶದ ಜವಾಬ್ದಾರಿ ರಾಜಕಾರಣೆ

ಎನಿಸಿಕೊಂಡವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ರೈತರ ಸಾಲ ಮನ್ನಾ ಮಾಡುವ ಬಗ್ಗೆ ಅವರ ಪ್ರಕಾರ ರೈತರ ಸಾಲ ಮನ್ನಾ ಅಭಿವೃದ್ಧಿಯ ಒಂದು ಕಾರ್ಯ ತಂತ್ರ ಅವರಿಗೆ ಸಭಾಧ್ಯಕ್ಷರೇ ನಾನು ಹೇಳುವುದು ಇಷ್ಟೆ, ಇಂತಹ ರಾಜಕಾರಣಿಗಳು ಇಂತಹ ಹೇಳಿಕೆಗಳನ್ನು ಕೊಡುವುದನ್ನು ನಿಲ್ಲಿಸಬೇಕು. ಅಭಿವೃದ್ಧಿಯ ಕಾರ್ಯ ತಂತ್ರ ಅಂದರೆ ಏನು ಅರ್ಥ ? ಈ ದೇಶದ ಅಭಿವೃದ್ಧಿಯಾಗಬೇಕು. ಈ ರೈತನ ದುಡಿಮೆ ಅಭಿವೃದ್ಧಿಯಲ್ಲಿ ತೊಡಗಿಸುವಂತಹ ಒಂದು ತಂತ್ರ ಮಾಡಬೇಕು ಇಂತಹ ಬೇಜವಾಬ್ದಾರಿ ಹೇಳಿಕೆಗಳನ್ನು ಈ ರಾಜಕಾರಣಿಗಳು ಕೊಡಬಾರದು. ಇದಕ್ಕೆ ಭಿನ್ನವಾಗಿ ವಿ.ಪಿ. ಸಿಂಗ್‌ರವರು, ಇಷ್ಟು ದಿವಸ ರೈತ ಮತ್ತು ಅವನ ಕುಟುಂಬದ ಶ್ರಮವನ್ನು ವ್ಯವಸಾಯದ ಖರ್ಚಿನಲ್ಲಿ ಸೇರಿಸುತ್ತಿರಲಿಲ್ಲ, ಇನ್ನು ಮೇಲೆ ಸೇರಿಸುತ್ತೇವೆಂದು ಹೇಳಿ ಅದಕ್ಕೆ ಒಪ್ಪಿದ್ದಾರೆ. ಎಲ್ಲಾ ಸದಸ್ಯರು ರೈತ ಸಮುದಾಯದಿಂದ ಬಂದಿದ್ದಾರೆ. ರೈತ ಮತ್ತು ಅವನ ಕುಟುಂಬ ಕೂಲಿಯಿಲ್ಲದೆ ಈ ದೇಶಕ್ಕೆ ದುಡಿದಿದ್ದಾರೆ. ಅದರ ಜೊತೆಗೇ ವಿ.ಪಿ. ಸಿಂಗ್‌ರವರು ಹೇಳಿಕೆಯನ್ನು ಕೊಟ್ಟಿದ್ದಾರೆ.

> "Managerial and entrepreneural factors will also be included in the cost of cultivation."

ಈ ರೈತರ ಕೂಲಿಯನ್ನು ಇನ್ನು ಮೇಲೆ ಸೇರಿಸುತ್ತೇವೆಂದು ಹೇಳಿದ್ದಾರೆ. ಸರ್ಕಾರ ನಡೆಸುವವರಿಗೂ ವಿ.ಪಿ. ಸಿಂಗ್‌ರಿಗೂ ಈ ಸಭೆಯ ಮೂಲಕ ಹೇಳುತ್ತೇನೆ, ಕೃಷಿಗೆ ಏನೇನು ಮೋಸ ಮಾಡಿದ್ದಾರೆ ಅದನ್ನು ಬಟ್ಟು ಮಾಡಿ ಹೇಳಿ ಅನಂತರ ರೈತರ ಸಾಲ ಮನ್ನಾ ಮಾಡಿ. ಕಾರಣ ಕೊಡದೆ ಸಾಲ ರದ್ದು ಮಾಡಬೇಡಿ.

ಈ ಶಾಸನಸಭೆಯು ಜವಾಬ್ದಾರಿ ಕೂಡ ಕಾರಣಗಳನ್ನು ಕೊಡದೆ ಸಾಲ ರದ್ದು ಮಾಡುವುದಕ್ಕೆ ಬರುವುದಿಲ್ಲ. ಮತ್ತೊಂದು ವಿಷಯ ಈ ಮೂರು ದಿವಸಗಳ ಚರ್ಚೆಯಲ್ಲಿ ನಮಗೆ ಕಂಡುಬಂದಿದ್ದು ಈಗ ಇರತಕ್ಕಂಥ ಸರ್ಕಾರಕ್ಕೆ ರೈತರ ಈಗಾಗಲೇ ಆಗಿರುವ ಸಾಲದ ಬಗ್ಗೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸ್ಪಷ್ಟ ನಿಲುವು ತಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಸ್ಪಷ್ಟ ನಿಲುವನ್ನು ಅದು ತೆಗೆದುಕೊಳ್ಳುತ್ತಿಲ್ಲ. ಆದರೆ ಇದರ ಬಗ್ಗೆ ಸವಿವರವಾದ ಚರ್ಚೆ ಇಟ್ಟುಕೊಂಡಿರುವುದರಿಂದ ಈ ಬಗ್ಗೆ ಈಗ ಮಾತನಾಡುವುದು ಬೇಡ. ನಾನು ಮಾನ್ಯ ಅರ್ಥಮಂತ್ರಿಗಳನ್ನು ವಿನಂತಿಮಾಡಿಕೊಳ್ಳುವುದೇನೆಂದರೆ, ಇನ್ನು ಮುಂದೆ ಸಾಲ ಆಗದೇ ಇರುವಂಥ ಒಂದು ಕಾರ್ಯಕ್ರಮವನ್ನು ತಾವು ಹಾಕುತ್ತೀರಾ? ಏಕೆಂದರೆ ತಮ್ಮ ಭಾಷಣದಲ್ಲಿ ರಿಲೇಟಿವ್ ಪ್ರೈಸ್ ಸ್ಟೆಬಿಲಿಟಿಯ ಮಾತಿದೆ, ಇದು ಬಹಳ ಮುಖ್ಯವಾದ ವಿಚಾರ. ಈ relative price stabilityಯನ್ನು ಯಾವ ರೀತಿ ಅನುಷ್ಠಾನಕ್ಕೆ ತರುವಂಥ ಯೋಚನೆ ಮಾಡಿದ್ದೀರಿ? ಅದನ್ನು ಸಭೆಗೆ ತಾವು ತಿಳಿಸಬೇಕು. This relative price stability between various sectors of activity is a very important subject and a very important factor in bringing in discipline into our economy. ಈ ಶಿಸ್ತು ಇಲ್ಲದೇ ಇರುವುದರಿಂದಲೇ ರೈತನಿಗೆ ಸಾಲ ಬಂದಿರುವುದು ಈ Relative Price Stability ಯನ್ನು ಜಾರಿಗೆ ತರಬೇಕು ಎಂದು ಆಸೆ ಇದ್ದಿಗೆ ಅದನ್ನು ನಾನು ಬಹಳ ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಆದರೆ ಯಾವ ರೀತಿ ಮಾಡಬೇಕು ಎಂದರೆ ಒಂದು ಸಮಿತಿ ಮಾಡಿ ಈ ಸಮಿತಿಗೆ ಕೆಲವು ಕರ್ತವ್ಯಗಳನ್ನು ಒಪ್ಪಿಸಬೇಕು. Industrial and Agricultural prices Fixation Committee ಎಂದು ಕಮಿಟಿ ಮಾಡಿ. ಕಮಿಷನ್ ಮಾಡುವುದಕ್ಕೆ ಅಧಿಕಾರ ಇಲ್ಲದೇ ಇರಬಹುದು. ಆದರೆ ಈ ಕಮಿಟಿ ಮಾಡಿ ಪ್ರಾಮಾಣಿಕವಾಗಿ ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪಾದನಾ ವೆಚ್ಚ ಏನು, ಪ್ರತಿಯೊಂದು ವಸ್ತು ತಯಾರಾಗಬೇಕಾದರೆ ಎಷ್ಟು ವೆಚ್ಚವಾಗುತ್ತದೆ, ಕೈಗಾರಿಕೆಗಳಲ್ಲಿ ಪ್ರತಿಯೊಂದು ಕ್ವಿಂಟಾಲ್ ಕೃಷಿವಸ್ತುಗಳ ಉತ್ಪಾದನೆ ಮಾಡುವುದಕ್ಕೆ ಯಾವ್ಯಾವ ಖರ್ಚು ಏನಾಗುತ್ತದೆ ಎಂದು ಸುಮ್ಮನೆ ತನಿಖೆ ಮಾಡುವಂಥ ರೀತಿ ತನಿಖೆ ಮಾಡಿದರೂ ಸತ್ಯಾಂಶಗಳು ಹೊರಗಡೆ ಬರುತ್ತವೆ. ಆಮೇಲೆ ಈ Relative price Stability ಯನ್ನು ಹೇಗೆ ತರಬಹುದೆಂದು ಆಲೋಚನೆ ಮಾಡಬಹುದು. ಮತ್ತೆ ಇನ್ನೊಂದು ಬಹಳ ಮುಖ್ಯವಾದ ವಿಷಯ. ಕನ್‌ಸ್ಯೂಮರ್ಸ್ ಪ್ರೊಟೆಕ್ಷನ್ ಬಗ್ಗೆ ಹೇಳಬೇಕು. ಈ ಕನ್‌ಸ್ಯೂಮರ್ಸ್ ಪ್ರೊಟೆಕ್ಷನ್ ಎನ್ನುವ ಅರ್ಥವನ್ನು ಸರ್ಕಾರದವರು ಸೀಮಿತಗೊಳಿಸಿದ್ದಾರೆ. ಕಲಬೆರಕೆಯಿಂದ ಬಳಕೆದಾರರ ರಕ್ಷಣೆ ಮಾಡುವಂಥ ಒಂದೇ ಒಂದು ಅಂಶ ನಮ್ಮ ಕನ್‌ಸ್ಯೂಮರ್ಸ್ ಪ್ರೊಟೆಕ್ಷನ್ ಕಾರ್ಯಕ್ರಮದಲ್ಲಿದೆ. ಇದರ ಜೊತೆಗೆ Protecting consumers from price Loot. ಈ ಅಂಶವೂ ಸೇರಬೇಕು. ಏಕೆಂದರೆ ಬೆಂಗಳೂರು ನಗರದಲ್ಲೇ ಒಂದು ವಸ್ತುವನ್ನು 20 ಬೆಲೆಗಳಿಗೆ ಮಾರಾಟ ಮಾಡುವಂಥ ಒಂದು ಅಶಿಸ್ತು ಇದೆ. ಈ ಕಾರಣದಿಂದ ಈ ಬಿಕರಿಬೆಲೆ ಏರಿದೆ ಅದನ್ನು ನಿಗದಿಮಾಡಬೇಕು. Laws fixing not only whole sale price but laws fixing retail price also.

When once you make the rice laws, only then the consumer gets the power to punish the trader. ಇಂತಹ ಒಂದು ಕೆಲಸ ಏನಾದರೂ ಮಾಡುತ್ತೀರಾ ಎಂದು ಆಲೋಚನೆ ಮಾಡಿ. ಒಟ್ಟಾರೆ ನನಗನ್ನಿಸುವುದು ನಿಮ್ಮ ಆದರ್ಶಗಳು ಏನಿವೆ. ನಿಮ್ಮ ಭಾಷಣದಲ್ಲಿ ಮತ್ತು ಸರ್ಕಾರಿ ಕಾರ್ಯಕ್ರಮದಲ್ಲಿ ಹೇಳಿದ್ದೀರಿ. ಒಂದು ಸಮೃದ್ಧವಾದಂಥ ಕರ್ನಾಟಕವನ್ನು ಕಟ್ಟಬೇಕು, ನಿರುದ್ಯೋಗ ನಿರ್ಮೂಲನ ಮಾಡಬೇಕು, ಮಳೆ ಆಧಾರಿತ ಆರ್ಥಿಕ ವ್ಯವಸ್ಥೆಯನ್ನು ಅಪಘಾತದಿಂದ ತಪ್ಪಿಸಬೇಕು ಎಂದು ಆಸೆ ಇದ್ದರೆ ಈ ಕೃಷಿ ನೀತಿ, ಕೈಗಾರಿಕಾ ನೀತಿ ಮತ್ತು ನೀರಾವರಿ ನೀತಿಯನ್ನು ಸರ್ಕಾರದವರು ಆಮೂಲಾಗ್ರವಾಗಿ ಬದಲಾವಣೆ ಮಾಡದೇ ಇದ್ದರೆ ನಿಮ್ಮ ಕಾರ್ಯಕ್ರಮ, ನಿಮ್ಮ ಆದರ್ಶವನ್ನು ನಾಶ ಮಾಡುತ್ತದೆ. It will be a self-defeating budget, unless a new direction is given to the budget. Thank you very much Mr. Speaker.

† ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥಸಚಿವರು ಮಂಡಿಸಿದಂಥ ೧೯೯೦-೯೧ರ ಆಯವ್ಯಯ ಪತ್ರದಲ್ಲಿ ನಾನು ಕಂಡುಕೊಂಡ ಹಾಗೆ ಹೊಸದೇನೂ ಕಾಣುತ್ತಾ ಇಲ್ಲ ನಮ್ಮ ಅರ್ಥಸಚಿವರು ತಮ್ಮ ಬುದ್ಧಿವಂತಿಕೆಯನ್ನೇನೂ ಪ್ರದರ್ಶನ ಮಾಡಿದಹಾಗೆ ಕಾಣುತ್ತಾ ಇಲ್ಲ. ಮುಖ್ಯವಾಗಿ. ಸರ್ಕಾರ ಆಯವ್ಯಯ ಪತ್ರವನ್ನು ಸದನದಲ್ಲಿ ಮಂಡಿಸಿದ ದಿನವನ್ನು ನಾವು ಸಾಮಾನ್ಯವಾಗಿ ಬಜೆಟ್ ದಿನ ಎಂಬುದಾಗಿ ಹೇಳುತ್ತೇವೆ. ಆದರೆ, ಈ ಸಂದರ್ಭದಲ್ಲಿ ಈ ದಿನ ಬಜೆಟ್ ದಿನ ಅಲ್ಲ ಇದು ಟ್ಯಾಕ್ಸೇಷನ್ ದಿನವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಡಳಿತದಲ್ಲಿ ದಕ್ಷತೆ ತಂದು ಸೋರಿ ಹೋಗುವಂಥ ಹಣವನ್ನು ನಿಲ್ಲಿಸಿ, ತನ್ನ ಸಂಪನ್ಮೂಲವನ್ನು ಹೆಚ್ಚಿಸಬೇಕೇ ಹೊರತು ಅನಾವಶ್ಯಕವಾಗಿ ತೆರಿಗೆಗಳನ್ನು ಹಾಕಿ ಸಂಪನ್ಮೂಲಗಳನ್ನು ಹೆಚ್ಚಿಸುವುದು ಖಂಡಿತವಾಗಿಯೂ ನಮ್ಮ ದೇಶದ ಪ್ರಗತಿಯ ದೃಷ್ಟಿಯಿಂದ ಒಳ್ಳೆಯದಲ್ಲ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿರತಕ್ಕ ಮೂಲಭೂತ ಸಮಸ್ಯೆಗಳ ಬಗ್ಗೆ ಈ ಬಜೆಟ್‌ನಲ್ಲಿ ಏನೇನೂ ಪ್ರಸ್ತಾಪವಾಗಿಲ್ಲ. ಈ ರಾಜ್ಯದಲ್ಲಿರತಕ್ಕ ನಿರುದ್ಯೋಗಿ ಯುವಕರ ಬಗ್ಗೆ. ಮಹಿಳೆಯರ ಕಲ್ಯಾಣದ ಬಗ್ಗೆ, ರೈತ ಸಮಸ್ಯೆ ಬಗ್ಗೆ ಒಂದು ಸರಿಯಾದ ಪರಿಣಾಮಕಾರಿಯಾದ ಕಾರ್ಯಕ್ರಮ ಹಾಕಿಕೊಂಡ ಹಾಗೆ ಕಾಣುತ್ತಾ ಇಲ್ಲ. ನಮ್ಮ ರಾಜ್ಯದಲ್ಲಿ ಲಕ್ಷಾಂತರ ನಿರುದ್ಯೋಗಿ ಯುವಕರು ಇದ್ದಾರೆ. ಇವರಿಗೆ ಉದ್ಯೋಗ ಕೊಡುವಂಥ ಯಾವುದೇ ಕಾರ್ಯಕ್ರಮ ಈ ಬಜೆಟ್‌ನಲ್ಲಿ ಕಾಣುತ್ತಾ ಇಲ್ಲ. ಸ್ಟೈಫಂಡರಿ ಪದವೀಧರ ಯುವಕರ ಉದ್ಯೋಗವನ್ನು ಖಾಯಂ ಮಾಡುವುದರ ಬಗ್ಗೆ ಭರವಸೆ ಕೊಟ್ಟಿದ್ದರೂ, ನಿರ್ದಿಷ್ಟವಾದ ದಿನದಲ್ಲಿ ಅವರನ್ನು ಖಾಯಂ ಮಾಡುತ್ತೇವೆಂದು ಹೇಳಿಲ್ಲ. ಆದುದರಿಂದ ಅವರನ್ನು ಖಾಯಂ ಮಾಡುವ ಬಗ್ಗೆ ನಿರ್ದಿಷ್ಟ ದಿನವನ್ನು ಪ್ರಕಟಪಡಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ರಾಜ್ಯದಲ್ಲಿ ಆದ ಕೊಲೆ, ಸುಲಿಗೆ ಮತ್ತು ದರೋಡೆಗಳ ಬಗ್ಗೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಮೂಲ ಕಾರಣ, ಈ ರಾಜ್ಯದಲ್ಲಿರತಕ್ಕ ನಿರುದ್ಯೋಗಿಗಳ ಸಂಖ್ಯೆ. ಆದ್ದರಿಂದ ಇದರ ಬಗ್ಗೆ ಸಂಪೂರ್ಣ ಗಮನಹರಿಸಿ, ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದರ ಮೂಲಕ ಹಾಗೂ ಹೊಸ ಹೊಸ ಹುದ್ದೆಗಳನ್ನು ಸೃಷ್ಟಿ ಮಾಡಿ ಯುವಕರಿಗೆ ಉದ್ಯೋಗ ಕೊಡುವಂಥ ಕಾರ್ಯಕ್ರಮವನ್ನು ಸರ್ಕಾರ ಮಾಡಬೇಕು. ಈ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವ ದಿಕ್ಕಿನಲ್ಲಿ ರೋಜ್‌ಗಾರ್ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರಿಂದ, ನಿರುದ್ಯೋಗ ನಿವಾರಣೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ನಾವೆಲ್ಲ ರೈತರ ಬಗ್ಗೆ ದೊಡ್ಡದಾಗಿ ಮಾತನಾಡುತ್ತೇವೆ. ಬಜೆಟ್‌ನಲ್ಲಿ ಕೃಷಿಗೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ೯೭.೬೦ ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಇದು ಇಡೀ ಯೋಜನೆಯ ಏಳೂವರೆ ಪರ್ಸೆಂಟ್ ಮಾತ್ರ. ನಮ್ಮ ಮಹಾತ್ಮಗಾಂಧೀಜಿಯವರು ಹೇಳಿದ ಹಾಗೆ ನಮ್ಮ ದೇಶದಲ್ಲಿರತಕ್ಕ ರೈತರ ಉದ್ಧಾರವಾಗದೇ, ಹಳ್ಳಿಗಳ ಉದ್ಧಾರವಾಗುವುದಿಲ್ಲ, ಹಳ್ಳಿಗಳ ಉದ್ಧಾರವಾಗದೇ, ದೇಶದ ಉದ್ಧಾರವಾಗುವುದಿಲ್ಲ. ಅದೇ ರೀತಿ ನಮ್ಮ ನಮ್ಮ ರಾಜಕೀಯ ಪಕ್ಷಗಳ ನಾಯಕರೂ ಹೇಳುತ್ತಾ ಬಂದಿದ್ದಾರೆ ಆದರೆ ಈ ಬಜೆಟ್‌ನಲ್ಲಿ ಯಾವುದೇ ಸರಿಯಾದಂಥ ಪ್ರಾಮಾಣಿಕವಾದಂಥ ಕಾರ್ಯಕ್ರಮಗಳನ್ನು ಪ್ರಸ್ತಾಪ ಮಾಡಿಲ್ಲ. ಸ್ವಾತಂತ್ರ್ಯ ಸಿಕ್ಕ ೪೩ ವರ್ಷಗಳಾದರೂ ಕೂಡ ರೈತರ ಸಮಸ್ಯೆಗಳ ವಿಚಾರದಲ್ಲಿ ಯಾವುದೇ ಪ್ರಾಮಾಣಿಕ ಪ್ರಯತ್ನ ಆಗಿಲ್ಲ, ಇದಕ್ಕೆಲ್ಲಾ ನಮ್ಮ ತಪ್ಪು ಧೋರಣೆಯೇ ಕಾರಣ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ರೈತನ ದುಡಿಮೆ ಮೇಲೆ ನಮ್ಮ ದೇಶ ನಿಂತಿದೆ. ಈ ರೈತ ಅನ್ನ ಕೊಟ್ಟಂಥ ಅನ್ನದಾತ. ರೈತ ಕಷ್ಟದಲ್ಲಿರುವಾಗ, ಅವನಿಗೆ ಏನಾದರೂ ಸಹಾಯ ಮಾಡುವುದಕ್ಕೆ ಹಿಂದುಮುಂದು ನೋಡುವಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಈ ಬಜೆಟ್‌ನಲ್ಲಿ ಸಣ್ಣ ರೈತರಿಗೆ ಮತ್ತು ಅತಿ ಸಣ್ಣ ರೈತರ ಬಗ್ಗೆ ಬಡ್ಡಿ ರಿಯಾಯಿತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮಗೆಲ್ಲಾ ಗೊತ್ತಿರುವ ಹಾಗೆ ಹಿಂದಿನ ಸರ್ಕಾರ, ಎಲ್ಲಾ ರೀತಿಯ ಕೃಷಿ ಸಾಲಗಳನ್ನು ಕೊಟ್ಟಿರುವುದರ

ಜೊತೆಗೆ ಈ ಸಾಲದ ಮೇಲಿನ ಬಡ್ಡಿಯನ್ನೂ ಕಡಿಮೆ ಮಾಡಿತ್ತು. ಈ ಸರ್ಕಾರ ಅದನ್ನು ನಿಲ್ಲಿಸಿ, ಸಣ್ಣ ರೈತರಿಗೆ ಮತ್ತು ಅತಿ ಸಣ್ಣ ರೈತರಿಗೆ ಕೆಲವೊಂದು ಬಡ್ಡಿ ರಿಯಾಯಿತಿ ಕೊಡುವಂಥ ಕಾರ್ಯಕ್ರಮ ಹಾಕಿಕೊಂಡಿದೆ. ಇಂತಹ ರೈತರಿಗೆ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ, ಬಡ್ಡಿ ಸಹಾಯಧನ ಒದಗಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ.

ಇದು ಕೇವಲ ರೈತರು ಕಣ್ಣೊರೆಸುವ ಒಂದು ತಂತ್ರವೇ ಹೊರತು, ಪ್ರಾಮಾಣಿಕವಾದ ಕಳಕಳಿಯನ್ನು ಸರಕಾರ ಇದರ ಬಗ್ಗೆ ವ್ಯಕ್ತಮಾಡಿಲ್ಲ. ಚುನಾವಣಾ ಕಾಲದಲ್ಲಿ ಎಲ್ಲಾ ರಾಜಕೀಯ ಪಕ್ಷದವರೂ ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ, ಬೇರೆ ಬೇರೆ ಪಾರ್ಟಿಯವರೂ ಇವನ್ನು ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅವರ ಪಕ್ಷದವರು ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಇದನ್ನು ಪ್ರಸ್ತಾಪ ಮಾಡದಿದ್ದರೂ ಕೂಡಾ ಚುನಾವಣಾ ಪ್ರಚಾರ ಸಭೆಗಳಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಇವತ್ತು ಈ ಒಂದು ದಿಕ್ಕಿನಲ್ಲಿ ಈ ಬಜೆಟ್‌ನಲ್ಲಿ ಯಾವುದೇ ಪ್ರಯತ್ನ ಮಾಡದಿರುವುದು, ನಿಜವಾಗಿಯೂ ರೈತರ ಬಗ್ಗೆ ಸರಕಾರಕ್ಕೆ ಕಳಕಳಿ ಇಲ್ಲ ಎಂಬುದನ್ನು ತೋರಿಸುತ್ತದೆ. ನಮ್ಮ ರಾಜ್ಯದಲ್ಲಿ ಕಬ್ಬು ಬೆಳೆಯುತಕ್ಕವರಿಗೆ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿ ದರ ನಿಗದಿ ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಟನ್‌ಗೆ ೩೨೫ ರೂಪಾಯಿ ಇದ್ದರೆ, ಅದು ಬೀದರ್ ಕಡೆ ಸುಮಾರು ೪೦೦ ರೂಪಾಯಿ ಇದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಕಡೆಯ ಪಕ್ಷ ಟನ್‌ಗೆ ೪೫೦ ರೂಪಾಯಿನಂತೆ ಒಂದೇ ರೀತಿಯ ದರ ನಿಗದಿ ಮಾಡಬೇಕೆಂದು ಸರಕಾರವನ್ನು ನಾನು ಒತ್ತಾಯಿಸುತ್ತೇನೆ. ಮುಖ್ಯವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಕೋ, ರಬ್ಬರ್‌ಹಾಲು ಮತ್ತು ಗೋಡಂಬಿ ಇದನ್ನು ಅರಣ್ಯ ಉತ್ಪನ್ನ ಎಂದು ಸರಕಾರ ಘೋಷಣೆ ಮಾಡಿದೆ. ಇದರಿಂದ ಅಲ್ಲಿನ ಕೃಷಿಕರಿಗೆ ತುಂಬಾ ಅನ್ಯಾಯವಾಗಿದೆ. ಏತಕ್ಕೆಂದರೆ ಈ ಉತ್ಪಾದನೆ ಏನಿದೆ ಇದನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದಕ್ಕೆ ನಿರ್ಬಂಧ ಇದೆ. ಆದ್ದರಿಂದ ಇದನ್ನು ಬೆಳೆಯುತಕ್ಕಂಥ ಕೃಷಿಕರಿಗೆ ತುಂಬಾ ಅನ್ಯಾಯ ಆಗುತ್ತಿದೆ. ಅರಣ್ಯ ಉತ್ಪತ್ತಿಯಿಂದ ಹೊರತು ಪಡಿಸಬೇಕೆಂದು ಈ ಸಂದರ್ಭದಲ್ಲಿ ಸರಕಾರವನ್ನು ಒತ್ತಾಯಿಸುತ್ತೇನೆ. ಬಜೆಟ್‌ನಲ್ಲಿ ಅಕ್ರಮವಾಗಿ ಸಾಗುವಳಿ ಮಾಡಿದ ಭೂಮಿಯನ್ನು ಸಕ್ರಮಗೊಳಿಸುವ ಬಗ್ಗೆ ಹೇಳಿದ್ದಾರೆ, ಇದು ನಿಜಕ್ಕೂ ಸ್ವಾಗತಾರ್ಹ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರದ ಮಟ್ಟದಲ್ಲಿ ಕುಮ್ಕಿ ಭೂಮಿ ಎಂದು ಏನು ಹೇಳುತ್ತಾರೆ ಆದರಲ್ಲಿ ಲಕ್ಷಾಂತರ ಬಡ ಕುಟುಂಬಗಳು ಮನೆ ಕಟ್ಟಿ ಜೀವನ ಸಾಗಿಸುತ್ತಿದ್ದಾರೆ. ಆದರೆ ಅವರಿಗೆ ಸರಕಾರದಿಂದ ಯಾವುದೇ ಸವಲತ್ತು ಸಿಗುವ ಹಾಗೆ ಇಲ್ಲ. ಈ ಅಕ್ರಮ ಭೂಮಿಯನ್ನು ಸಕ್ರಮಗೊಳಿಸಿದರೆ ಅವರ ತೊಂದರೆ ಪರಿಹಾರವಾಗುತ್ತದೆ. ಆದುದರಿಂದ ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸದ ಮಟ್ಟ ಬಹಳ ಕುಸಿದಿದೆ. ನಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ದೇಶದ ಭವಿಷ್ಯವನ್ನು ನಿರ್ಮಾಣ ಮಾಡತಕ್ಕ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ವ್ಯವಸ್ಥೆ ಇಲ್ಲ. ೫೦ ಮಕ್ಕಳಿಗೆ ಒಬ್ಬರು ಉಪಾಧ್ಯಾಯರು ಇರಬೇಕೆಂದು ಸರಕಾರದ ನಿಯಮ ಇದ್ದರೂ ೧೦೦-೨೦೦ ಮಕ್ಕಳು ಇರುವ ಕಡೆ ೨ ೩ ಜನ ಉಪಾಧ್ಯಾಯರು ಇರುತ್ತಾರೆ. ಇದರಿಂದ ಖಂಡಿತವಾಗಿ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಸಿಗುವುದಕ್ಕೆ ಸಾಧ್ಯ ಇಲ್ಲ. ಹಾಗೆಯೇ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಶಾಲೆಗಳಿಗೆ ಕಟ್ಟಡ ಇಲ್ಲ, ಅಧ್ಯಾಪಕರು ಇಲ್ಲ ಅಧ್ಯಾಪಕರು ಇದ್ದರೂ ಕೂಡಾ ಪೀಠೋಪಕರಣಗಳು ಇಲ್ಲ. ಈ ರೀತಿ ಅವ್ಯವಸ್ಥೆ ತುಂಬಿದ ವಿದ್ಯಾ ಸಂಸ್ಥೆಗಳನ್ನು ಸಂಪೂರ್ಣವಾಗಿ ಬದಲಾವಣೆ ಮಾಡುವುದು ತುಂಬಾ ಅವಶ್ಯಕ. ಇದರ ಬಗ್ಗೆ ಸರಿಯಾಗಿ ಗಮನಹರಿಸಬೇಕೆಂದು ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ. ಸಧ್ಯದಲ್ಲಿ ಅಧ್ಯಾಪಕರನ್ನು ನೇಮಕ ಮಾಡುವುದು ತುಂಬಾ ಮುಖ್ಯವಾದುದು ಇನ್ನೊಂದು ವಿಷಯವನ್ನು ಇಲ್ಲಿ ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಸುತ್ತೇನೆ. ೧೯೮೯ರ ಅಕ್ಟೋಬರ್‌ನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಬಿ.ಬಿ.ಎ. ವಿದ್ಯಾರ್ಥಿಗಳ ಉತ್ತರ ಪತ್ರಿಕೆ ಕಂಟ್ರೋಲರ್ ಆಫ್ ಎಕ್ಸಾಮಿನೇಷನ್ಸ್ ಕಚೇರಿಯಿಂದ ಕಳುವಾಗಿದೆ. ಇವತ್ತಿನವರೆಗೂ ಅವರ ಫಲಿತಾಂಶ ಬಂದಿಲ್ಲ. ಸುಮಾರು ೭ ವಿದ್ಯಾರ್ಥಿಗಳ ಆನ್ಸರ್ ಪೇಪರ್ ಕಳೆದು ಹೋದ ಕಾರಣ ಆ ೭ ವಿದ್ಯಾರ್ಥಿಗಳ ಫಲಿತಾಂಶ ಇದುವರೆಗೆ ಬಂದಿಲ್ಲ. ವಿಶ್ವವಿದ್ಯಾನಿಲಯದ ಈ ತೊಂದರೆಯಿಂದಾಗಿ ಈ ೭ ಜನ ವಿದ್ಯಾರ್ಥಿಗಳು ಕಷ್ಟ ಪರಿಸ್ಥಿತಿಯನ್ನು ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇದರ ಬಗ್ಗೆ ತನಿಖೆ ನಡೆಸಿ ವಿದ್ಯಾರ್ಥಿಗಳಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ ನಾನು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡುವುದೇನೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಹಳೇ ಮಂಗಳೂರು ಬಳಿ ಇರುವ ಮರಳದಿನ್ನೆ

ಯಲ್ಲಿ ವಾಸ ಮಾಡತಕ್ಕಂಥ ಮೀನುಗಾರರಿಗೆ ಬಹಳ ತೊಂದರೆಯಾಗಿದೆ. ಸರ್ಕಾರ ಅವರಿಗೆ ವಾಸ ಮಾಡತಕ್ಕ ಅಡಿಸ್ಥಳಕ್ಕೆ ದರ ೧೦ ಪಟ್ಟು ಜಾಸ್ತಿ ಮಾಡಿದ್ದಾರೆ ಇದನ್ನು ಕಡಿಮೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈ ಹಿಂದೆಯೂ ಸಹ ಈ ಬಗ್ಗೆ ಒತ್ತಾಯಗಳು ಬಂದಿವೆ. ಈ ಬಗ್ಗೆ ಸರ್ಕಾರ ಯೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಕೇರಳ ಮತ್ತು ಕರ್ನಾಟಕದ ಗಡಿ ಪ್ರದೇಶ. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರವಾದ ವಿಟ್ಲ ಗಡಿ ಪ್ರದೇಶಕ್ಕೆ ಬರುತ್ತದೆ. ಕೇರಳ ಕಡೆಯಿಂದ ನಮ್ಮ ರಾಜ್ಯಕ್ಕೆ ಸುಮಾರು ೫ ಕಿಲೋಮೀಟರ್ ದೂರದಲ್ಲಿ ಅಲ್ಲಿನ ಜನರು ಆಹಾರ ಪದಾರ್ಥಗಳನ್ನು ಸಾಗಿಸಲು ನಿರ್ಬಂಧ ಇದೆ. ಇದರಿಂದ ಅಲ್ಲಿಯ ಜನರಿಗೆ ಬಹಳ ತೊಂದರೆಯಾಗಿದೆ. ಅಲ್ಲಿನ ಪೋಲೀಸರು ಆಹಾರ ಪದಾರ್ಥಗಳನ್ನು ಸಾಗಿಸುವುದಕ್ಕೆ ಬಹಳ ತೊಂದರೆ ಕೊಡುತ್ತಿದ್ದಾರೆ. ರೇಶನ್ ಅಂಗಡಿಗಳವರಿಗೆ ವ್ಯಾಪಾರಿಗಳಿಗೆ ಕೂಡಾ ಸಾಕಷ್ಟು ತೊಂದರೆ ಕೊಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ರಾಜ್ಯದಲ್ಲಿರತಕ್ಕ ಎಲ್ಲಾ ಗ್ರಾಮಗಳನ್ನು ಒಂದೇ ಸಮನಾಗಿ ಕಾಣಬೇಕು. ಯಾವ ಸಂದರ್ಭಗಳಲ್ಲಿಯೇ ಆಗಲೀ ಆಹಾರ ಪದಾರ್ಥಗಳನ್ನು ಸಾಗಿಸುವುದಕ್ಕೆ ತೊಂದರೆ ಮಾಡಬಾರದು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಖ್ಯವಾಗಿ ಈಗ ಸೇಂದಿ ಮಾರಾಟ ನಿಷೇಧವನ್ನು ಜಾರಿಗೆ ತಂದಿರುವುದರಿಂದ ಬಹಳ ತೊಂದರೆಯಾಗುತ್ತದೆ. ಈ ಪಾನ ನಿಷೇಧವನ್ನು ಎಲ್ಲಾ ಜನರು ಸ್ವಾಗತ ಮಾಡಿದ್ದಾರೆ. ಆದರೆ ಇದು ನಮ್ಮ ಜಿಲ್ಲೆಯ ಮಟ್ಟಿಗೆ ಬಹಳ ತೊಂದರೆಯಾಗುತ್ತದೆ. ನಮ್ಮಲ್ಲಿ ಬಿಲ್ಲವ ಸಮಾಜದ ಕುಟುಂಬದವರು ಮರದಿಂದ ಸೇಂದಿಯನ್ನು ತೆಗೆದು ವ್ಯಾಪಾರ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇಂಥ ಸಾವಿರಾರು ಕುಟುಂಬಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವೆ. ಈ ಕಾನೂನು ಜಾರಿಗೆ ಬಂದರೆ ಅನೇಕ ಕುಟುಂಬಗಳು ನಿರ್ಗತಿಕರಾಗಿ ಬೀದಿಪಾಲಾಗುತ್ತಾರೆ. ಈ ನಿಷೇಧ ಮಾಡಿದರೆ ಬಹಳ ತೊಂದರೆಯಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಸೇಂದಿಗೆ ಕಲಬೆರಕೆ ಮಾಡುವುದಿಲ್ಲ. ನಮ್ಮಲ್ಲಿ ಶುದ್ಧ ಸೇಂದಿಯನ್ನು ಕೊಡುತ್ತಾರೆ. ಇದು ಆರೋಗ್ಯದ ದೃಷ್ಟಿಯಿಂದಲೂ ಸಹ ಒಳ್ಳೆಯದೆಂದು ತಜ್ಞರ ಅಭಿಪ್ರಾಯ ಇದೆ. ಅರ್ರ್ಯಾಕ್‌ಗೆ ಕಲಬೆರಕೆ ಮಾಡಿ ಮಾರಾಟ ಮಾಡುತ್ತಿದ್ದಾರೆ. ಆದರೆ ಸೇಂದಿ ಮಾತ್ರ ಶುದ್ಧವಾಗಿ ಸಿಗುತ್ತದೆ. ಇದರಲ್ಲಿ ಕಲಬೆರಕೆ ಆಗುತ್ತದೆಂದು ಸರ್ಕಾರ ತಿಳಿದು ಇದನ್ನು ಬ್ಯಾನ್ ಮಾಡುತ್ತಿದ್ದಾರೆ. ಈ ಬ್ಯಾನ್ ಅನ್ನು ತೆಗೆದುಹಾಕಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಸರ್ಕಾರ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಈಗ ತಾವು ತಂದಿರುವ ನಿರ್ಬಂಧವನ್ನು ಒಂದೆರಡು ವರ್ಷಗಳ ಕಾಲ ಮುಂದಕ್ಕೆ ಹಾಕಿ ಈ ವ್ಯವಸ್ಥೆಗೆ ಏನಾದರೂ ಒಂದು ಬದಲಿ ವ್ಯವಸ್ಥೆ ಮಾಡಿ ಆಮೇಲೆ ಬೇಕಾದರೆ ನಿಷೇಧವನ್ನು ಜಾರಿಗೆ ತನ್ನಿ ಎಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಟ್ಟ ಅಣೆಕಟ್ಟು ಇದೆ. ಇದಕ್ಕೆ ೧೯೭೭ ಮತ್ತು ೭೮ರಲ್ಲಿ ಸುಮಾರು ೩.೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅಣೆಕಟ್ಟು ಕಟ್ಟಿದ್ದಾರೆ. ಇದರಿಂದ ಸುಮಾರು ೮೦೦ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಆದರೆ ಈ ಅಣೆಕಟ್ಟಿನಲ್ಲಿ ಇರುವ ನೀರು ಉಪ್ಪು ನೀರು. ಈ ನೀರು ಕೃಷಿಗೆ ಯೋಗ್ಯವಲ್ಲ. ಇದರಿಂದ ಭೂಮಿ ಎಲ್ಲಾ ಕೃಷಿ ಆಗದ ರೀತಿಯಲ್ಲಿ ಸವಳು ಭೂಮಿಯಾಗಿದೆ. ಇದರ ಬಗ್ಗೆ ಕೂಡಲೆ ತನಿಖೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸಿ ಇದುವರೆಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

೧೨–೩೦ ಪಿ. ಎಂ.

† ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).— ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಮಂತ್ರಿಗಳಾದ ಶ್ರೀಮಾನ್ ರಾಜಶೇಖರ ಮೂರ್ತಿಯವರು ಇಲ್ಲಿ ಏನು ತಮ್ಮ ಬಡ್ಜೆಟ್ಟನ್ನು ಮಂಡಿಸಿದ್ದಾರೆ, ಅದು ನೀರಸದಾಯಕವಾಗಿದೆ ಹಾಗೂ ರೈತ ವಿರೋಧಿ ಬಜೆಟ್ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಏನೂ ಹೇಳಲಿಲ್ಲವೆಂದು ಹೇಳಿದ್ದಾರೆ. ಅಷ್ಟೇ ಅಲ್ಲ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತೇವೆಂದು ಮಾತ್ರ ಹೇಳಿದ್ದೇವೆಂದು ಹೇಳಿದ್ದಾರೆ. ಇದರಿಂದ ಕನಿಷ್ಟ ೪೦ ಪರ್ಸೆಂಟ್ ಭಾಗ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಅವರು ಒಪ್ಪಿಕೊಂಡ ಹಾಗೆ ಆಯಿತು. ನಮ್ಮ ಪಕ್ಷದವರು ಹಾಗೂ ಬಿ. ಜೆ. ಪಿ., ಪಕ್ಷದವರು ಅನೇಕ ಸಾರಿ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಒತ್ತಾಯ ಮಾಡಿದ್ದರೂ ಕೂಡ ಈ ಬಜೆಟ್‌ನಲ್ಲಿ ರೈತರ ಸಾಲ ಮನ್ನಾ ಮಾಡುವುದಕ್ಕಾಗಿ ೧೦ ಕೋಟಿ ೨೦ ಕೋಟಿ ರಿಸರ್ವ್ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಹೇಳಿಲ್ಲ. ಬಡ್ಡಿಯನ್ನು ರದ್ದು ಮಾಡುತ್ತೇವೆಂದು ಸಹ ಹೇಳಿಲ್ಲ. ಕಾಂಗ್ರೆಸ್ ಪಕ್ಷದ ಅನೇಕ ಮಾನ್ಯ ಸದಸ್ಯರುಗಳು ಮಾತನಾಡುವಾಗ ಜನತಾದಳ ಸರ್ಕಾರ ಇದ್ದಾಗ ರೈತರುಗಳ ಕತ್ತು ಹಿಸುಕಿದ್ದಾರೆಂದು, ಜನತಾದಳ

ದವರು ರೈತರುಗಳಿಗೆ ಮಾಡಿರುವ ಅನ್ಯಾಯಗಳನ್ನು ನಾವು ಸರಿಪಡಿಸುತ್ತಿದ್ದೇವೆ, ರಿಪೇರಿ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದರು. ಸನ್ಮಾನ್ಯರೇ, ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ, ರೈತನ ಬಗ್ಗೆ ಅಭಿಮಾನವನ್ನು ಇಟ್ಟು ರೈತರುಗಳಿಗೆ ಸರ್ಕಾರ ಸಹಾಯ ಮಾಡಿದೆ ಎಂದರೆ ಅದು ನಮ್ಮ ಜನತಾದಳ ಸರ್ಕಾರ ಮಾತ್ರ. ೧೯೮೩-೮೪ ರಲ್ಲಿ ರೈತರು ಮಾಡಿದ್ದ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುವುದಕ್ಕಾಗಿ ೧೬೦ ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಹಾಗೂ ವಿಫಲವಾದ ಭಾವಿಗಳಿಗಾಗಿ ರೈತರುಗಳ ಸುಮಾರು ೪೮ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದೆ. ಹೀಗಿದ್ದರೂ ಕೂಡ ಮಾನ್ಯ ಸದಸ್ಯರಾದ ಕರಿಯಣ್ಣನವರು ನಿನ್ನೆ ದಿವಸ ಮಾತನಾಡುವಾಗ ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟನ್ನು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದು ಬಡ ರೈತರುಗಳಿಗೆ ಸಹಾಯ ಮಾಡಿತ್ತೆಂದು ಹೇಳಿದರು. ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಏನಾದರೂ ಪರಿಣಾಮಕಾರಿಯಾಗಿ ಇಂಪ್ಲಿಮೆಂಟ್ ಆಗಿದೆ ಎಂದರೆ ಅದರ ಹೆಸರು ಮಾನ್ಯ ದಿವಂಗತ ದೇವರಾಜ ಅರಸ್ ಅವರಿಗೆ ಸಲ್ಲಬೇಕೇ ಹೊರತು ಕಾಂಗ್ರೆಸ್ ಪಕ್ಷಕ್ಕೆ ಅಲ್ಲವೆಂದು ನನ್ನ ಸ್ಪಷ್ಟ ಅಭಿಪ್ರಾಯ. ಆಮೇಲೆ ಹಿರಿಯ ಸದಸ್ಯರಾದಂಥ ಮಾನ್ಯ ಯಾಹ್ಯಾ ಸಾಹೇಬರು ಮಾತನಾಡುತ್ತಾ ಜನತಾದಳ ಸರ್ಕಾರ ಸರಿಯಾಗಿ ಕೆಲಸ ಮಾಡಿಲ್ಲವೆಂದು ಹೇಳಿದ್ದಾರೆ. ಜನತಾದಳ ಸರ್ಕಾರ ಅಧಿಕಾರವನ್ನು ತೆಗೆದುಕೊಳ್ಳುವ ಮುನ್ನ ಗುಂಡೂರಾಯರ ಸರ್ಕಾರದಲ್ಲಿ ೩೬೦ ಕೋಟಿ ರೂಪಾಯಿಗಳು ಓವರ್ ಡ್ರಾಫ್ಟ್ ಇತ್ತು ಅಷ್ಟು ಓವರ್ ಡ್ರಾಫ್ಟನ್ನು ಅವರು ಬಿಟ್ಟು ಹೋಗಿದ್ದರು. ಅದನ್ನು ಜನತಾದಳ ತೀರಿಸಿತೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆಮೇಲೆ ಇವತ್ತಿನ ದಿವಸ ರೈತ ಬೆಳೆದ ಮಾಲಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಕಬ್ಬಿನ ಬೆಲೆ ನೋಡಿ, ಮೆಣಸಿನಕಾಯಿ ಬೆಲೆ ನೋಡಿ, ಬೆಲ್ಲದ ಬೆಲೆ ನೋಡಿ ಈ ರೀತಿಯ ದರದಿಂದ ರೈತನಿಗೆ ಸಹಾಯವಾಗುವುದಿಲ್ಲ. ಆದ್ದರಿಂದ ಈ ದಿನ ಇವರು ಮಂಡಿಸಿರತಕ್ಕ ಬಜೆಟನ್ನು ರೈತ ವಿರೋಧಿ ಬಜೆಟ್ ಎಂದು ನಾನು ಕರೆಯುತ್ತಿದ್ದೇನೆ. ಮತ್ತೆ ಕೈಗಾರಿಕೆ ವಿಚಾರದಲ್ಲಿ ಹೇಳಬೇಕಾದರೆ ಅನೇಕ ದೋಷಪೂರಿತವಾದಂಥ ಕೈಗಾರಿಕಾ ಬಜೆಟ್ ಇದು. ಕೈಗಾರಿಕೆಗಳು ಅನೇಕ ಜಾಗಗಳಲ್ಲಿ ಆಗುತ್ತಿವೆ. ಕೋಲಾರ, ಬೆಂಗಳೂರು, ಹೊಸೂರು, ಆನೇಕಲ್ ತಾಲ್ಲೂಕುಗಳಲ್ಲಿ ಆಗುತ್ತಿರುವ ಕೈಗಾರಿಕೆಗಳಲ್ಲಿ ಕನ್ನಡಗರಿಗೆ ಮತ್ತು ಸ್ಥಳೀಯರಿಗೆ ಉದ್ಯೋಗಗಳನ್ನು ಕೊಡಬೇಕೆಂದು ಷರತ್ತು ವಿಧಿಸಿ ಇವರು ಲೈಸನ್ಸ್‌ಗಳನ್ನು ಕೊಡುತ್ತಿಲ್ಲ. ವಿಕ್ರಾಂತ್ ಟೈರ್ ಫ್ಯಾಕ್ಟರಿಯನ್ನು ಯು.ಪಿ. ಕಡೆಯಿಂದ ಬಂದವರು ನಡೆಸುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ವೆಸ್ಟ್ ಬೆಂಗಾಲ್‌ನಿಂದ ಬಂದವರು ಫ್ಯಾಕ್ಟರಿ ಮಾಡಿದ್ದಾರೆ. ಈ ಫ್ಯಾಕ್ಟರಿಗಳಲ್ಲಿ ವೆಸ್ಟ್ ಬೆಂಗಾಲ್ ಕಡೆಯಿಂದ ಬಂದವರೇ ಕೆಲಸ ಮಾಡುತ್ತಿದ್ದಾರೆ, ತಮಿಳುನಾಡಿನವರು ಕೆಲಸ ಮಾಡುತ್ತಿದ್ದಾರೆ. ನಾನು ಆ ಜನರಿಗೆ ವಿರೋಧಿಯಲ್ಲ, ಆದರೆ, ಸ್ಥಳೀಯರಿಗೆ ಮತ್ತು ಕನ್ನಡದವರಿಗೆ ಉದ್ಯೋಗ ಕೊಡುವುದಕ್ಕೆ ಪ್ರಥಮ ಆದ್ಯತೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತೆ ಉದ್ಯೋಗಾವಕಾಶದ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಹೇಳುತ್ತಾ ಹೊಸ ಉದ್ಯೋಗಗಳನ್ನು ಕೊಡುವುದಕ್ಕೆ ಪ್ರಯತ್ನಿಸುತ್ತೇವೆಂದು ಹೇಳಿದ್ದಾರೆ, ಆದರೆ ಒಂದು ಕಡೆ ಮೂರು ಸಾವಿರ ನೌಕರರುಗಳನ್ನು ಕಿತ್ತುಹಾಕುತ್ತೇವೆಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ಈ ಬಜೆಟ್‌ನಲ್ಲಿ ಉದ್ಯೋಗಕ್ಕಾಗಿ ಹೆಚ್ಚು ಒತ್ತನ್ನು ಕೊಡುತ್ತೇವೆಂದು ಹೇಳಿ ಇವರು ದ್ವಿಮುಖ ನೀತಿಯನ್ನು ಅನುಸರಿಸುತ್ತಿದ್ದಾರೆ.

ಇನ್ನು ಆಹಾರಧಾನ್ಯಗಳ ವಿಚಾರದಲ್ಲಿ ಹೇಳುವುದಾದರೆ, ಪಡಿತರ ವ್ಯವಸ್ಥೆಯಲ್ಲಿ ಕೊಡುತ್ತಿದ್ದ ಆಹಾರಧಾನ್ಯಗಳ ವಿತರಣೆ ಏನೇನೂ ಸಮರ್ಪಕವಾಗಿಲ್ಲ. ಅದರಲ್ಲಿ ಅನೇಕ ವಿಧವಾದಂಥ ಲೋಪದೋಷಗಳು ಇವೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಿಗೆ ನಮ್ಮ ಸರಕಾರ ಇದ್ದಾಗ ಸಾಗಾಣಿಕೆಯ ವೆಚ್ಚವನ್ನು ಭರಿಸಲು ಸ್ವಲ್ಪ ಸಹಾಯವನ್ನು ಕೊಡುತ್ತಾ ಇದ್ದರು. ನಮ್ಮ ಕೋಲಾರ ಜಿಲ್ಲೆಯಲ್ಲಿ ೧ ಕೋಟಿ ೩ ಲಕ್ಷ ರೂಪಾಯಿಗಳ ಸೊಸೈಟಿಗಳ ಬಾಕಿ ಇದೆ. ಒಂದೊಂದು ಸಹಕಾರಿ ಸಂಸ್ಥೆಯಲ್ಲಿ ೧೩-೧೪ ಲಕ್ಷ ರೂಪಾಯಿಗಳ ಬಾಕಿ ಇದೆ. ಬಜೆಟ್‌ನಲ್ಲಿ ಕೋಲಾರ ಜಿಲ್ಲೆಗೆ ಯಾವುದೇ ಯೋಜನೆಯಡಿಯಲ್ಲಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿಲ್ಲ. ಆದರೆ ಅದೇ ಮೈಸೂರು ಜಿಲ್ಲೆಗೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಮಾನ್ಯ ಹಣಕಾಸಿನ ಸಚಿವರು ಬಿಡುಗಡೆ ಮಾಡಿದ್ದಾರೆ. ಮಾನ್ಯ ರಾಜಶೇಖರ್ ಮೂರ್ತಿಯವರು ಅದೇ ಜಿಲ್ಲೆಯವರಾದ ಕಾರಣದಿಂದ ಹೀಗೆ ಆಗಿರಬಹುದೆಂದು ನನಗನ್ನಿಸುತ್ತದೆ. ಬಡವರಿಗೆ ಸಿಗಬೇಕಾದ ಆಹಾರಧಾನ್ಯಗಳು ಸರಾಗವಾಗಿ ಸಿಗಬೇಕು. ಒಂದು ವೇಳೆ ಸರ್ಕಾರಕ್ಕೆ ಬಡವರ ಬಗ್ಗೆ ಕಾಳಜಿ ಇದ್ದರೆ ತತ್‌ಕ್ಷಣ ಆ ಹಣವನ್ನು ಅತಿ ಶೀಘ್ರವಾಗಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಹಸಿರು ಕಾರ್ಡ್‌ಗಳ ವಿತರಣೆಯಲ್ಲಿ ಅನೇಕ ಲೋಪದೋಷಗಳು ಇವೆ. ಇದು ಮೊದಲೂ ಕೂಡ ಆಗಿರಬಹುದು. ಆದರೆ ಅದನ್ನು ಸರಿಪಡಿಸುವಂತೆ ಸಾರ್ವಜನಿಕರು ಸಾಕಷ್ಟು ರೀತಿಯಲ್ಲಿ ಮನವಿಯನ್ನು ಕೊಟ್ಟರೂ ಕೂಡ ಇದುವರೆಗೆ ಅದನ್ನು ಪುನರ್‌ಪರಿಶೀಲನೆ ಮಾಡಿಲ್ಲ. ಆ ರೀತಿಯಾಗಿ ಅವ

ಹಂಚಿಕೆಯನ್ನು ಪುನರ್‌ಪರಿಶೀಲನೆ ಮಾಡಿ ನಿಜವಾಗಿ ಯಾರಿಗೆ ಹಸಿರು ಕಾರ್ಡ್‌ಗಳು ತಲುಪಬೇಕೋ ಅವರಿಗೆ ಮಾತ್ರ ತಲುಪಿ ಅವರಿಗೆ ಅನುಕೂಲವಾಗುವಂತೆ ನೋಡಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯಾಮಂದಿರ ಯೋಜನೆಯಲ್ಲಿ ಸಾಕಷ್ಟು ಸಮಸ್ಯೆಗಳು ಇವೆ. ಅನೇಕ ತಾಲ್ಲೂಕಗಳಲ್ಲಿ ಇವೊತ್ತು ೩೦೦-೪೦೦ ಶಾಲೆಗಳು ಇವೆ. ಪ್ರತಿಯೊಂದು ಶಾಲೆಗೂ ಭೇಟಿ ಕೊಡಬೇಕು ಎಂದರೆ ಕನಿಷ್ಟ ಪಕ್ಷ ವಿದ್ಯಾಧಿಕಾರಿಯವರಿಗೆ ಒಂದು ವರ್ಷ ಬೇಕಾದೀತು. ಆದರೆ ಅವರಿಗೆ ಹೋಗಲು ಬರಲು ವಾಹನದ ವ್ಯವಸ್ಥೆಯು ಇಲ್ಲವಾದ ಕಾರಣ ಅವರಿಗೆ ಎಲ್ಲಾ ಶಾಲೆಗಳಿಗೂ ಭೇಟಿ ಕೊಡುವುದು ಕಷ್ಟವಾಗಿದೆ, ಇವೊತ್ತು ತಾಲ್ಲೂಕು ಮಟ್ಟದಲ್ಲಿ ಬಿ.ಡಿ.ಓ.ಗೆ ಜೀಪ್ ಇದೆ. ಸೆರಿಕಲ್ಚರ್ ಡೆವಲಪ್‌ಮೆಂಟ್ ಆಫೀಸರ್‌ಗೆ ಜೀಪ್ ಇದೆ, ಫುಡ್ ಆಫೀಸರ್‌ಗೆ ಜೀಪ್ ಇದೆ. ಅದೇ ೩೦೦-೪೦೦ ಶಾಲೆಗಳನ್ನು ನೋಡಿಕೊಳ್ಳಬೇಕಾದಂಥ ವಿದ್ಯಾಧಿಕಾರಿಗಳಿಗೆ ಜೀಪ್‌ನ ವ್ಯವಸ್ಥೆಯೂ ಇಲ್ಲ. ಶಾಲೆಗಳ ಸೂಕ್ತ ತಪಾಸಣೆ ಆಗಬೇಕಾದ ಅವರಿಗೂ ಒಂದು ಜೀಪ್ ಕೊಡಿಸಬೇಕಾಗಿ ಕೇಳಿಕೊಳ್ಳುತ್ತೇನೆ. ನಮ್ಮ ಜನತಾದಳ ಸರಕಾರ ಆಡಳಿತದಲ್ಲಿದ್ದಾಗ ಸುಮಾರು ೯೩೭ ಬಸ್‌ನ ಮಾರ್ಗಗಳನ್ನು ಚಾಲನೆಯಲ್ಲಿ ಇಟ್ಟಿದ್ದರು. ರಾಷ್ಟ್ರಪತಿ ಆಳ್ವಿಕೆ ಬಂದಮೇಲೆ ಬಹಳಷ್ಟು ಮಾರ್ಗಗಳನ್ನು ಕಿತ್ತುಹಾಕಿದರು. ಇದನ್ನು ತೆಗೆದು ಹಾಕಿದ್ದು ಏಕೆ ಅಂದರೆ ಅದರಿಂದ ಲಾಸ್ ಆಗುತ್ತಾ ಇದೆ ಎನ್ನುವ ಉತ್ತರ ಬರುತ್ತದೆ. ಹಾಗಾದರೆ ಸರಕಾರಕ್ಕೆ ಎಲ್ಲಾ ಬಸ್ ಮಾರ್ಗಗಳಿಂದಲೂ ಲಾಭ ಬರುತ್ತಾ ಇದೆಯೋ ? ಬಸ್‌ಗಳನ್ನು ಓಡಿಸುವುದು ಜನರಿಗೆ ಅನುಕೂಲತೆಗಳನ್ನು ಕಲ್ಪಿಸಿ ಕೊಡುವುದಕ್ಕಾಗಿ ಅಲ್ಲವೇ ? ಜನರಿಗೆ ಬಸ್‌ನ ಸೌಲಭ್ಯವನ್ನು ಕಲ್ಪಿಸಿಕೊಟ್ಟು ಸಂಚಾರಕ್ಕೆ ಅನುಕೂಲತೆಯನ್ನು ಮಾಡಿಕೊಡಬೇಕಾದುದು ಸರಕಾರದ ಕೆಲಸ ಅಲ್ಲವೆ ? ನಷ್ಟವುಂಟು ಮಾಡುವ ಎಲ್ಲಾ ಮಾರ್ಗಗಳನ್ನು ಬಂದ್ ಮಾಡಿದರೆ, ಹೇಗೆ ? ಕೈಗಾರಿಕೆಗಳಲ್ಲಿಯೂ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಸರಕಾರದವರು ಅನುಭವಿಸಿದ್ದಾರೆ. ಅಂದಮಾತ್ರಕ್ಕೆ ಅವುಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ ? ಜನರ ಸಮಾಜಿಕವಾದ ಒಂದು ಆಸೆಗೆ, ಅವರಿಗೆ ಅನುಕೂಲ ಆಗಬೇಕೆಂಬ ಉದ್ದೇಶಕ್ಕಾಗಿ, ಅವರ ಆಕಾಂಕ್ಷೆಗಳಿಗೆ ಸ್ಪಂದಿಸುವ ಸಲುವಾಗಿ ಇಂಥ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಆದುದರಿಂದ ನಷ್ಟವಾಗಿದೆ ಎಂದು ಬಸ್‌ಮಾರ್ಗವನ್ನು ನಿಲ್ಲಿಸುವುದು ಸರಿ ಅಲ್ಲ ಎಂದು ಹೇಳಿ, ಜನತಾ ದಳ ಸರಕಾರದವರು ಓಡಿಸುತ್ತಿದ್ದ ಎಲ್ಲಾ ಬಸ್ ಮಾರ್ಗಗಳಲ್ಲಿ ಸಂಚಾರ ಸೌಲಭ್ಯಕ್ಕಾಗಿ ಬಸ್‌ಗಳನ್ನು ಓಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಕೋಲಾರ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಯುತ್ತೇವೆ. ನವೆಂಬರ್ ಡಿಸೆಂಬರ್ ತಿಂಗಳಗಳಲ್ಲಿ ಯಾವುದೋ ಒಂದು ರೋಗದಿಂದ ಇಡೀ ಬೆಳೆ ನಾಶವಾಗಿದೆ. ಈಗ ಒಂದು ಎಕರೆ ಬೆಳೆಯುವುದಕ್ಕೆ ೮ ರಿಂದ ೯ ಸಾವಿರ ಖರ್ಚುಮಾಡಿ ಬಿತ್ತನೆ ಬೀಜ ಕೊಂಡುಕೊಳ್ಳುವ ಸಂದರ್ಭ ಬಂದಿದೆ. ಆದ್ದರಿಂದ ಈ ಸಂದರ್ಭದಲ್ಲಿ ರೈತರಿಗೆ ಹೇಗೆ ಸಹಾಯ ಮಾಡಬೇಕು ಎಂದು ಸರ್ಕಾರ ಯೋಚನೆ ಮಾಡಬೇಕು. ನನ್ನ ಕ್ಷೇತ್ರವಾದ ಬೇತಮಂಗಲದಲ್ಲಿ ಒಂದು ಕಡೆ ಆಂಧ್ರಪ್ರದೇಶ ಬರುತ್ತದೆ. ಇನ್ನೊಂದು ಕಡೆ ಮದ್ರಾಸು ಇದೆ. ಪಕ್ಕದ ಆಂಧ್ರದವರು ತನ್ನ ಪ್ರದೇಶದಲ್ಲಿ ಎಲ್ಲಾ ರಸ್ತೆಗಳನ್ನು ಸರಿಪಡಿಸಿಕೊಂಡು ಬಸ್ಸುಗಳಲ್ಲಿ ಓಡಿಸುತ್ತಿದ್ದಾರೆ. ಹಾಗೆಯೇ ಮದ್ರಾಸಿನವರು ತಮ್ಮ ರಸ್ತೆಗಳನ್ನು ಸರಿಪಡಿಸಿಕೊಂಡು ಬಸ್ಸುಗಳನ್ನು ಓಡಿಸುತ್ತಿದ್ದಾರೆ. ನಮ್ಮ ಕರ್ನಾಟಕದಲ್ಲಿ ಕ್ಯಾಸಂಬೆಳ್ಳ ಎಂಬ ಒಂದು ಪ್ರದೇಶದಲ್ಲಿ ನೆಹರೂರವರು ಬಂದಿದ್ದಾಗ ರಸ್ತೆಗಳಿಗೆ ಡಾಂಬರು ಹಾಕಿಸಿದುದ್ದು ಇವತ್ತಿನವರೆಗೂ ಮತ್ತೆ ಹಾಕಿಲ್ಲ. ನನ್ನ ಕ್ಷೇತ್ರದಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಬೇಕು ಮತ್ತು ರಾಮಸಾಗರ ಕೆರೆಗೆ ಚಿಕ್ಕದುಡೆಯನ್ನು ಕಟ್ಟಬೇಕು ಏಕೆಂದರೆ ಅದಕ್ಕೆ ಬರುವ ನೀರು ಅನ್ಯಾಯವಾಗಿ ಹೋಗುತ್ತಿದೆ. ದಂಡೆ ಕಟ್ಟಿದರೆ ಆ ನೀರು ಜನರ ಉಪಯೋಗಕ್ಕೆ ಬರುತ್ತದೆ. ಜೊತೆಗೆ ನನ್ನ ಕ್ಷೇತ್ರದಲ್ಲಿ ಭೋಧಿಕೋಟೆ ಎಂಬ ಸ್ಥಳ ಇದ್ದು ಅದು ಹೈದಾರಾಲಿ ಹುಟ್ಟಿದ ಸ್ಥಳ ಅಲ್ಲಿ ಒಂದು ಪ್ರವಾಸಿ ಧಾಮವನ್ನು ಮಾಡಬೇಕು. ಅಲ್ಲೇ ಹತ್ತಿರದಲ್ಲೇ ಮಾರ್ಕಂಡೇಯ ಡ್ಯಾಂ ಇದ್ದು ಅದನ್ನು ಉಪಯೋಗ ಮಾಡಿಕೊಳ್ಳಬೇಕು. ರಾಜ್ಯದ ಪ್ರಥಮ ಮುಖ್ಯ ಮಂತ್ರಿಗಳಾದ ಕೆ. ಸಿ ರೆಡ್ಡಿಯವರು ಕೋಲಾರ ಜಿಲ್ಲೆಯವರು. ವಿಧಾನ ಸೌಧದ ಮುಂದೆ ಅವರ ಪ್ರತಿಮೆಯನ್ನು ಅನಾವರಣ ಮಾಡಿ ಮತ್ತು ಸಿಟಿಯ ಯಾವುದಾದರೊಂದು ಭಾಗಕ್ಕೆ ಅವರ ಹೆಸರನ್ನು ಇಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಲ್ಯಾಂಡ್ ರಿಫಾರ್ಮ್ ಆಕ್ಟನ್ನು ತಂದ ಕರ್ನಾಟಕದ ಹಿಂದುಳಿದ ಜನಗಳ ನೇತಾರ ಎಂದು ಹೆಸರಾಗಿದ್ದ ಶ್ರೀ ದೇವರಾಜ ಅರಸರ ವಿಗ್ರಹವನ್ನು ವಿಧಾನಸೌಧದ ಮುಂದೆ ನಿಲ್ಲಿಸುವುದಾಗಿ ಶ್ರೀ ಗುಂಡೂರಾಯರ ಸರ್ಕಾರ ಹೇಳಿತ್ತು. ಆದರೆ ಅವರು ಅದನ್ನು ಮಾಡಲಿಲ್ಲ. ಈಗ ಮತ್ತೆ ಕಾಂಗ್ರೆಸ್ ಸರ್ಕಾರ ಬಂದಿದೆ. ದೇವರಾಜ ಅರಸರ ಪ್ರತಿಮೆಯನ್ನು ವಿಧಾನಸೌಧದ ಮುಂದೆ ಅನಾವರಣ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಅಧ್ಯಕ್ಷರೇ ಈ ಸರ್ಕಾರದ ೧೧೦ ದಿನಗಳಲ್ಲಿ ಎರಡು ರಾಜ್ಯಪಾಲರ ಭಾಷಣ, ಒಂದು ಆಯವ್ಯಯವನ್ನು ಮಂಡಿಸುವ ಅವಕಾಶ ಸರ್ಕಾರಕ್ಕೆ ಒದಗಿದೆ. ನಾನಾದರೂ ಹಣಕಾಸಿನ ಸಚಿವರು ಹೇಳಿರುವ ವಿಚಾರಗಳ ಬಗ್ಗೆ ಗಮನ ಹರಿಸುವುದಕ್ಕಿಂತ ಮೊದಲು ಒಂದೆರಡು ವಿಚಾರಗಳ ಬಗ್ಗೆ ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಪ್ರಪ್ರಥಮವಾಗಿ ಗಡಿ ಪ್ರದೇಶದ ಅಭಿವೃದ್ಧಿಯ ಬಗ್ಗೆ ನಾನು ಸರ್ಕಾರಕ್ಕೆ ಮೇಲಿಂದ ಮೇಲೆ ಮನವಿಗಳನ್ನು ಮಾಡಿದಾಗ ಸರ್ಕಾರ ಗಡಿ ಪ್ರದೇಶದ ಅಭಿವೃದ್ಧಿಗಾಗಿ ೫ ಕೋಟಿ ರೂಪಾಯಿಗಳನ್ನು ಇಟ್ಟಿದೆ. ಇಡೀ ಕರ್ನಾಟಕದಲ್ಲಿ ಅನೇಕ ತಾಲ್ಲೂಕುಗಳಲ್ಲಿ ಗಡಿ ಪ್ರದೇಶಗಳು ಬರುತ್ತವೆ. ಹಣಕಾಸಿನ ಸಚಿವರ ಈ ನಿರ್ಧಾರವನ್ನು ನಾನು ಅಭಿಮಾನದಿಂದ ಮೆಚ್ಚುತ್ತೇನೆ. ಅದಕ್ಕಾಗಿ ಅತ್ಯಂತ ಅಭಿನಂದನೆಗಳು. ಆದರೆ ೫ ಕೋಟಿ ರೂಪಾಯಿ ಏನು ಇದೆ ಅದು ಯಾವುದೇ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಬಗೆಹರಿಸುವುದಕ್ಕೆ ಸಾಕಾಗುವುದಿಲ್ಲ. ಹೈದರಾಬಾದ್-ಕರ್ನಾಟಕದ ಪ್ರದೇಶಕ್ಕೆ ತಾವು ಏನು ನಲವತ್ತು ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಅದನ್ನು ನಾನು ಸ್ವಾಗತಿಸುತ್ತೇನೆ ಅದಕ್ಕೆ ತಾವು ಇನ್ನೂ ಹೆಚ್ಚಿಗೆ ಕೊಟ್ಟರೂ ನನ್ನ ಅಭ್ಯಂತರವಿಲ್ಲ. ಈ ಗಡಿ ಪ್ರದೇಶಗಳು ಹರಕು ಮುರುಕಾಗಿ ಅಲ್ಲಲ್ಲಿ ಸೇರಿ ಹೋಗಿವೆ ನನ್ನ ತಾಲ್ಲೂಕು ಒಂದು ಗಡಿ ಪ್ರದೇಶ. ನನ್ನ ತಾಲ್ಲೂಕನ್ನು ತಾವು ನೋಡಿದ್ದೀರಿ. ಆ ತಾಲ್ಲೂಕಿನ ಪರಿಸ್ಥಿತಿ ಬಹುಶಃ ತಮಗೆ ಗೊತ್ತಿರಬಹುದು. ಅಲ್ಲಿನ ಜನ ನರಕದಲ್ಲಿ ಬದುಕುತ್ತಿದ್ದಾರೆ ಎಂದು ಹೇಳಿದರೆ ತಾವು ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಕಾವೇರಿ ಯೋಜನೆಯಲ್ಲಿ ನಮ್ಮ ಚಾಮರಾಜನಗರವನ್ನು ಸೇರಿಸಿದ್ದೀರಿ. ಅದನ್ನು ನಾನು ಸ್ವಾಗತಿಸುತ್ತಾ ಚಾಮರಾಜನಗರ ಒಂದೇ ಅಲ್ಲ ಟಿ. ನರಸೀಪುರ ಬರುತ್ತದೆ. ಸಂತೇಮಾರನಹಳ್ಳಿ ಬರುತ್ತದೆ, ಅಲ್ಲಿಂದ ಮುಂದೆ ಚಾಮರಾಜನಗರಕ್ಕೆ ಹೋಗುತ್ತದೆ. ಅದನು ಆದಷ್ಟು ಬೇಗ ತಾವು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಮಾಡುತ್ತೀರೆಂದು ಭಾವಿಸುತ್ತೇನೆ. ತಾವು ಮುಖ್ಯವಾದ ಪಟ್ಟಣಗಳನ್ನು ಇಲ್ಲಿ ಕೊಟ್ಟಿದ್ದೀರಿ. ಮುಖ್ಯವಾದ ಪಟ್ಟಣಗಳನ್ನು ಕೊಟ್ಟು ಚಾಮರಾಜನಗರವನ್ನು ಬಿಟ್ಟುಬಿಟ್ಟಿದ್ದಾರೆಂದು ನನಗೆ ಸ್ವಲ್ಪ ಭಯವಾಯಿತು. ನಾನು ತಮ್ಮ ಹತ್ತಿರ ಬಂದು ಚಾಮರಾಜನಗರವನ್ನು ಬಿಟ್ಟಿದ್ದೀರಲ್ಲಾ ಎಂದು ಹೇಳಿದೆ. ಮುಖ್ಯವಾದ ಪಟ್ಟಣಗಳಲ್ಲಿ ಅತಿ ಮುಖ್ಯವಾದದ್ದು ಚಾಮರಾಜನಗರ ನನ್ನ ದೃಷ್ಟಿಯಲ್ಲಿ. ಅಲ್ಲಿ ಎಷ್ಟು ಬರಗಾಲ ಇದೆ ? ಈ ಗಡಿ ಪ್ರದೇಶಕ್ಕೆ ತಾವು ಏನು ಹಣವನ್ನು ಇಟ್ಟಿದ್ದೀರಿ ? ಈ ಕಾವೇರಿ ಯೋಜನೆಯಲ್ಲಿ ನನ್ನ ತಾಲ್ಲೂಕನ್ನು ಸೇರಿಸಿರುವುದಕ್ಕೆ ನಿಜವಾಗಿಯೂ ತಮಗೆ ಅಭಿನಂದನೆಯನ್ನು ಸಲ್ಲಿಸಬೇಕು. ಯಾವುದೇ ನಿರ್ವಂಚನೆಯಿಂದಲಾಗಲೀ ಪೂರ್ವಗ್ರಹಪೀಡಿತರಾಗದೇ ಈ ಗಡಿ ಪ್ರದೇಶಕ್ಕೆ ಕನಿಷ್ಟ ಐವತ್ತು ಕೋಟಿ ರೂಪಾಯಿಗಳನ್ನಾದರೂ ಇಡಬೇಕು ಎಂದು ನಾನು ಅಧ್ಯಕ್ಷರ ಮೂಲಕ ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ೫೦ ಕೋಟಿ ರೂಪಾಯಿ ಇಟ್ಟರೆ ರಾಕ್ಷಸನ ಹೊಟ್ಟೆಗೆ ಸ್ವಲ್ಪ ಅರೆ ಮಜ್ಜಿಗೆ ಕೊಟ್ಟ ಹಾಗೆ ಆಗುತ್ತದೆ. ಇವತ್ತು ಗಡಿ ಪ್ರದೇಶಕ್ಕೆ ತೀವ್ರತರವಾದಂಥ ತೊಂದರೆ ಇದೆ. ನನ್ನ ಚಾಮರಾಜನಗರದಲ್ಲಿ ಅಭಿವೃದ್ಧಿ ಕಡಿಮೆ ಇದೆ ಆದರೆ ತಾಳವಾಡಿಯಲ್ಲಿ ಅಭಿವೃದ್ಧಿ ಜಾಸ್ತಿಯಾಗಿದೆ. ತಾಳವಾಡಿಯಲ್ಲಿ ೬೪ ರಲ್ಲಿ ನಾನು ಚಳುವಳಿ ಮಾಡಿದಾಗ ಅನಂತರ ಪ್ರತಿಹಳ್ಳಿಹಳ್ಳಿಗೂ ಟಾರ್ ರೋಡ್ ಆಗಿದೆ, ರಸ್ತೆಯಾಗಿದೆ. ನೀರಿನ ವ್ಯವಸ್ಥೆಯಾಗಿದೆ, ಸೇತುವೆಗಳಾಗಿದೆ. ನಮಗೆ ನಾಚಿಕೆಯಾಗುತ್ತದೆ ಆ ಪಕ್ಕದ ಗಡಿಯಲ್ಲಿರತಕ್ಕಂಥ ನಮ್ಮ ಚಾಮರಾಜನಗರ ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿದೆ ಆದುದರಿಂದ ಇವತ್ತಿನ ಪರಿಸ್ಥಿತಿಯಲ್ಲಿ ಗಡಿ ಪ್ರದೇಶದ ಅಭಿವೃದ್ಧಿಗೆ ೫೦ ಕೋಟಿ ರೂಪಾಯಿಯನ್ನು ಸರ್ಕಾರದವರು ಇಡಬೇಕು ಎಂದು ಹೇಳಿ ಸರ್ಕಾರದವರಲ್ಲಿ ಕಳಕಳಿಯಿಂದ ನಾನು ಅವರಲ್ಲಿ ಮನವಿ ಮಾಡುತ್ತೇನೆ.

ಕನ್ನಡದ ಬೆಳವಣಿಗೆಯ ಬಗ್ಗೆ ಹಂಪಿಯಲ್ಲಿ ವಿಶ್ವವಿದ್ಯಾನಿಲಯವನ್ನು ಮಾಡುತ್ತೇನೆಂದು ಹೇಳಿ ಸರ್ಕಾರದವರು ಒಂದು ನಿರ್ಧಾರವನ್ನು ಕೈಗೊಂಡಿದ್ದಾರೆ, ಸ್ವಾಗತ. ಆದರೂ ಸಹ ಕನ್ನಡದ ಬೆಳವಣಿಗೆಯ ಬಗ್ಗೆ ಸರ್ಕಾರ ತೀವ್ರತರವಾದಂಥ ಒಂದು ಪರಿಣಾಮಕಾರಿಯಾದಂಥ ಯೋಜನೆಯನ್ನು ಇನ್ನೂ ಮಾಡುವುದಕ್ಕಾಗಿಲ್ಲ. ಹರಿದು ಹಂಚಿ ಹೋಗಿದ್ದಂಥ ಇಡೀ ಕನ್ನಡದ ನೆಲದ ಜನ ಒಂದಾಗಿ ೧೯೫೬ ಈ ರಾಜ್ಯಕ್ಕೆ ಏಕೀಕರಣವಾದಂಥ ದಿನ ನವೆಂಬರ್ ಒಂದು. ಅಲ್ಲಿಂದ ಇಲ್ಲಿಯವರೆಗೂ ತಮಗೆ ನಾನು ಹೇಳುತ್ತಿದ್ದೇನೆ. ಭಾಷೆಯ ಬೆಳವಣಿಗೆಯು ಸರಿಯಾಗಿ ಆಗಿಲ್ಲ ಮತ್ತು ಅಂದು ಮುಕ್ಕೋಟಿ ಕನ್ನಡಿಗರ ಒಂದೇ ಒಂದು ಘೋಷಣೆಯು ಏನಿತ್ತು, ಅದು ಇವತ್ತು ನಾಲ್ಕು ಕೋಟಿ ಎಂದು ಹೇಳುತ್ತಾರೆ ಈ ನಾಲ್ಕು ಕೋಟಿ ಎಂದು ಹೇಳುತ್ತಾರಲ್ಲಾ, ಇದು ಕನ್ನಡಿಗರಿಂದ ಹೆಚ್ಚಾದದ್ದಲ್ಲ. ಕರ್ನಾಟಕದ ಸುತ್ತ ಇರತಕ್ಕಂಥ, ಬೇರೆ ರಾಜ್ಯದಿಂದ ಒಂದು ಕೋಟಿ ಜನ ಬಂದಿದ್ದಾರೆ. ಈ ಒಂದು ಕೋಟಿ ಬಂದಿರತಕ್ಕಂಥ ಜನತೆಯನ್ನು, ಈ ರೀತಿ ವಲಸೆ ಬಂದಿರತಕ್ಕಂಥ ಜನತೆಯನ್ನು ತಡೆಗಟ್ಟುವುದರಲ್ಲಿ ಪರಿಣಾಮಕಾರಿಯಾಗಿ ಯಾವುದೇ ಸರ್ಕಾರಗಳು ಕೆಲಸವನ್ನು ಮಾಡಿಲ್ಲ, ಈ ಒಂದು ಕೋಟಿ

ಜನರಲ್ಲಿ ಕನಿಷ್ಟ ಅರವತ್ತು ಲಕ್ಷ ಜನ ಮತದಾರರಾಗಿದ್ದಾರೆ. ಈ ರೀತಿಯಾದರೆ ನಮ್ಮ ಕರ್ನಾಟಕದ ಜನತೆ ಹಿತವನ್ನು ಯಾವ ರೀತಿಯಲ್ಲಿ ನೋಡಿಕೊಳ್ಳುವುದಕ್ಕಾಗುತ್ತದೆ ? ಒಂದು ಕೋಟಿ ಜನ ಹೊರಗಡೆಯಿಂದ ಬಂದಿರುವುದರಿಂದ ಬಹಳ ಅತ್ಯಂತ ಗಂಭೀರವಾದ ಪರಿಸ್ಥಿತಿ ಇಡೀ ರಾಜ್ಯದಲ್ಲಿ ಉದ್ಭವವಾಗಿದೆ. ಈ ಪರಿಸ್ಥಿತಿಗೆ ಮಂಗಳೂರು ಜಿಲ್ಲೆ ಸೇರಿದೆ, ಕೊಡಗು, ಮೈಸೂರು, ಬೆಳಗಾಂ, ರಾಯಚೂರು ಜಿಲ್ಲೆಗಳೂ ಸೇರಿವೆ. ಬೆಂಗಳೂರಂತೂ ಸಮಾಗ್ರವಾಗಿ ಬೇರೆ ಭಾಷೆಗಳವರಿಂದ ತುಂಬಿದೆ ಬೇರೆಯವರು ನಮಗೆ ಎರಡನೇ ಭಾಷೆಯನ್ನು ಮಾಡಬೇಕು, ಬೆಂಗಳೂರನ್ನು ಕೇಂದ್ರಾಡಳಿತಕ್ಕೆ ಸೇರಿಸಬೇಕು ಎನ್ನುವ ಮಟ್ಟಿಗೆ ಮಾತನಾಡತಕ್ಕಂಥ ಪರಿಸ್ಥಿತಿಗೆ ಬಂದಿದೆ.

ಅದು ಅತ್ಯಂತ ಶೋಚನೀಯವಾದ ವಿಚಾರ. ಈ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ. ಕರ್ನಾಟಕ ರಾಜ್ಯ ಮತ್ತೊಂದು ಅಸಾಂ ಆಗುತ್ತದೆ ಎಂದು ಅತ್ಯಂತ ಗಂಭೀರವಾಗಿ ಹೇಳುತ್ತಿದ್ದೇನೆ. ಅಸ್ಸಾಂ ಪರಿಸ್ಥಿತಿ ಇಲ್ಲಿಯೂ ಉದ್ಭವವಾಗುತ್ತದೆ. ಅಸ್ಸಾಂ ಚಳುವಳಿ ಕರ್ನಾಟಕದಲ್ಲಿ ಸಹ ಪ್ರಾರಂಭ ಆಗುವ ಕಾಲ ಸನ್ನಿಹಿತ ಆಗಿದೆ ಎಂದು ಅತ್ಯಂತ ವಿಷಾದದಿಂದ ಹೇಳುತ್ತಿದ್ದೇನೆ. ಇಲ್ಲಿ ಕನ್ನಡಿಗರು ಎರಡನೆಯವರಾಗಿ ಬೇರೆ ಭಾಷೆಯವರು ಇಲ್ಲಿ ಮೊದಲನೆಯವರಾಗತಕ್ಕ ಸ್ಥಿತಿ ಇವೊತ್ತು ಉದ್ಭವವಾಗುತ್ತದೆ. ಈ ಪರಿಸ್ಥಿತಿಯನ್ನು ತೀವ್ರತರವಾಗಿ ಸರ್ಕಾರ ಗಮನಿಸದೆ ಹೋದರೆ ನಾವೇ ಕನ್ನಡಿಗರನ್ನು ದುರಂತಕ್ಕೆ ತಳ್ಳಿದ ಹಾಗೆ ಆಗುತ್ತದೆ. ನಾವೇ ಕನ್ನಡಿಗರಿಗೆ ವಿಷವನ್ನು ಉಣಿಸಿದ ಹಾಗೆ ಆಗುತ್ತದೆ. ಯಾವ ಕನ್ನಡ ನಾಡು ಬೆಳೆಯಬೇಕೆಂದು ಹೇಳಿದ್ದೆವೋ, ಯಾವ ಸಿರಿಗನ್ನಡಂ ಗೆಲ್ಗೆ, ಕನ್ನಡ ನಾಡಿನ ಬಾವುಟ ಹಾರಲಿ, ಬಾಳಲಿ, ಹಾರಿಸಿ ಏರಿಸಿ ಕನ್ನಡದ ಬಾವುಟ ಎಂದು ಸಾಹಿತಿಗಳು, ಕವಿಗಳು ಹಾಡಿ ಹರಸಿದ್ದರು ಅದು ಇವೊತ್ತು ಬೇರೆ ಭಾಷೆಯವರ ಕೈಗೆ ಹೋಗತಕ್ಕ ದುರಂತಕ್ಕೆ ಹೋಗುತ್ತಿದೆ ಎನ್ನುವ ಮಾತನ್ನು ನಾನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನ ಇಟ್ಟು ಕೇಳಬೇಕು. ಇವೊತ್ತಿನ ದಿನ ಈ ಬಗ್ಗೆ ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳಬೇಕು. ಈ ನಾಡಿನ ನೆಲವನ್ನು ಬೇರೆ ಭಾಷೆಯವರು ವಲಸೆ ಬಂದು ತಳವೂರುವುದನ್ನು ತಡೆಯುವುದಕ್ಕೆ ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಇದರ ಬಗ್ಗೆ ಒಂದು ಕಾಯಿದೆಯನ್ನು ತರಬೇಕೆಂದು ಹೇಳುತ್ತಿದ್ದೇನೆ. ತಮಿಳುನಾಡಿನ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ, ತಮಿಳುನಾಡಿನಲ್ಲಿ ಉದ್ಯೋಗ ಬೇಕಾದರೆ ತಮಿಳು ಕಲಿಯಿರಿ ಎಂದು......

ಶ್ರೀ ಕೆ. ಹೆಚ್. ಪಾಟೀಲ್.—ಈ ಒಂದು ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಸ್ಪಷ್ಟವಾದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಒಂದೇ ಒಂದು ಇಂಚು ಸಹಿತ ಕನ್ನಡ ನಾಡಿನ ನೆಲವನ್ನು ಬಿಟ್ಟುಕೊಡುವುದಕ್ಕೆ ಸಾಧ್ಯ ಇಲ್ಲ ಎಂದು. ನಮಗೆ ಹಾಗೂ ಮಹಾರಾಷ್ಟ್ರಕ್ಕೆ ಈಗ ಯಾವುದೇ ಡಿಸ್ಪ್ಯೂಟ್ ಇಲ್ಲ. ಮಹಾರಾಷ್ಟ್ರದವರ ಕೋರಿಕೆ ಮೇರೆಗೆ ಮಹಾಜನ್ ಕಮೀಷನ್ ನೇಮಿಸಿದ್ದೆವು, ಅವರು ವರದಿ ಕೊಟ್ಟಮೇಲೆ ಸ್ಟೇಟಸ್–ಹೋಮೋಂಟೇನ್ ಆಗಬೇಕು ಎಂದು ಹೇಳಿದ್ದಾರೆ. ವರದಿಯನ್ನು ಇಂಪ್ಲಿಮೆಂಟ್ ಮಾಡುವುದೊಂದೇ ಈಗ ಉಳಿದಿರತಕ್ಕಂಥ ಮಾರ್ಗ ಎಂದು ಹೇಳಿದ್ದಾರೆ. ಇದಕ್ಕಿಂತ ಸ್ಪಷ್ಟವಾದ ನಿಲುವು ನಿಮಗೆ ಏನು ಬೇಕು. ನಾವು ಮತ್ತೆ ಈ ವಿಷಯ ಪ್ರಸ್ತಾಪ ಮಾಡುವುದು ಬೇಡ. ಏಕೆಂದರೆ ಇದರಿಂದ ಡಿಸ್ಪ್ಯೂಟ್ ಇದೆ ಎಂದು ಅರ್ಥ ಆಗುತ್ತದೆ. ನಾವು ನೀವು ಕೂಡಿ ಇದಕ್ಕೆ ಪೂರ್ಣ ವಿರಾಮ ಕೊಡೋಣ. ಮಹಾರಾಷ್ಟ್ರದ ಬಗ್ಗೆ ಕರ್ನಾಟಕದ ಯಾವುದೇ ವಾದ ಇಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಪೂರ್ತಿಯಾಗಿ ಈ ವಿಚಾರವನ್ನು ಬಿಟ್ಟು ಬಿಡೋಣ ಎಂದು ನನ್ನ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್.—ತಾವು ನನ್ನ ಮಾತನ್ನು ಅರ್ಥ ಮಾಡಿಕೊಂಡಿಲ್ಲ. ನಾನು ಗಡಿ ಪ್ರಶ್ನೆ ತರಲಿಲ್ಲ, ಮಹಾಜನ್ ವರದಿ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಇಡೀ ಕರ್ನಾಟಕ ರಾಜ್ಯಕ್ಕೆ ಬೇರೆ ಬೇರೆ ರಾಜ್ಯಗಳಿಂದ ವಲಸೆ ಬರತಕ್ಕಂಥ ಪರಿಸ್ಥಿತಿ ಉದ್ಭವ ಆಗಿದೆ. ಇದನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ. ಮಹಾಜನ ವರದಿಯ ಬಗ್ಗೆ ನಾವು ಆಧೈರ್ಯ ತಂದುಕೊಳ್ಳುವುದು ಬೇಡ ನಮ್ಮ ಮಾನ್ಯ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಹಿಂದೆ ೧೯೬೯–೭೦ರಲ್ಲಿ ಮುಖ್ಯಮಂತ್ರಿಗಳು ಆಗಿದ್ದಾಗ ಬೆಳಗಾಂ ಅನ್ನು ಬರ್ಲಿನ್ ಮಾಡುವುದಿಲ್ಲ ಎಂದು ಹೇಳಿದ್ದಾರೆ, ಅದು ನನಗೆ ಜ್ಞಾಪಕ ಇದೆ. ಮಾನ್ಯ ಮುಖ್ಯಮಂತ್ರಿಗಳೇ ತಾವು ಹಿಂದೆ ೧೯೬೯–೭೦ರಲ್ಲಿ ಹೇಳಿದ ಮಾತಿನ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ನಿಮ್ಮ ಬಗ್ಗೆ ನನಗೆ ನಂಬಿಕೆ ಇದೆ. ಅಭಿಮಾನ ಇದೆ. ಕನ್ನಡ ಜನರ ಬಗ್ಗೆ ಬಹಳ ಎಚ್ಚರ ವಹಿಸಿದ್ದೀರಿ, ಅದರ ಬಗ್ಗೆ ಬಹಳ ಅಭಿಮಾನ ಇದೆ. ಆದರೆ ಎಚ್ಚರ ಎಂದರೆ ತೀವ್ರತರವಾದ ಎಚ್ಚರಿಕೆಯನ್ನು ಈಗ ವಹಿಸಬೇಕು. ನಮ್ಮ ಮುಖ್ಯಮಂತ್ರಿಗಳು ೨೦ ವರ್ಷದ ನಂತರ ಮತ್ತೆ

ಮುಖ್ಯ ಮಂತ್ರಿಗಳಾಗಿದ್ದಾರೆ. ೨೦ ವರ್ಷದಿಂದ ಇಲ್ಲಿಯವರೆಗೆ ಲಕ್ಷೋಪಲಕ್ಷ ಜನರು ಕರ್ನಾಟಕಕ್ಕೆ ಬಂದಿದ್ದಾರೆ. ತಮಿಳುನಾಡಿನಲ್ಲಿ ಮುಖ್ಯಮಂತ್ರಿಗಳು ಇಲ್ಲಿ ತಮಿಳು ಕಲಿತವರಿಗೇ ಕೆಲಸ ಎಂದು ಹೇಳಿದ್ದಾರೆ. ತಮಿಳು ಇದ್ದರೆ ಕೆಲಸ ಎಂದು ಅಲ್ಲಿರುವ ಹಾಗೆ ಇಲ್ಲಿಯೂ ಸಹ ಕನ್ನಡವನ್ನು ಕಡ್ಡಾಯ ಮಾಡಿ. ಮೊನ್ನೆ ರಾಷ್ಟ್ರಪತಿಯವರು ಬಂದಾಗ ತಮ್ಮ ಭಾಷಣವನ್ನು ಆಲಿಸಿದ್ದೇನೆ. ಸ್ಥಳೀಯರಿಗೆ ಕೆಲಸ ಎಂದು ತಾವು ಹೇಳಿದ್ದೀರಿ ಈ ನಿರ್ಣಯ ಬರೀ ಭಾಷಣ ಮತ್ತು ಘೋಷಣೆಯಲ್ಲಿಯೇ ಇರುವುದು ಬೇಡ. ಕನ್ನಡಿಗರಿಗೆ ಕೆಲಸ ಎಂದು ಕಾನೂನು ಮಾಡಿ. ಮಣ್ಣಿನ ಮಕ್ಕಳಿಗೆ ಕೆಲಸ ಎಂದು ಮಾಡಿ. ಅವರೇ ಈ ರಾಜ್ಯದಲ್ಲಿ ಕೆಲಸ ಮಾಡಬೇಕು. ಈ ಬಗ್ಗೆ ತಾವು ಒಂದು ಶ್ವೇತ ಪತ್ರ ಹೊರಡಿಸಬೇಕೆಂದು ಗಂಭೀರವಾಗಿ ಹೇಳುತ್ತಿದ್ದೇನೆ. ಕಾರ್ಖಾನೆಗಳಲ್ಲಿ, ಖಾಸಗೀ ಇರಬಹುದು, ಸರ್ಕಾರಿ ಇರಬಹುದು, ಕೇಂದ್ರ ಸರ್ಕಾರದ ಕಾರ್ಖಾನೆ ಇರಬಹುದು, ಹೋಟೆಲುಗಳು ಇರಬಹುದು, ಎಲ್ಲೆಲ್ಲಿ ಕೆಲಸ ದೊರೆಯುವುದು ಎಂದು ನೋಡಿದರೆ ಅಲ್ಲಿ ಬೇರೆ ಭಾಷೆಯವರಿಗೆ ಈ ಕರ್ನಾಟಕ ರಾಜ್ಯದಲ್ಲಿ ಕೆಲಸ ಸಿಕ್ಕಿದೆ ಎಂಬ ಬಗ್ಗೆ ಈ ಸಭೆಯ ಮುಂದೆ ತಾವು ಶ್ವೇತ ಪತ್ರ ಹೊರಡಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮ ಬಗ್ಗೆ ಬಹಳ ಕಳಕಳಿ ಇದೆ. ನಿಮ್ಮ ಧೈರ್ಯದ ಬಗ್ಗೆ ನಮಗೆ ಅಭಿಮಾನ ಇದೆ. ಕನ್ನಡದ ಬಗ್ಗೆ ತಾವು ಲೋಪ ಮಾಡುವುದಿಲ್ಲ, ಇದರಿಂದ ತಾವು ತಪ್ಪಿಸಿ ಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎಂದು ನಮಗೆ ಮನವರಿಕೆ ಆಗಿದೆ. ಕರ್ನಾಟಕ ರಾಜ್ಯದಲ್ಲಿ ಕನ್ನಡಿಗರಿಗೆ ದೊರೆಯಬೇಕಾಗಿರತಕ್ಕ ಉದ್ಯೋಗದಲ್ಲಿ ೧೦೦ಕ್ಕೆ ೮೦ ಭಾಗ ಬೇರೆಯವರಿಗೆ ಹೋಗಿದೆ. ಡಾ. ಸರೋಜಿನಿ ಮಹಿಷಿಯವರ ವರದಿ ಇದೆ. ಆ ವರದಿಯನ್ನು ತಾವು ಒಪ್ಪಬೇಕು ತಾವು ಅದನ್ನು ಸಮಗ್ರವಾಗಿ ಓದಿ, ಅದು ತಮ್ಮ ತಿಳುವಳಿಕೆಗೆ ಬಂದು ಅದನ್ನು ಜಾರಿಗೆ ತರಬೇಕಾದ್ದು ಕರ್ತವ್ಯ, ಅದನ್ನು ತರುತ್ತೀರಿ ಎನ್ನತಕ್ಕಂಥ ಅಭಿಮಾನ, ಆತ್ಮವಿಶ್ವಾಸ ನನಗೆ ಇದೆ. ಇದರಲ್ಲಿ ರಾಜಕೀಯ ಪ್ರಶ್ನೆ ಏನಿಲ್ಲ. ಈ ರಾಜ್ಯ ೧೯೫೬ ರಿಂದ ಇಲ್ಲಿಯವರೆಗೆ ಅತ್ಯಂತ ಬದಲಾವಣೆಯಾಗಿದೆ ನಮ್ಮ ಮುಂಬಾಗಿಲಿನಲ್ಲಿ ಕನ್ನಡ ಚಿತ್ರ ಬೇಡ ಎಂದು ಮಾನ್ಯ ವೆಂಕಟಪ್ಪನವರು ಹೇಳುತ್ತಿದ್ದರು. ನಾಳೆ ಅವರಿಗೆ ಮಂತ್ರಿಮಂಡಲದಲ್ಲಿ ಮಂತ್ರಿ ಸ್ಥಾನ ಕೊಡುತ್ತೀರೋ ಬಿಡುತ್ತೀರೋ ಅದು ಬೇರೆ ವಿಚಾರ. ಮಂತ್ರಿಯಾಗಬೇಕು ಎಂದು ಆಸೆ ಇಟ್ಟು ಕೊಂಡಿರತಕ್ಕವರು. ಇವರೆಲ್ಲರೂ ಬೇರೆ ಬೇರೆ ಭಾಷೆ ಬಗ್ಗೆ ಅಭಿಮಾನ ಇಟ್ಟುಕೊಂಡರೆ ನಮ್ಮ ಗತಿ ಏನು ? ಕನ್ನಡದ ಬಗ್ಗೆ ಅಭಿಮಾನ ಇರತಕ್ಕವರನ್ನು ಮಂತ್ರಿಗಳನ್ನಾಗಿ ಮಾಡಿ, ಅವರು ಯಾರೇ ಆಗಿರಲಿ, ಅಚ್ಚ ೧೬ ಅಣೆ ನೂರಕ್ಕೆ ನೂರು ಕನ್ನಡದ ಬಗ್ಗೆ ಅಭಿಮಾನ ಇರತಕ್ಕವರನ್ನು ಮಂತ್ರಿಗಳನ್ನಾಗಿ ಮಾಡಿ. ಇಲ್ಲದೇ ಹೋದರೆ ಬಹಳ ಅಪಾಯಕ್ಕೆ ನಾವು ಸಿಕ್ಕಿಬಿಡುತ್ತೇವೆ, ನಾಳೆ ಈ ರಾಜ್ಯ ಏನಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ನಾನು ಯಾವ ಸ್ವಾರ್ಥದಿಂದ ಈ ಮಾತನ್ನು ಹೇಳುತ್ತಾ ಇಲ್ಲ. ೩೦ ವರ್ಷಗಳ ಕಾಲ ಹುಚ್ಚೆದ್ದು ಕನ್ನಡ ಕನ್ನಡ ಎಂದು ಕೂಗಿಕೊಂಡು ಇದ್ದೇನೆ. ಇಲ್ಲದೇ ಇದ್ದರೆ ನಾನೆಂದೋ ಅಲ್ಲಿ ಬಂದು ನಿಮ್ಮ ಪಕ್ಷ ಸೇರಿಕೊಂಡು ಶಾಸಕನಾಗಿ ಎರಡಲ್ಲ ಮೂರುಬಾರಿ ಕುಳಿತುಕೊಳ್ಳಬಹುದಾಗಿತ್ತು. ಯಾರ್ಯಾರೋ ಶಾಸಕರಾಗಿದ್ದಾರೆ. ನಾನು ಆಗುವುದಕ್ಕೆ ಸಾಧ್ಯವಿಲ್ಲ ಎನ್ನುವ ಪ್ರಶ್ನೆಯಲ್ಲ. ನಾನು ಆ ಬಗ್ಗೆ ಮಾತನಾಡುತ್ತಾ ಇಲ್ಲ, ಒಂದೇ ತತ್ವ ನೀತಿ ಇಟ್ಟುಕೊಂಡು ಹೋರಾಟ ಮಾಡಿ, ಬೆಂಗಳೂರು, ಅಲ್ಲಿ ಇಲ್ಲಿ ಅಲೆದು ಯಾವುದೋ ಒಂದು ಗಡಿ ಪ್ರದೇಶದಿಂದ ಗೆದ್ದು ಬರಬೇಕಾಯಿತು. ನಾನು ತಮಗೆ ಹೇಳುತ್ತಾ ಇದ್ದೇನೆ. ನನ್ನ ಕೊನೆಯ ಉಸಿರು ಇರುವವರೆಗೂ ಈ ಕನ್ನಡ ಬಿಟ್ಟು ಬೇರೆ ಪ್ರಶ್ನೆ ನನಗೆ ಇಲ್ಲವೇ ಇಲ್ಲ. ನನ್ನ ಕೊನೆ ಸಾಯುವ ಉಸಿರು ಇರುವವರೆಗೂ ಕನ್ನಡ. ಬೇರೆ ಮಾತೇ ಇಲ್ಲ, ಅದು ನನ್ನ ಹೃದಯದಲ್ಲಿ ಅಂಟಿಕೊಂಡುಬಿಟ್ಟಿದೆ. ಈಗ ಕನ್ನಡದ ಬಗ್ಗೆ ಅಭಿಮಾನ ಇರತಕ್ಕ ಒಬ್ಬ ಮುಖ್ಯಮಂತ್ರಿಗಳು ಬಂದಿದ್ದೀರಿ. ಆದುದರಿಂದ ತಾವು ತಮ್ಮ ಮಂತ್ರಿಮಂಡಲವನ್ನು ವಿಸ್ತರಣೆ ಮಾಡುವಾಗ ಕನ್ನಡದ ಮೇಲೆ ಅತ್ಯಂತ ಅಭಿಮಾನ ಇರತಕ್ಕವರನ್ನು ಮಂತ್ರಿಗಳನ್ನಾಗಿ ಮಾಡುವ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಿ. ಏಕೆಂದರೆ ಯಾರು ಯಾರನ್ನೋ ತಾವು ತಂದರೆ ಅವರಿಗೆ ಕನ್ನಡದ ಬಗ್ಗೆ ಅಭಿಮಾನ ಇರುವುದಿಲ್ಲ. ಆ ಪರಿಸ್ಥಿತಿ ಬರುತ್ತದೆ. ಒಂದು ವಿಷಯವನ್ನು ನಾನು ಆಗಲೇ ಹೇಳಿದೆ ತಾವು ಮಾತನಾಡುತ್ತಾ ಇದ್ದಿರಿ. ಅಸ್ವಾಭಾವಿಕ ಪರಿಸ್ಥಿತಿ ರಾಜ್ಯದಲ್ಲಿ ಒದಗಿದೆ. ಇದನ್ನು ತಾವು ತಪ್ಪಿಸುವ ವ್ಯವಸ್ಥೆ ಮಾಡಬೇಕು. ಶ್ವೇತಪತ್ರ ಮಾತ್ರ ಖಂಡಿತ ಬರಲೇ ಬೇಕು. ಈ ರಾಜ್ಯದಲ್ಲಿ ಕನ್ನಡ ಚಿತ್ರಗಳು ಏನಿವೆ ಇವು ಇಡೀ ಭಾರತ ದೇಶದಲ್ಲೇ ಉನ್ನತವಾದಂಥ ಶ್ರೇಣಿಯನ್ನು ಪಡೆದಂಥ ಕನ್ನಡ ಚಿತ್ರಗಳು. ಕಣಗಾಲ್ ಪುಟ್ಟಣ್ಣನವರು ಪಾಪ ನಮ್ಮ ಮುಂದೆ ಇಲ್ಲ. ಅವರು ಕನ್ನಡ ಚಿತ್ರರಂಗಕ್ಕೆ ಒಂದು ಹೊಸ ಆಯಾಮವನ್ನು ಕೊಟ್ಟಂಥ ಒಬ್ಬ ಧೀಮಂತ ವ್ಯಕ್ತಿ. ನಮ್ಮಲ್ಲಿ ಒಳ್ಳೊಳ್ಳೆಯ ಸಾಹಿತಿಗಳು, ಕವಿಗಳು ಎಲ್ಲಾ ಇದ್ದಾರೆ, ಆದರೆ ಇವತ್ತು ಕಣಗಾಲ್ ಪುಟ್ಟಣ್ಣ ಮತ್ತು ಕಣಗಾಲ್ ಪ್ರಭಾಕರ ಶಾಸ್ತ್ರಿಗಳು ಇಬ್ಬರೂ ಸತ್ತಿದ್ದಾರೆ, ಅವರು ಇಲ್ಲ. ಅವರು ಎಂತಹ ಸಾಹಿತಿಗಳು, ಅವರು ಪಾಪ ಸತ್ತಿದ್ದಾರೆ. ಅವರಿಗೆ ಮರಣೋತ್ತರ ಪ್ರಶಸ್ತಿಯನ್ನು ಸರ್ಕಾರ ಕೊಡಿ ಎಂದು ನಾನು ಹೇಳುತ್ತಾ ಇದ್ದೇನೆ. ಒಂದು

ಲಕ್ಷ ರೂಪಾಯಿಗಳನ್ನು ಪುಟ್ಟಣ್ಣ ಕಣಗಾಲ್ ಅವರು ಇದ್ದಿದ್ದರೆ ಅವರಿಗೆ ಕೊಡುತ್ತಾ ಇದ್ದಿರಿ. ಅವರ
ಅಣ್ಣ ಕಣಗಾಲ್ ಪ್ರಭಾಕರ ಶಾಸ್ತ್ರಿಗಳು ಈ ರಾಜ್ಯಕ್ಕೆ ಮಾಡಿದ ಸೇವೆ ಅಪಾರವಾದಂಥಾದ್ದು.
ನಮ್ಮ ಕಾನೂನು ಏನಿದೆ ಅದನ್ನು ಬದಲಾವಣೆ ಮಾಡಿ ಆ ಪ್ರಭಾಕರ ಶಾಸ್ತ್ರಿಗಳಿಗೆ ಮರಣೋತ್ತರ
ಪ್ರಶಸ್ತಿಯನ್ನು ಕೊಡಿ. ಇವತ್ತು ಕನ್ನಡ ರಂಗಭೂಮಿ ನೆಲವನ್ನು ಕಚ್ಚಿದೆ. ತಾವು ಅವಕ್ಕೆ ಚೈತನ್ಯ
ಕೊಡಬೇಕು. ರಂಗಭೂಮಿ ಸಂಪೂರ್ಣ ನಾಶವಾಗಿದೆ. ಉತ್ತರ ಕರ್ನಾಟಕದ ಕೆಲವು ನಾಟಕ
ಕಂಪನಿಗಳನ್ನು ಬಿಟ್ಟರೆ ನಮ್ಮಲ್ಲಿ ಮೈಸೂರಿನಲ್ಲಿ ನಾಟಕ ಕಂಪನಿ ಇಲ್ಲ. ಒಂದೇ ಒಂದು ಗುಬ್ಬಿ
ವೀರಣ್ಣನವರ ಕಂಪನಿ ೧೦೦ ವರ್ಷ ಶತಮಾನೋತ್ಸವ ಕಂಡಂಥ ಏಷ್ಯಾ ಖಂಡದಲ್ಲೇ ಒಂದೇ ಒಂದು
ಕಂಪನಿ ಅಂದರೆ ಗುಬ್ಬಿ ವೀರಣ್ಣನವರ ಕಂಪನಿ. ಇವತ್ತು ಆ ಕಂಪನಿ ಹೆಸರಿಲ್ಲದೆ ಎಲ್ಲೋ ಚರಂಡಿಯಲ್ಲಿ
ಮೂಲೆಯಲ್ಲಿ ಬಿದ್ದಿದೆ. ಇವತ್ತು ನಾಟಕ ಕಂಪನಿಗಳು ಬೆಳೆಯಬೇಕು. ಮತ್ತೆ ನಾಟಕ ಕಂಪನಿಯಲ್ಲಿ
ರಾಜರು ರಾಣಿಯರಾಗಿ ಪಾತ್ರ ಮಾಡಿದಂಥ ಅನೇಕ ಜನ ಹಿರಿಯ ನಟರು ಇವತ್ತು ಭಿಕ್ಷೆ ಎತ್ತಿಕೊಂಡು
ಬೀದಿಯಲ್ಲಿದ್ದಾರೆ. ರಾಜರಾಗಿ ಮೆರೆದು, ರಾಣಿಯರಾಗಿ ಮೆರೆದಂತಹವರು ಇವತ್ತು ಭಿಕ್ಷೆ ಎತ್ತುತ್ತಾ
ಇದ್ದಾರೆ. ಆದ್ದರಿಂದ ತಾವು ರಂಗಭೂಮಿಯನ್ನು ಮತ್ತೆ ವೈಭವಕ್ಕೆ ತರಬೇಕು ಮತ್ತು ಚಿತ್ರರಂಗವನ್ನು
ವೈಭವಕ್ಕೆ ತರಬೇಕು ಎಂದು ಹೇಳುತ್ತೇನೆ. ಈ ಕೆಟ್ಟ ಚಿತ್ರಗಳ ಪರಂಪರೆ ಬರುತ್ತಾ ಇದೆ. ಈ ಕೆಟ್ಟ
ಚಿತ್ರಗಳ ಪರಂಪರೆಯನ್ನು ತಪ್ಪಿಸಿ ಉತ್ತಮವಾದಂಥ ಸಂಭಾಷಣೆ, ಉತ್ತಮವಾದಂಥ ಕಥೆ ಉತ್ತಮ
ವಾದಂಥ ಕವಿತೆ ಇರತಕ್ಕಂಥಚಿತ್ರಗಳಿಗೆ ಮಾತ್ರ ಆದ್ಯತೆ ಕೊಡತಕ್ಕ ಮಾತನ್ನು ತಾವು ಹೇಳಬೇಕು.
ಮತ್ತೆ ಕಲ್ಲುಗಣಿಗಳ ಲೂಟಿ ಬಗ್ಗೆ ಹೇಳಬೇಕಾಗಿದೆ.

೧-೦೦ ಪಿ. ಎಂ.

ಕಲ್ಲು ಗಣಿಗಳ ಲೂಟಿ, ಗ್ರಾನೈಟ್ ಕಲ್ಲುಗಳ ಹಗಲು ದರೋಡೆ ನಡೆಯುತ್ತಿದೆ. ಸ್ವಾಮಿ, ತಮಗೂ
ಗೊತ್ತಿದೆ. ಲೂಟಿ ನಿರಂತರವಾಗಿ, ಬಹಿರಂಗವಾಗಿ ನಡೆಯುತ್ತಿದೆ. ಇದಕ್ಕೆ ಪೋಲೀಸಿನವರ ಬೆಂಬಲ,
ಕಂದಾಯ ಇಲಾಖೆಯವರ ಬೆಂಬಲ, ಅರಣ್ಯ ಇಲಾಖೆಯವರ ಬೆಂಬಲ, ಅನೇಕ ಜನ ರಾಜಕಾರಣಿಗಳ
ಬೆಂಬಲ ಇರುವುದರಿಂದ ಧೈರ್ಯವಾಗಿ ಹಗಲು ದರೋಡೆ ನಡೆಯುತ್ತಿದೆ. ನನಗೆ ಸಿಕ್ಕಿರತಕ್ಕ
ಮಾಹಿತಿಯ ಪ್ರಕಾರ, ಅಂಕಿಅಂಶಗಳ ಪ್ರಕಾರ ಸುಮಾರು ೪೦,೦೦೦ ಕೋಟಿ ರೂಪಾಯಿಗಳ ಕಲ್ಲು
ವಿದೇಶಗಳಿಗೆ ಮಾರಾಟವಾಗುತ್ತಿದೆ. ಇವತ್ತು ರಾಜ್ಯದಲ್ಲಿ ಒಂದು ಸಾವಿರ ಗಣಿಗಳಲ್ಲಿ ಕಲ್ಲುಗಳನ್ನು
ತೆಗೆಯುತ್ತಿದ್ದಾರೆ. ೨೫,೦೦೦ ಎಕರೆ ಪ್ರದೇಶಗಳಲ್ಲಿ ಸಿಕ್ಕಾಪಟ್ಟೆ ಕಲ್ಲು ತೆಗೆಯುತ್ತಿದ್ದಾರೆ.
ಸರ್ಕಾರದವರು ಇದರಿಂದ ೧೦ ಕೋಟಿ ವರಮಾನ ಬರುತ್ತದೆಂದು ಹೇಳಿದ್ದಾರೆ, ನಾನು ಹೇಳುತ್ತೇನೆ.
೧೦ ಕೋಟಿಯಲ್ಲ ೧೦೦೦ ಕೋಟಿ ರೂಪಾಯಿ ವರಮಾನ ಬರುತ್ತದೆ ಗ್ರಾನೈಟ್ ಕಲ್ಲಿನ ಬಗ್ಗೆ ಸರ್ಕಾರ
ಎಚ್ಚರಿಕೆ ವಹಿಸಿಬೇಕು ಈ ಅಂಶವನ್ನು ಅರ್ಥ ಸಚಿವರು ಗಂಭೀರವಾಗಿ ಯೋಚನೆ ಮಾಡಿದರೆ,
ಸರ್ಕಾರಕ್ಕೆ ೧೦೦೦ ಕೋಟಿ ವರಮಾನ ಬರುತ್ತದೆ. ಗ್ರಾನೈಟ್ ಕಲ್ಲುಗಳನ್ನು ಎಲ್ಲೆಲ್ಲಿ ತೆಗೆದಿದ್ದಾರೆಂದರೆ,
ಮಹದೇಶ್ವರ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಶಿವಗಂಗೆ ಬೆಟ್ಟ, ರಾಮರ ದೇವಸ್ಥಾನದಲ್ಲಿ ತೆಗೆದಿದ್ದಾರೆ
ಅವರಿಗೆ ದೇವಸ್ಥಾನ ದೇವರು ಏನೂ ಇಲ್ಲ. ಸ್ವಾಮಿ, ಶಿವಗಂಗೆ ಬೆಟ್ಟದಲ್ಲಿ ಅಲ್ಲಿನ ದೇವಸ್ಥಾನದಲ್ಲಿರತಕ್ಕ
ಅರ್ಚಕರು ಹೇಳುತ್ತಾರೆ, ಸಿಡಿಮದ್ದನ್ನು ಸಿಡಿಸಿದರೆ, ಲಿಂಗ ಅದುರುತ್ತದೆಂದು. ಅಕ್ರಮವಾಗಿ
ಕಲ್ಲುಗಳನ್ನು ಸಾಗಿಸುವಂಥವರನ್ನು ರಾಷ್ಟ್ರೀಯ ಭದ್ರತಾ ಶಾಸನದ ಪ್ರಕಾರ ಸರ್ಕಾರ ಬಂಧಿಸಬೇಕು.
ಅದಕ್ಕಾಗಿ ಸಮರ್ಥವಾದ ಒಂದು ಆಯೋಗವನ್ನು ನೇಮಿಸಬೇಕು. ಮದನ್‌ಗೋಪಾಲ್ ಅಂಥ
ಶ್ರೇಷ್ಠ ಮಟ್ಟದ ಹಿರಿಯ ಅಧಿಕಾರಿ ಒಬ್ಬರಿದ್ದರು. ಆ ಅಧಿಕಾರಿ ಕಲ್ಲುಗಳನ್ನು ತೆಗೆಯುವುದನ್ನು
ತಡೆಯುವುದಕ್ಕೆ ಹೋದಾಗ ಅವರನ್ನು ಅಲ್ಲಿಂದ ಹೊರಗಡೆ ಹಾಕಿಸಿದರು. ನನಗೆ ನ್ಯಾಯಾಂಗ ತನಿಖೆಗೆ
ಒಳಪಡಿಸಬೇಕೆಂದೇನೂ ಇಲ್ಲ. ಕೊನೆಗೆ ಅಂಥ ಒಬ್ಬ ಅಧಿಕಾರಿಯ ಮೂಲಕ ತನಿಖೆ ನಡೆಸಿ. ಸಚಿವರ
ಸಂಪುಟದ ಮಂತ್ರಿಗಳ ಮನೆಗಳ ಬಾಗಿಲಲ್ಲಿ ಅಕ್ರಮ ಗಣಿ ಮಾಲೀಕರುಗಳು ಧಾಳಿ ಮಾಡುತ್ತಿದ್ದಾರೆ.
ಒಬ್ಬ ಯಳಂದೂರು ತಾಲ್ಲೂಕಿನಲ್ಲಿ ಗಣಿ ಮಾಲೀಕ ಇದ್ದಾನೆ. ನಾನು ಇಲ್ಲಿಯೇ ಇರತಕ್ಕ ರೈತ ಎಂದು
ಸುಳ್ಳು ಪ್ರಮಾಣ ಪತ್ರ ತಂದು ಸುಮಾರು ೧೦೦ ಕೋಟಿ ರೂಪಾಯಿ ಕಲ್ಲನ್ನು ವ್ಯವಸಾಯ
ಭೂಮಿಯಿಂದ ತೆಗೆದಿದ್ದಾನೆ. ಮದನ್‌ಗೋಪಾಲ್ ಎನ್ನುವಂಥ ಅಧಿಕಾರಿ ಸತ್ಯವನ್ನು ಕಂಡು ಹಿಡಿದು,
ಕೇಸ್ ಹಾಕಿದ್ದರೆ, ಪೋಲೀಸಿನವರು ಬಿ. ರಿಪೋರ್ಟ್ ಹಾಕಿದ್ದಾರೆ. ಇದರ ಬಗ್ಗೆ ಸಮಗ್ರವಾಗಿ ತನಿಖೆ
ನಡೆಸಬೇಕೆಂದು ಹೇಳುತ್ತೇನೆ. ಗ್ರಾನೈಟ್ ಕಲ್ಲುಗಳಿಗೆ ಸಂಬಂಧಪಟ್ಟಂತೆ ಸಮಗ್ರ ಮಾಹಿತಿಯನ್ನು
ನಾನು ಕೊಡುತ್ತೇನೆ. ಸರ್ಕಾರದವರು ಗ್ರಾಮೀಣಾಭಿವೃದ್ಧಿ ಬಗ್ಗೆ ಬಹಳ ಕಳಕಳಿಯನ್ನು ಇಟ್ಟು
ಕೊಂಡಿದ್ದಾರೆ. ನಮ್ಮ ಅರ್ಥ ಸಚಿವರು ಕಾಲೇಜಿನಲ್ಲಿ ಮೇಸ್ಟರು ವಿದ್ಯಾರ್ಥಿಗಳಿಗೆ ಪಾಠವನ್ನು
ಹೇಳುವಂತೆ, ಎಲ್ಲರನ್ನು ಉಲ್ಲೇಖ ಮಾಡಿ ಹೇಳಿದ್ದಾರೆ, ತಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ,
ತೆರೆಮರೆಯಲ್ಲಿ ಪೂರ್ವಗ್ರಹ ಪೀಡಿತರಾಗಿದ್ದೀರೆಂದು ನಾನು ಅಂದುಕೊಂಡಿಲ್ಲ. ತಮ್ಮ ಅನುಭವದ ಬಗ್ಗೆ

ನನಗೆ ಅಭಿಮಾನ ಇದೆ. ೨-೩ ಲಕ್ಷ ಜನರ ಪ್ರತಿನಿಧಿಗಳಾದ ಶಾಸಕರು ಯಾರೇ ಬಂದರೂ, ಅವರ ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ ಕೊನೆಯದಾಗಿ, ಸರ್ಕಾರ ಯಾವರೀತಿ ಬಂತು, ಈ ಸರ್ಕಾರ ಬರುವುದಕ್ಕೆ ಕಾರಣ ಯಾರು, ಸರ್ಕಾರದ ಬದಲಾವಣೆಗೆ ಪ್ರಯತ್ನ ಮಾಡಿದ ಮಹಾ ವ್ಯಕ್ತಿ ಒಬ್ಬರು ಇದ್ದಾರೆ. ಆ ವ್ಯಕ್ತಿಯ ಫೋಟೋವನ್ನು ಕಾಂಗ್ರೆಸ್ ಪಕ್ಷದಿಂದ ಗೆದ್ದು ಬಂದಿರತಕ್ಕವರೆಲ್ಲರೂ ಇಟ್ಟುಕೊಂಡು ಪೂಜೆ ಮಾಡಬೇಕು. ಆ ಮಹಾ ವ್ಯಕ್ತಿ ಯಾರು ಅಂದರೆ, ಮೊಳಕೇರಿ. ಒಬ್ಬರು ಮೊಳಕೇರಿಯವರು ಇನ್ನೊಬ್ಬರು ವೆಂಕಟಸುಬ್ಬಯ್ಯನವರು, ಇವರ ಕೃಪಾಪೋಷಿತ ನಾಟಕ ಮಂಡಲಿಯಿಂದ ಗೆದ್ದು ಬಂದಿದ್ದೀರಿ. ಮೊಳಕೇರಿಯವರು ರಾಜಭವನಕ್ಕೆ ಹೋಗದೇ ಇದ್ದಿದ್ದರೆ ನೀವು ಯಾರೂ ಗೆದ್ದು ಬರುವುದಕ್ಕೆ ಆಗುತ್ತಿರಲಿಲ್ಲ.

ಶ್ರೀ ಎಚ್. ಆರ್. ಶಿವರಾಮೇಗೌಡ.—ನೀವು ಯಾವ ನಾಟಕ ಮಂಡಲಿಯವರು ?

ಶ್ರೀ ವಾಟಾಳ್ ನಾಗರಾಜ್.—ನಾನು ನಾಟಕಕಾರ, ಕಲೆಗಾರ, ಸಾಹಿತಿ, ಎಲ್ಲಾ ಆಗಿದ್ದೆ. ನಾನು ಬಣ್ಣ ಹಂಚಿಕೊಂಡಿದ್ದೇನೆ.

ಶ್ರೀ ಮದನಗೋಪಾಲ್ ನಾಯಕ್.—ಮಾನ್ಯ ಮೊಳಕೇರಿಯವರನ್ನು ನಿಮ್ಮ ಜೊತೆಗೆ ಕರೆದುಕೊಳ್ಳಿ.

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).— ಮಾನ್ಯ ಅಧ್ಯಕ್ಷರೆ. ಹಣಕಾಸಿನ ಸಚಿವರು ೧೯೯೦-೯೧ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದಾರೆ. ನಾನು ಅದನ್ನು ವಿರೋಧ ಮಾಡುತ್ತಾ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಹೆಗ್ಗಡದೇವನ ಕೋಟೆ ತಾಲ್ಲೂಕು ಅಭಿವೃದ್ಧಿಗೋಸ್ಕರ ತಾರಕ ಜಲಾಶಯವನ್ನು ನಿರ್ಮಾಣ ಮಾಡಿದ್ದುದು ಸರಿಯಷ್ಟೆ. ಇದಕ್ಕಾಗಿ ಇದುವರೆವಿಗೂ ಸುಮಾರು ೧ ಕೋಟಿ ರೂಪಾಯಿಗಳು ಖರ್ಚಾಗಿರುತ್ತದೆ. ಈ ಜಲಾಶಯಕ್ಕೆ ಇದುವರೆಗೂ ಮಳೆ ಬಂದು ತುಂಬಿರುವುದಿಲ್ಲ. ಮತ್ತು ಜಲಾಶಯಕ್ಕೆ ಅಂದಾಜು ಪ್ರಮಾಣದಷ್ಟು ನೀರು ಸಹ ಬಂದಿರುವುದಿಲ್ಲ ಈ ತಾರಕ ಯೋಜನೆಯ ಪ್ರಯೋಜನ ಪಡೆದುಕೊಳ್ಳುವ ರೈತರು ಬೆಂಗಾಡಾಗಿ ಉಳಿದಿದ್ದಾರೆ ಕಬಿನಿ ಜಲಾಶಯದಿಂದ ಸೆಪ್ಟೆಂಬರ್ ತಿಂಗಳವರೆಗೆ ಪಂಪುಗಳ ಮೂಲಕ ತಾರಕ ಜಲಾಶಯಕ್ಕೆ ಎತ್ತಿ ಈಗ ಯೋಜಿಸಲಾಗಿರುವ ೧೨ ಸಾವಿರ ಹೆಕ್ಟೇರುಗಳಿಗೆ ನೀರನ್ನು ಒದಗಿಸ ಬಹುದು. ಇದಕ್ಕೆ ವಿದ್ಯುಚ್ಛಕ್ತಿಯೂ ಬಹಳ ಕಡಿಮೆಯಾಗುತ್ತದೆ. ತಾಂತ್ರಿಕ ವರದಿಗಳು ಸಹ ಏತ ನೀರಾವರಿ ಮಾಡಲು ಸಲಹೆ ನೀಡಿದೆ. ಇದಕ್ಕೆ ಸುಮಾರು ೯-೧೦ ಪಂಪುಗಳು ಮಾತ್ರ ಬೇಕಾಗುತ್ತದೆ. ಇನ್ನೂ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಹೆಗ್ಗಡದೇವನಕೋಟೆ ತಾಲ್ಲೂಕು ಜನತೆ ಸಂಪೂರ್ಣ ಜೀವನ ಸಾಗಿಸಲು ಅವಕಾಶವಾಗುತ್ತದೆ. ಕಬಿನಿ ಜಲಾಶಯದಿಂದ ತಾರಕ ಜಲಾಶಯ ಏತ ನೀರಾವರಿಯನ್ನು ಮಂಜೂರು ಮಾಡಿ ಹೆಗ್ಗಡದೇವನ ಕೋಟೆ ತಾಲ್ಲೂಕಿನ ರೈತರು ಜೀವನ ಸಾಗಿಸಲು ಅವಕಾಶ ಮಾಡಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ೩೯೦ ಕೋಟಿ ರೂಪಾಯಿಯನ್ನು ಆಡಳಿತಾತ್ಮಕ ಮಂಜೂರಾತಿ ಇದಕ್ಕೆ ನೀಡಲಾಗಿದೆ ಎಂದು ಹೇಳಿದ್ದಾರೆ.

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕಬಿನಿ ೨ನೇ ಹಂತವನ್ನು ಕೈಗೊಳ್ಳಲು ಹಿಂದಿನ ಸರ್ಕಾರ ತೀರ್ಮಾನ ಮಾಡಿದ್ದುದು ಸರಿಯಷ್ಟೆ. ಇದುವರೆಗೂ ಕೆಲಸ ಪ್ರಾರಂಭ ಮಾಡುವುದಕ್ಕೆ ಹೆಚ್.ಡಿ. ಕೋಟೆ ತಾಲ್ಲೂಕಿನ ರೈತರು ಬಿಟ್ಟಿರುವುದಿಲ್ಲ. ಈ ಯೋಜನೆಯಿಂದ ೧೨ ಸಾವಿರ ಎಕರೆ ಜಮೀನು ಮುಳುಗಡೆಯಾಗುತ್ತದೆ. ೪ ಸಾವಿರ ಜಮೀನು ಅರಣ್ಯ ಪ್ರದೇಶ ಮುಳುಗಡೆಯಾಗುತ್ತದೆ. ಮುಳುಗಡೆಯಾಗುವಂತಹ ರೈತರು ಎಲ್ಲರೂ ಸಣ್ಣ ಹಿಡುವಳಿದಾರರು. ಇವರಿಗೆ ಈ ಜಮೀನು ಬಿಟ್ಟರೆ ಬೇರೆಲ್ಲಿಯೂ ಜಮೀನು ಇರುವುದಿಲ್ಲ. ಈ ಯೋಜನೆಯನ್ನು ಕೈಗೊಂಡವರಲ್ಲಿ ಎಲ್ಲರೂ ನಿರ್ಗತಿಕರಾಗುತ್ತಾರೆ ಈ ಯೋಜನೆಗೆ ವಿದ್ಯುಚ್ಛಕ್ತಿಯು ಹೆಚ್ಚಿಗೆ ಬೇಕಾಗುತ್ತದೆ ಇದಕ್ಕೆ ಏತ ನೀರಾವರಿ ಮಾಡಲು ೪೦ ಪಂಪುಗಳು ಬೇಕಾಗುತ್ತದೆ. ಇದರಿಂದ ತಾಲ್ಲೂಕಿನ ರೈತರಿಗೆ ಯಾವ ನೀರಾವರಿ ಸೌಲಭ್ಯವು ದೊರಕುವುದಿಲ್ಲ. ಹಿಂದಿನ ಸರ್ಕಾರ ಈ ದೃಷ್ಟಿಯಿಂದ ದಿವಂಗತ ಅಬ್ದುಲ್ ನಜೀರ್ ಸಾಬ್ ರವರ ಮೇರೆಗೆ ಸರ್ಕಾರವು ಮಂಜೂರಾತಿ ನೀಡಿತ್ತು. ಹೆಗ್ಗಡದೇವನಕೋಟೆ ತಾಲ್ಲೂಕು ರೈತರಿಗೆ ತಾರಕ ಯೋಜನೆಯು ಏತ ನೀರಾವರಿ ಮಾಡಬೇಕಾದರೆ ಕಡಿಮೆ ವಿದ್ಯುಚ್ಛಕ್ತಿ ಬೇಕಾಗುತ್ತದೆ. ಹಾಗೂ ಕಡಿಮೆ ಹಣ ಸಾಕಾಗುತ್ತದೆ. ಮತ್ತು ಕಡಿಮೆ ಪಂಪು ಬೇಕಾಗುತ್ತದೆ. ಇದಕ್ಕಾಗಿ ಸ್ಟೇಟ್ ಫಾರೆಸ್ಟಿನಿಂದ ಜಮೀನನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಸ್ವಾಮಿ, ಕಬಿನಿ ಎರಡನೆಯ ಯೋಜನೆಯನ್ನು ಮಾಡುವ ಮೊದಲು ಹತ್ತುಸಾವಿರ ಜನರ ಜಮೀನು ಏನು ಮುಳುಗಡೆಯಾಗುತ್ತದೆ ಅದನ್ನು ಬೇರೆ ಕಡೆ ಅವರಿಗೆ ಕೊಟ್ಟು ಅನಂತರ ಈ ಕೆಲಸವನ್ನು ತಾವು ಪ್ರಾರಂಭ ಮಾಡಬೇಕು. ಇಲ್ಲದೇ ಹೋದರೆ ನಮ್ಮ ಹೆಗ್ಗಡದೇವನಕೋಟೆ ಜನರು

ಹೋರಾಟ ಮಾಡಿದರೆ ಈ ಯೋಜನೆಯನ್ನು ತಾವು ಮಾಡಲಿಕ್ಕೆ ಆಗುವುದಿಲ್ಲ. ತಾವು ತಾರಕಯೋಜನೆ ಕೆಲಸವನ್ನು ಮಾಡಿ ೧೯೮೦ ರಿಂದ ೮೫ ರವರೆಗೆ ನಮ್ಮ ರಾಜಶೇಖರಮೂರ್ತಿಯವರು ಲೋಕಸಭಾ ಸದಸ್ಯರಾಗಿದ್ದರು. ಆ ಜನರು ತಮಗೆ ಹೆಚ್ಚು ಮತವನ್ನು ಕೊಟ್ಟಿದ್ದಾರೆ. ಅದು ತಮಗೆಲ್ಲಾ ಗೊತ್ತಿದೆ. ಆದ್ದರಿಂದ, ತಾರಕಾ ಏತನೀರಾವರಿ ಯೋಜನೆಯನ್ನು ಮೊದಲು ಮಾಡಿ ಕಬಿನಿ ಎರಡನೇ ಹಂತ ಮಾಡಲಿಕ್ಕೆ ಹೊರಟರೆ ರೈತರು ತಮಗೆ ಬಿಡುವುದಿಲ್ಲ.......

ಶ್ರೀ ಜಿ. ಪುಟ್ಟಸ್ವಾಮಿಗೌಡ.—ತಾರಕ ಪ್ರಾಜೆಕ್ಟ್ ಬಗ್ಗೆ ಮತ್ತು ಕಬಿನಿ ಎರಡನೆಯ ಸ್ಟೇಜ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಮಾನ್ಯ ರಾಜಶೇಖರ್ ಮೂರ್ತಿಯವರು ಇಲ್ಲಿಯೇ ಇದ್ದಾರೆ. ಅವರನ್ನು ಸಹಾಯ ಮಾಡಿ ಎಂದು ಮಾನ್ಯ ಸದಸ್ಯರು ಕೇಳಿಕೊಂಡರು. ಸನ್ಮಾನ್ಯ ರಾಜಶೇಖರಮೂರ್ತಿಯವರು ಹಿಂದೆ ಮಂತ್ರಿಗಳಾಗಿದ್ದಾಗ ಪ್ರಾರಂಭವಾದಂಥ ನೀರಾವರಿ ಯೋಜನೆಗಳು ಇವತ್ತು ಅವರ ಕಾಲದಲ್ಲಿ ಮುಗಿಯುತ್ತಿವೆ. ಮಾನ್ಯ ಸದಸ್ಯರು ಈ ಸಭೆಯಲ್ಲಿ ಅವರನ್ನು ಸ್ಮರಿಸಿಕೊಳ್ಳಬೇಕು. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಅವರನ್ನು ಸ್ಮರಿಸಿದ್ದಾರೆ ಈ ಜಿಲ್ಲೆಯಲ್ಲಿ ರೈತರಿಗೆ ಹೆಚ್ಚು ನೀರಾವರಿ ಯೋಜನೆಗಳು ಆಗಿವೆ ಅದಕ್ಕೆ ಸಹಾಯ ಆಗಿದ್ದಾರೆ ಎಂದರೆ ಆ ಒಂದು ಕ್ರೆಡಿಟ್ ಮಾನ್ಯ ರಾಜಶೇಖರಮೂರ್ತಿಯವರಿಗೆ ಹೋಗಬೇಕು.

ಶ್ರೀ ವಾಟಾಳ್‌ನಾಗರಾಜ್.—ಹೌದೌದು, ಮಾನ್ಯ ರಾಜಶೇಖರಮೂರ್ತಿಯವರಿಗೆ ಅದರ ಕ್ರೆಡಿಟ್ ಹೋಗುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ರಾಜಶೇಖರಮೂರ್ತಿಯವರು ಹಿಂದೆ ಇಂಡಸ್ಟ್ರಿ ಮಿನಿಸ್ಟರ್ ಆಗಿದ್ದರು ಆಗ ಸನ್ಮಾನ್ಯ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾಗಿದ್ದರು. ಆಗ ಈ ಯೋಜನೆಗಳನ್ನು ಮಂಜೂರಾತಿ ಮಾಡಿರುವುದು. ಈಗ ರಾಜಶೇಖರಮೂರ್ತಿಯವರು ಹಣಕಾಸಿನ ಸಚಿವರಾಗಿದ್ದಾರೆ, ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾರೆ. ತಾರಕಾ ಯೋಜನೆ ಮಾಡಿಕೊಡುವ ಬಗ್ಗೆ ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆದರೂ ನಾವು ಒತ್ತಾಯ ಮಾಡುವುದು ಮಾಡುತ್ತಿದ್ದೇನೆ. ಆ ಬಗ್ಗೆ ಹೆಚ್ಚು ಆದ್ಯತೆ ಇರಬೇಕೆಂದು ಮಾನ್ಯ ಮಂತ್ರಿಗಳಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ನಮ್ಮ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಇರಿಗೇಷನ್ ಕೆಲಸ ಹೆಚ್ಚು ಆಗ ಬೇಕಾದದ್ದು ಇದೆ. ಏಕೆಂದರೆ ಹೆಗ್ಗಡದೇವನಕೋಟೆ ಕಾಡು ಪ್ರದೇಶ, ಆನೆಗಳು, ಹುಲಿಗಳು, ಇವುಗಳ ಕಾಟ ಜಾಸ್ತಿ ಇದೆ. ಇನ್ನು ರಸ್ತೆ ರಿಪೇರಿ ಸರಿಯಾಗಿ ಆಗಿಲ್ಲ. ಇದರಿಂದಾಗಿ ಬಸ್ಸು ಸಂಚಾರವನ್ನು ನಿಲ್ಲಿಸಿದ್ದಾರೆ. ಆದ್ದರಿಂದ, ರಸ್ತೆ ರಿಪೇರಿ ಮಾಡಿಸಲಿಕ್ಕೆ ಬಡ್ಜೆಟ್‌ನಲ್ಲಿ ಹೆಚ್ಚು ಹಣವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಸ್ವಾಮಿ, ಇನ್ನು ಜೂಜುಕಟ್ಟೆ ತೆರಿಗೆವಿಚಾರವನ್ನು ಹೇಳಬೇಕೆಂದರೆ, ರೇಸ್‌ಕೋರ್ಸ್‌ನಲ್ಲಿಬುಕ್ಕಿಗಳು ಏನಿದ್ದಾರೆ ಅವರೇ ಈ (ಕುಟ್ಟ) ಜೂಜು ಹಣವನ್ನು ತೆಗೆದುಕೊಂಡು ಟ್ಯಾಕ್ಸ್ ಕೊಡದೇ ಲಕ್ಷಾಂತರ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದಾರೆ. ಅವರು ಅರ್ಧಭಾಗದಷ್ಟು ಮಾತ್ರ ಟ್ಯಾಕ್ಸ್ ಕೊಡುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು. ರೇಸ್‌ಕೋರ್ಸ್‌ನಲ್ಲಿ ಏನೋ ಗೊತ್ತಿಲ್ಲದ ಹಾಗೆ ಒಳಗಡೆ ಮಾತನಾಡಿಕೊಂಡು ಒಂದು ಸಣ್ಣ ಸ್ಲಿಪ್ ಕೊಟ್ಟು ಕೊಂಡು ಈ ಬುಕ್ಕಿಗಳು ಜೂಜು ವ್ಯವಹಾರ ಮಾಡುತ್ತಿರುವುದರಿಂದ, ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಲಾಸ್ ಬರುತ್ತಿದೆ.

ಇನ್ನು ಗ್ರಾಮಾಂತರ ಬಸ್ಸುಗಳ ಬಗ್ಗೆ ಹೇಳಬೇಕೆಂದರೆ, ರಸ್ತೆ ಸಾರಿಗೆ ಸಂಸ್ಥೆಯವರು ಬಸ್ಸುಗಳು ಇಲ್ಲ ಎಂದು ಹೇಳುವುದರಿಂದ, ಬಸ್‌ಗಳ ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ಪ್ರತಿಯೊಂದು ಗ್ರಾಮದಲ್ಲೂ ಒಂದೊಂದು ಬಸ್ಸುಗಳು ಓಡಾಡಲಿಕ್ಕೆ ಸರ್ಕಾರ ಪರ್ಮಿಷನ್ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಇನ್ನು. ಗ್ರಾನೈಟ್ ಬಗ್ಗೆ ಎಲ್ಲಾ ಸದಸ್ಯರು ಹೇಳಿದ್ದಾರೆ. ಕಪ್ಪುಕಲ್ಲು ೧೯೭೮ರಲ್ಲಿ ದೇವರಾಜ್ ಅರಸರ ಕಾಲದಲ್ಲಿ ನ್ಯಾಷನಲೈಸ್ ಆಯಿತು. ಮತ್ತೆ ೧೯೮೩ರಲ್ಲಿ ಕಪ್ಪುಕಲ್ಲು, ಮಿಶ್ರಣಕಲ್ಲು ರಾಷ್ಟ್ರೀಕರಣ ಆಯಿತು. ಮೈಸೂರು ಮಿನರಲ್ಸ್ ಸಂಸ್ಥೆಯವರಿಗೆ ಕೊಟ್ಟಿದ್ದು. ಅವರು ರಾಜ್ಯದಲ್ಲಿ ಎಷ್ಟು ಕಪ್ಪು ಮಿಶ್ರಣಕಲ್ಲು ಇದೆ, ಎಷ್ಟು ಕ್ವಾರಿಗಳು ಇದೆ ಅಷ್ಟನ್ನು ತೆಗೆದುಕೊಂಡು ಮಾಡುತ್ತಿಲ್ಲ. ಹತ್ತು ಪರ್ಸೆಂಟ್ ಕೆಲಸಕೂಡ ಮಾಡುತ್ತಿಲ್ಲ. ಇದರಬಗ್ಗೆ ತಾವು ಅಂಕಿಅಂಶಗಳನ್ನು ತರಿಸಿಕೊಂಡು ನೋಡಿದರೆ ಗೊತ್ತಾಗುತ್ತದೆ. ನಮ್ಮ ರಾಜ್ಯದಲ್ಲಿ ನ್ಯಾಷನಲೈಸ್ ಆಗುವುದಕ್ಕೆ ಮೊದಲು ಎಷ್ಟು ಹಣ ಬರುತ್ತಿತ್ತು ಈಗ ಅವರಲ್ಲಿ ೭೫ ಪರ್ಸೆಂಟ್‌ನಷ್ಟು ಹಣ ಕಡಿಮೆಯಾಗಿದೆ. ಈಗ ಏನಾಗುತ್ತಿದೆ ಎಂದರೆ ಸರ್ಕಾರದ ಕ್ವಾರಿ ಜಮೀನುಗಳ ಪಕ್ಕದಲ್ಲಿರುವ ಜಮೀನು ಲೀಸ್‌ಗೆ ತೆಗೆದು ಕೊಂಡು ಅಲ್ಲಿ ಕಲ್ಲುಗಳನ್ನು ಇಲ್ಲಿಗೆ ಹಾಕಿಕೊಂಡು ವ್ಯವಹಾರ ಮಾಡುತ್ತಿದ್ದಾರೆ. ಇದನ್ನು ತಾವು ತಡೆಗಟ್ಟಬೇಕು. ಈಗ ಮೈಸೂರು ಮಿನರಲ್ಸ್ ಸಂಸ್ಥೆಯವರು ಫಾರಿನ್ ಎಕ್ಸ್‌ಚೇಂಜ್

ನಲ್ಲಿ ಹೋಗಿ ಕಡಿಮೆ ಬೆಲೆಗೆ ಒಪ್ಪಂದ ಮಾಡಿಕೊಂಡು ಬರುತ್ತಾರೆ. ಅವರಿಗೆ ಅನುಕೂಲವನ್ನು ಮಾಡಿಕೊಡುತ್ತಾರೆ. ಇವೊತ್ತು ರಾಜ್ಯದಲ್ಲಿ ಕ್ವಾರಿಗಳು ಏನು ಇವೆ. ಅದರಲ್ಲಿ ಹತ್ತು ಪರ್‌ಸೆಂಟ್ ಅಷ್ಟು ಕೆಲಸಮಾಡುತ್ತಿಲ್ಲ.

† ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರಿ).—ಸನ್ಮಾನ್ಯ ಅಧ್ಯಕ್ಷರೇ, ಇಂದು ನಮ್ಮ ದೇಶದ ಆರ್ಥಿಕ ಸಮಸ್ಯೆ ಹಲವಾರು ರೀತಿಯಲ್ಲಿ ಸಂದಿಗ್ಧ ಪರಿಸ್ಥಿತಿಯನ್ನು ಕಾಣುತ್ತಿರುವಾಗ ನಮ್ಮ ಕರ್ನಾಟಕ ಸರಕಾರದವರು ಈ ಬಾರಿ ಜನಸಾಮಾನ್ಯರ ದೃಷ್ಟಿಯಿಂದ ಅವರಿಗೆ ಅನುಕೂಲ ಮಾಡಿಕೊಡಬೇಕೆನ್ನುವ ಉದ್ದೇಶದಿಂದ ಬಹಳಷ್ಟು ಫಲಕಾರಿಯಾಗಿರುವಂತಹ ಈ ಆಯವ್ಯಯ ಮುಂಗಡ ಪತ್ರವನ್ನು ಈ ಸದನದಲ್ಲಿ ಏನು ಅರ್ಪಿಸಿದ್ದಾರೆಯೋ ಅದು ನಿಜವಾಗಿಯೂ ಅಭಿನಂದನೀಯ. ಮಾತ್ರವಲ್ಲದೆ ಯಾವ ಜನರು ಈ ಸಾರಿ ಕರ್ನಾಟಕದಲ್ಲಿ ಹೊಸ ಸರಕಾರ ಸಾಮಾನ್ಯ ಜನರ ಬಾಳನ್ನು ಉತ್ತಮಗೊಳಿಸುತ್ತದೆ ಎಂಬ ಆಶೆಯನ್ನು ಕಟ್ಟಿಕೊಂಡು ಈ ರಾಜ್ಯದ ಜನರು ತಮ್ಮ ಪ್ರತಿನಿಧಿಗಳನ್ನು ಆರಿಸಿದ್ದರೋ ಅವರೆಲ್ಲಾ ಸಂತೋಷದ ಉಸಿರನ್ನು ಬಿಡುವಂಥ ಯೋಗ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು, ಅದು ಏನೇ ಇರಲಿ ಈ ಸಾರಿಯ ಮುಂಗಡ ಪತ್ರದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮೂರ್ತೇದಾರರು ಮಾತ್ರ ಬಹಳಷ್ಟು ತೊಂದರೆಯನ್ನು ಅನುಭವಿಸುವಂತಹ ಸಂದಿಗ್ಧ ಪರಿಸ್ಥಿತಿ ಒದಗಿ ಬಂದಿದೆ. ಇದಕ್ಕೆ ಕಾರಣ ಇಷ್ಟೇ ಕರ್ನಾಟಕದಾದ್ಯಂತ ಸೇಂದಿ ಮಾರಾಟ ಉಂಟು ಅದರಲ್ಲಿ ಕಲಬೆರಕೆ ಕೂಡ ಉಂಟು ಎಂಬ ಭಾವನೆಯನ್ನು ಇಟ್ಟುಕೊಂಡು ವಿಷಪೂರಿತವಾದ ಸೇಂದಿಯನ್ನು ಜನರಿಗೆ ನೀಡಬಾರದೆಂಬ ಉದ್ದೇಶದಿಂದ ಸೇಂದಿ ಮಾರಾಟವನ್ನು ನಿಲ್ಲಿಸಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತಹ ಪರಿಸ್ಥಿತಿ ಇಲ್ಲ, ಅಲ್ಲಿ ಪ್ರತ್ಯೇಕವಾಗಿ ಇದೆ ಬಾಕಿ ಜಿಲ್ಲೆಯಲ್ಲಿ ಆಗುವಂತೆ ಜಿಲ್ಲಾವಾರು ಸೇಂದಿ ಹರಾಜಾಗದೆ ಅಲ್ಲಿ ಅಂಗಡಿವಾರು ಸೇಂದಿ ಹರಾಜಾಗುತ್ತಿದೆ. ಬೇರೆ ಜಿಲ್ಲೆಗಳಲ್ಲಿ ಯಾವ ಕಂಟ್ರಾಕ್ಟುದಾರರು ಇದ್ದಾರೆ ಅವರು ಮೂರ್ತೇದಾರರನ್ನು ಅಲ್ಲಿ ಕೂಲಿಗೆ ನೇಮಿಸಿಕೊಂಡು ಅವರಿಂದ ಸೇಂದಿಯನ್ನು ಪಡೆದು ಕಲಬೆರಕೆ ಮಾಡಿ ಮಾರಾಟ ಮಾಡುತ್ತಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಹಾಗಲ್ಲ. ಮೂರ್ತೇದಾರರು ತಮ್ಮ ಮರಿಂದಲೇ ಸೇಂದಿಯನ್ನು ಇಳಿಸಿ ಸೇಂದಿ ಅಂಗಡಿವಾರು ಮಾರಾಟ ಮಾಡುತ್ತಾರೆ. ಆ ಅಂಗಡಿಯವರಿಗೆ ಶುದ್ಧವಾದ ಸೇಂದಿಯನ್ನು ಕೊಡುತ್ತಾರೆ ಅವರು ಅದನ್ನು ಮಾರಾಟ ಮಾಡುತ್ತಾರೆ. ಬಡ ಜನರು ಈ ಶುದ್ಧವಾದ ಸೇಂದಿಯನ್ನು ಸೇವಿಸಿ ಸಂತೋಷವನ್ನು ಪಡುವಂತಹ ಪ್ರಮೇಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತು. ಆದರೆ ಇಡೀ ಕರ್ನಾಟಕಕ್ಕೆ ಒಂದೇ ಒಂದು ಕಾನೂನನ್ನು ತರುವ ಉದ್ದೇಶದಿಂದ ನಮ್ಮ ಸರಕಾರದವರು ಕರ್ನಾಟಕದಾದ್ಯಂತ ಸೇಂದಿ ನಿಷೇಧವನ್ನು ಜಾರಿಗೆ ತಂದಿದ್ದಾರೆ. ಇದು ನಿಜವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಬಹಳ ತೊಂದರೆಯಾಗುತ್ತದೆ. ಇದರಿಂದಾಗಿ ನಮ್ಮ ಜಿಲ್ಲೆಯ ೩೦,೦೦೦ ಜನಗಳಿಗೆ ಡೆತ್ ಅನ್ನು ತರುವ ಪ್ರಮೇಯ ಒದಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ದೌರ್ಭಾಗ್ಯವೆಂದು ಹೇಳಲಿಕ್ಕೆ ನಾನು ಬಹಳ ಚಿಂತಿತನಾಗಿದ್ದೇನೆ. ಬಂಧುಗಳೇ, ೧೯೪೮ನೇ ಇಸವಿಯಲ್ಲಿ ಆಗ ಇದ್ದ ಮದರಾಸ್ ಸರಕಾರದವರು ಈ ಮದ್ಯಪಾನ ನಿಷೇಧವನ್ನು ಜಾರಿಗೆ ತಂದರು ಆಗ ಜಿಲ್ಲೆಯಲ್ಲಿದ್ದಂತಹ ಹತ್ತು ಸಾವಿರ ಮೂರ್ತೇದಾರರು ಮತ್ತು ಅವರನ್ನು ಹೊಂದಿಕೊಂಡಿರತಕ್ಕಂತಹ ಇನ್ನೂ ಹತ್ತು ಸಾವಿರ ಜನರು ಕಠೋರವಾದಂತಹ ಆಂದೋಲನವನ್ನು ಮಾಡಿದ್ದರು. ಆಗ ನಮ್ಮ ಜಿಲ್ಲೆ ಮದರಾಸ್ ಪ್ರಾಂತ್ಯಕ್ಕೆ ಸೇರಿಕೊಂಡಿತ್ತು. ಮದ್ರಾಸ್ ಸರಕಾರದವರು ಈ ಮೂರ್ತೇದಾರರಿಗೆ ಅನುಕೂಲವನ್ನು ಮಾಡಿಕೊಟ್ಟಿದ್ದರು. ಈ ಮೂರ್ತೇದಾರರಿಗೆ ಬೇಕಾದಂತಹ ೧೧೨ ಮೂರ್ತೇದಾರರ ಸೊಸೈಟಿಯನ್ನು ಜಿಲ್ಲೆಯಾದ್ಯಂತ ಸ್ಥಾಪಿಸಿ ಅವರಿಗೆ ಬೇಕಾದಂತಹ ಸವಲತ್ತುಗಳನ್ನು ಆರ್ಥಿಕ ಸಹಾಯವನ್ನೂ ತನ್ಮೂಲಕ ಕೊಟ್ಟು ಬೆಲ್ಲ, ನೀರ ತಯಾರಿಸುವಂತಹ ಅವಕಾಶವನ್ನು ಮಾಡಿಕೊಟ್ಟರು. ಆ ಮೂಲಕ ಈ ಮೂರ್ತೇದಾರರು ತಮ್ಮ ಕಸುಬನ್ನು ನಿಲ್ಲಿಸದೇ ಮುಂದುವರಿಸಿಕೊಂಡು ಹೋಗಲು ಅನುಕೂಲ ಮಾಡಿಕೊಟ್ಟರು. ಮದರಾಸ್ ಸರಕಾರ ನಮ್ಮ ಜಿಲ್ಲೆಯಲ್ಲಿ ಪಾನ ನಿಷೇಧವನ್ನು ತಂದಿದ್ದರೂ ಕೂಡ ಮೂರ್ತೇದಾರರಿಗೆ ಏನೂ ತೊಂದರೆಯಾಗಲಿಲ್ಲ. ಅದೇ ಪ್ರಕಾರ ೧೯೬೭ನೇ ಇಸವಿಯಲ್ಲಿ, ಪಾನ ನಿಷೇಧ ರದ್ದಾಗಿ ಪಾನದ ಹರಾಜು ಅಂದರೆ ಸೇಂದಿಯ ಹರಾಜು ಆದಂತಹ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ವೈಶಿಷ್ಟ್ಯತೆಯೇ ಬೇರೆ ಇತ್ತು. ಅಲ್ಲಿ ಜಿಲ್ಲಾವಾರು ಹರಾಜು ಇಲ್ಲವೇ ಇಲ್ಲ. ಅಲ್ಲಿರತಕ್ಕದ್ದು ಅಂಗಡಿವಾರು ಹರಾಜು. ಹೀಗಿರುವಾಗ ಕೇವಲ ಸೇಂದಿ ಅಂಗಡಿ ಅಷ್ಟೇ ಅಲ್ಲಾ ಶರಾಬು ಅಂಗಡಿಯೂ ಕೂಡ ಅಂಗಡಿವಾರು ಹರಾಜಾಗುತ್ತದೆ. ಸಾಮಾನ್ಯವಾಗಿ ಸಮಾಜವಾದ ಸಿದ್ಧಾಂತವನ್ನು ನಮ್ಮ ಜಿಲ್ಲೆಯವರು ಅಳವಡಿಸಿಕೊಂಡಿದ್ದರು. ೧೯೭೨ನೇ ಇಸವಿಯಲ್ಲಿ ಜಿಲ್ಲಾವಾರು ಹರಾಜು ಆಗಬೇಕೆಂದು ನಮ್ಮ ಕರ್ನಾಟಕ ಸರ್ಕಾರದವರು ಮಾಡಿದರು. ಅದರ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯವರು ಜಿಲ್ಲಾವಾರು ಹರಾಜು

ಮಾಡಲು ಏರ್ಪಾಡು ಮಾಡಿದರು. ಆಗ ನಮ್ಮ ಮೂರ್ತೇದಾರರು ಬಹಳಷ್ಟು ಪ್ರತಿಭಟನೆ ಮಾಡಿ ಸತ್ಯಾಗ್ರಹವನ್ನು ಮಾಡಿದರು, ಯಾವ ವ್ಯಕ್ತಿ ಹರಾಜಿನಲ್ಲಿ ನಿಂತಿದ್ದ ಅದನ್ನು ರದ್ದುಮಾಡಿ ಪುನರಪಿ ಅಂಗಡಿವಾರು ಹರಾಜು ಮಾಡುವಂತೆ ವ್ಯವಸ್ಥೆ ಮಾಡಿದರು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಬೇರೆ ಜಿಲ್ಲೆಗಳನ್ನು ನಿಮ್ಮ ದೃಷ್ಟಿಕೋನದಲ್ಲಿಟ್ಟುಕೊಂಡು ಅದನ್ನು ನಮ್ಮ ಜಿಲ್ಲೆಗೆ ಅನ್ವಯಿಸುವುದಾದರೆ ನಮ್ಮ ಜಿಲ್ಲೆಯಲ್ಲಿರತಕ್ಕ ೧೦ ಸಾವಿರ ಜನ ಮೂರ್ತೇದಾರರು ಮತ್ತು ಅವರನ್ನು ಹೊಂದಿಕೊಂಡು ಸೇಂದಿ ಅಂಗಡಿಗೆ ಸೇಂದಿಯನ್ನು ಕೊಂಡು ಹೋಗುವಂಥ ೨೦ ಸಾವಿರ ಜನ ಸಹಾಯಕರು ಯಾರಿದ್ದಾರೆ ಅವರೆಲ್ಲರೂ ನಿರುದ್ಯೋಗಿಗಳಾಗಿ ಕೊನೆಗೆ ನಮ್ಮ ಕರ್ನಾಟಕ ರಾಜ್ಯಕ್ಕೆ ಒಂದು ದೊಡ್ಡ ಸಮಸ್ಯೆಯನ್ನು ತರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಮೂರನೇ ಒಂದು ಭಾಗದಷ್ಟು ಜನರಿಗೆ ಇರತಕ್ಕ ಅವರ ಮೇಲೆ ಈ ಒಂದು ಕಠೋರವಾದ ಅಪ್ರಿಯವಾದ ಅಸ್ತ್ರವನ್ನು ಪ್ರಯೋಗ ಮಾಡಿದ್ದರಿಂದ ಕೂಡಲೇ ನಾವು ನಮ್ಮ ಜಿಲ್ಲೆಯಲ್ಲಿ ಒಂದು ಆಂದೋಳನವನ್ನು ಪ್ರಾರಂಭ ಮಾಡಿದ್ದಾರೆ. ಈ ಸರ್ಕಾರದವರು ನಮ್ಮ ಜಿಲ್ಲೆಯ ಮೂರ್ತೇದಾರರ ಮೇಲೆ ಏನು ಕಾನೂನನ್ನು ತಂದಿದ್ದಾರೆ ಅದು ಸರಿಯಲ್ಲ. ನಮ್ಮ ತುಳುವಿನಲ್ಲಿ ಒಂದು ಮಾತನ್ನು ಹೇಳುವುದಾದರೆ:

"ಉಜೆರನ್ ತಿರ್ತ್ ಪಾಡ್ಡ್ ತಲೆ ಉಂತಾಯೆರ್ದ ಎಂಕಲನ ಸತ್ಯಾಗ್ರಹವುಂಡು" ಅಂತ
ಕುಜಲಿನ್ ತಿರ್ತ್ ಪಾಡ್ದ್ ಕಲಿ ಉಂತಾಯೆರ್ದ ಎಂಕಲನ ಸತ್ಯಾಗ್ರಹ ಉಂಡೋ'

ಎಂಬ ಈ ಒಂದು ಆಂದೋಲನವನ್ನು ಪ್ರಾರಂಭ ಮಾಡಿದ್ದೇವೆ ಇದರಿಂದಾಗಿ ನಮ್ಮ ಕರ್ನಾಟಕ ರಾಜ್ಯಕ್ಕೆ ಒಂದು ರೀತಿಯ ಸಂದಿಗ್ಧ ಪರಿಸ್ಥಿತಿ ಬಂದಂತಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕಾನೂನನ್ನು ತರತಕ್ಕ ವಿಚಾರ ತಿಳಿದ ಕೂಡಲೇ ನಮ್ಮ ಜಿಲ್ಲೆಯ ೧೫ ಜನ ಶಾಸಕರು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಮಾಡಿ ನಮ್ಮ ಜಿಲ್ಲೆಯ ಮಟ್ಟಿಗೆ ಈ ಕಾನೂನನ್ನು ತರಬಾರದು, ಸೇಂದಿಯನ್ನು ಅಂಗಡಿವಾರು ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿದಾಗ ಮುಖ್ಯ ಮಂತ್ರಿಗಳು ಹೇಳಿದರು, ಅಲ್ಲಿ ಒಂದು ಫೆನ್ನಿ ಫ್ಯಾಕ್ಟರಿಯನ್ನು ಮಾಡಿ ನಿಮ್ಮ ಮೂರ್ತೇದಾರರಿಗಾಗಲಿ, ನಿಮ್ಮ ಕಸುಬಿನವರಿಗಾಗಲಿ ತೊಂದರೆಯನ್ನು ಮಾಡುವುದಿಲ್ಲ, ಅಲ್ಲಿ ನೀರಾವನ್ನು ಮಾಡಿ, ಬೆಲ್ಲವನ್ನೂ ಮಾಡಿ, ಫೆನ್ನಿಯನ್ನು ಮಾಡಿ ಎಂದು ಸಲಹೆಯನ್ನು ಕೊಟ್ಟಿದ್ದಾರೆ. ನಾನಾದರೂ ಹೇಳುತ್ತೇನೆ, ಅಲ್ಲಿ ಫೆನ್ನಿ ಫ್ಯಾಕ್ಟರಿಯನ್ನು ಮಾಡುವುದು ಇನ್ನುಳಿದಿರತಕ್ಕ ೩ ತಿಂಗಳಲ್ಲಿ ಎಷ್ಟರಮಟ್ಟಿಗೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು. ತಾಳೆಬೆಲ್ಲವನ್ನು ತಯಾರಿಸಬೇಕಾದರೆ ಈಗಿನ ಕಟ್ಟಿಗೆಯ ಧಾರಣೆಯಲ್ಲಿ ಬೆಲ್ಲವನ್ನು ತಯಾರು ಮಾಡುವುದು ಲಾಭದಾಯಕವಾಗುವುದಿಲ್ಲ. ಅಷ್ಟೇ ಅಲ್ಲ ಆ ಬೆಲ್ಲಕ್ಕೆ ಮಾರುಕಟ್ಟೆ ಕೂಡ ಸಿಕ್ಕುವುದಿಲ್ಲ. ಬೊಂಬಾಯಿಯಲ್ಲಿ ಸೇಂದಿಯಿಂದ ನೀರಾವನ್ನು ತಯಾರಿಸುವ ಯೋಜನೆ ಇದೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆಯೋ ಗೊತ್ತಿಲ್ಲ. ೧೦ ಸಾವಿರ ಜನ ಮೂರ್ತೇದಾರರ ವರ್ಗಕ್ಕೆ ಸೇರಿದವರಲ್ಲಿ ನಾನೂ ಕೂಡ ಒಬ್ಬ. ಈ ಸಂದರ್ಭದಲ್ಲಿ ನಮ್ಮ ರಾಜ್ಯಸರ್ಕಾರದಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ ಈ ನಮ್ಮ ಮೂರ್ತೇದಾರರಿಗೆ ಪ್ರತ್ಯೇಕವಾದ ಉದ್ಯೋಗವನ್ನು ಕಲ್ಪಿಸುವವರೆಗೆ ಅಂದರೆ ೧ ವರ್ಷದ ಮಟ್ಟಿಗೆ ಅಂದರೆ ಫೆನ್ನಿ ಫ್ಯಾಕ್ಟರಿಯನ್ನು ಸಂಪೂರ್ಣವಾಗಿ ಮಾಡಿ ಅನಂತರ ಈ ಕಾನೂನನ್ನು ಜಾರಿಗೆ ತನ್ನಿ. ಸ್ವಾಮಿ, ನಮ್ಮ ಜಿಲ್ಲೆಯಲ್ಲಿ ಕಲಬೆರಕೆ ಆಗತಕ್ಕ ಸೇಂದಿ ಯಾವುದೂ ಇಲ್ಲ.

ಫೆನ್ನಿ, ಶರಾಬು, ಬ್ರಾಂದಿ, ವಿಸ್ಕಿ ಇನ್ನೂ ಮುಂತಾದುವು ಏನಿವೆ ಇವು ಮನುಷ್ಯನ ಆರೋಗ್ಯಕ್ಕೆ ಅಪಾಯಕಾರಿ. ಆದರೆ ನಮ್ಮ ಭಾಗದ ಸೇಂದಿ ಆರೋಗ್ಯದಾಯಕವಾದುದು. ಸೋಮರಸ ಇದು ಎಂದು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ ಇವತ್ತು ಸರ್ಕಾರದ ಈ ಕಾನೂನಿನಿಂದ ನಮ್ಮ ಭಾಗದ ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ನಮ್ಮ ಜನರ ಕೋರಿಕೆಯನ್ನು ಕೂಡಲೇ ಕಾರ್ಯಗತಗೊಳಿಸಬೇಕೆಂದು ಅವರೆಲ್ಲರ ಪರವಾಗಿ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಸದನದ ಮುಂದೆ ಮಾನ್ಯ ಸಚಿವರು ಮಂಡಿಸಿರುವ ಆಯವ್ಯಯದಲ್ಲಿ ನೋಡಿದರೆ ಈ ಕರ್ನಾಟಕ ರಾಜ್ಯದಲ್ಲಿ ೧೨ ಸಾವಿರ ಅಧ್ಯಾಪಕರ ಕೊರತೆ ಇದೆ ಇದನ್ನು ತುಂಬಬೇಕಾಗಿದೆ ಎಂದು ಅವರು ಹೇಳಿದ್ದಾರೆ. ಶಾಲೆಗಳಲ್ಲಿ ಅಧ್ಯಾಪಕರಿಲ್ಲದೆ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಕೊಡದೆ ನಾವೇ ನಮ್ಮ ಮಕ್ಕಳನ್ನು ಹಾಳು ಮಾಡುತ್ತಿದ್ದೇವೆ. ಒಂದು ಉದಾಹರಣೆ ಹೇಳುವುದಾದರೆ ಕಳೆದ ೩ ವರ್ಷಗಳ ಒಂದೆ ಶಾಲೆಗಳನ್ನು ಮಂಜೂರು ಮಾಡಿದರು. ಆದರೆ ಅಲ್ಲಿಗೆ ಉಪಾಧ್ಯಾಯರ ಪೋಸ್ಟ್‌ಗಳನ್ನು ಸ್ಯಾಂಕ್ಷನ್ ಮಾಡಲಿಲ್ಲ. ಒಂದು ಶಾಲೆಯ ಒಬ್ಬ ಉಪಾಧ್ಯಾಯರನ್ನು ಇನ್ನೊಂದು ಶಾಲೆಗೆ ಕರೆದುಕೊಂಡು ಹೋದರೆ ಅಲ್ಲೂ ಕೂಡ ಉಪಾಧ್ಯಾಯರಿಲ್ಲ. ಅಂದರೆ ಎರಡು ಶಾಲೆಗಳಲ್ಲೂ ಅಧ್ಯಾಪಕರೇ ಇಲ್ಲದಿರತಕ್ಕ ಒಂದು ಧಾರುಣ ಪರಿಸ್ಥಿತಿ ನಮ್ಮ ಕರ್ನಾಟಕ ರಾಜ್ಯದಲ್ಲಿದೆ. ಆದ್ದರಿಂದ

ನಮ್ಮ ಮಾನ್ಯ ಮಂತ್ರಿಯವರು ಈ ವರ್ಷದಲ್ಲಿ ಎಲ್ಲಾ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂಥ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದನ್ನು ಮಾಡಲಿಕ್ಕೆ ಹೊರಟಾಗ ಅನುದಾನ ಪಡೆಯುವಂತ ಶಾಲೆಗಳಲ್ಲಿ ಅಧ್ಯಾಪಕರ ಪೋಸ್ಟ್‌ಗಳನ್ನು, ರಿಟೈರ್ ಆಗುವಂಥ ಮತ್ತು ರಾಜೀನಾಮೆ ಕೊಡುವಂಥ ಕಾಲದಲ್ಲಿ ಆಗುವುದಿದ್ದು ಅದನ್ನು ಭರ್ತಿ ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಶಾಲಾ ಕಟ್ಟಡಗಳ ಕೊರತೆ ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಲ್ಲಿ ಇದೆ. ಪ್ರತಿ ಕೋಣೆಗೆ ೩೦ ಸಾವಿರ ರೂಪಾಯಿಗಳನ್ನು ಕೊಡುವಂಥ ಯೋಜನೆಯನ್ನು ಮಾಡಿದ್ದೀರಿ. ಊರಿನವರು ಹಣವನ್ನು ಹಾಕಿಕೊಂಡು ನಿರ್ಮಿಸುವ ಮತ್ತು ಕಟ್ಟಡಕ್ಕೆ ಹಣವನ್ನು ಕೊಡುವಂಥ ಯೋಜನೆಯನ್ನು ರೂಪಿಸಿದರೆ ಬಹಳ ಉತ್ತಮ. ಏತಕ್ಕೆಂದರೆ ಒಂದು ಶಾಲೆ ಬೆಳೆಯಬೇಕಾದರೆ ಉತ್ತಮ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಆ ಊರಿನವರ ಸಹಕಾರ ಬಹಳ ಮುಖ್ಯವಾಗಿ ಬೇಕಾಗುತ್ತದೆ. ಅಂಥ ಶಾಲಾ ಕಟ್ಟಡಗಳಿಗೆ ಹಣ ಹೂಡಿದರೆ ಅವರ ಶಾಲೆ ಎನ್ನುವಂಥ ಮನೋಭಾವ ಬಂದು ತಮ್ಮ ಮಕ್ಕಳು ಕಲಿಯುತ್ತಿರುವ ಶಾಲೆ ಸರ್ವತೋಮುಖ ಅಭಿವೃದ್ಧಿಯಾಗಲಿ ಎನ್ನುವ ಭಾವನೆ ಇರುತ್ತದೆ. ಇಂಥ ಒಂದು ಯೋಜನೆಯನ್ನು ರೂಪಿಸಿಕೊಂಡುದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದಿಸುತ್ತೇನೆ.

ಇನ್ನು ಮೂರನೆಯದಾಗಿ ಯಾವ ಒಂದು ರಿಕ್ರೂಟ್‌ಮೆಂಟ್ ರೂಲ್ ಇರುತ್ತದೆ ಅದು ನಿಜವಾಗಿಯೂ ಬಹಳ ಅನ್ಯಾಯವಾದುದಾಗಿದೆ. ಜಿಲ್ಲಾವಾರು ನೇಮಕಾತಿಯಾಗುವಾಗ ಆಯಾ ಜಿಲ್ಲೆಗೆ ಸೇರಿದವರನ್ನೇ ನೇಮಕ ಮಾಡಿಕೊಳ್ಳಬೇಕು. ಏತಕ್ಕೆಂದರೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಗುಲ್ಬರ್ಗಾ ಜಿಲ್ಲೆಯ ಒಬ್ಬ ಅಧ್ಯಾಪಕರನ್ನು ನಮ್ಮ ಕ್ಷೇತ್ರಕ್ಕೆ ನೇಮಿಸಿದರು. ಆ ಅಧ್ಯಾಪಕರು ಹೆಡ್‌ಮಾಸ್ಟರಾಗಿದ್ದರು. ಅವರನ್ನು ನಾನು ಒಂದು ದಿವಸ ಹೋಗಿ ಏನು ಕೆಲಸ ಮಾಡುತ್ತಿದ್ದೀರಿ ಎಂದು ಕೇಳಿದೆ. ಅದಕ್ಕೆ ಅವರು ಉರ್ದುನಲ್ಲಿ ಹೇಳಿದರು.

> „ನನಗೆ ಕನ್ನಡ ಬರುವುದಿಲ್ಲ. ನನಗೆ ಇಂಗ್ಲೀಷ್ ಕೂಡ ಬರುವುದಿಲ್ಲ. ಬರೀ ಉರ್ದು ಮಾತ್ರ ಬರುತ್ತದೆ. ಹಾಗಾದರೆ ಏನು ಮಾಡಬೇಕೆಂದು ಕೇಳಿದಾಗ ಅವರು ನನಗೆ ಹೇಗಾದರೂ ಮಾಡಿ ಗುಲ್ಬರ್ಗಾಕ್ಕೆ ವರ್ಗಾವಣೆ ಮಾಡಿಸಿಕೊಡಿ ಎಂದು ಹೇಳಿದರು." 

ಇಂಥ ಒಂದು ಪರಿಸ್ಥಿತಿ ಒದಗಿ ಬಂದಿದೆ. ಆದ್ದರಿಂದ ಕರ್ನಾಟಕದ ಮೂಲೆಯಲ್ಲಿ ಇಂತಹ ಅಧ್ಯಾಪಕರು ಅಂದರೆ ಉತ್ತರ ಕರ್ನಾಟಕದಲ್ಲಿರುವವರನ್ನು ದಕ್ಷಿಣ ಕರ್ನಾಟಕಕ್ಕೆ ಕಳುಹಿಸುವುದರಿಂದ ಬಹಳ ಅನಾನುಕೂಲವಾಗುತ್ತದೆಯೇ ಹೊರತು ಅನುಕೂಲವಾಗುವುದಿಲ್ಲ. ಇದು ನಿಲ್ಲಬೇಕು. ನಮ್ಮ ಸರ್ಕಾರದವರು ಡಿಪಾರ್ಟ್‌ಮೆಂಟ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿಯೇ ಆಯಾ ಜಿಲ್ಲೆಯವರನ್ನು ಆಯಾ ಜಿಲ್ಲೆಗೆ ಅಧ್ಯಾಪಕರನ್ನಾಗಿ ನೇಮಕ ಮಾಡಲು ಕಾರ್ಯಪ್ರವೃತ್ತರಾದರೆ ಯಾವುದೇ ಶಾಲೆ ವಿದ್ಯಾರ್ಥಿಯ ಮಟ್ಟ ಉತ್ತಮ ಮಟ್ಟಕ್ಕೆ ಹೋಗುತ್ತದೆ. ಇಲ್ಲದಿದ್ದರೆ ಕುಂಠಿತವಾಗುತ್ತದೆಂದು ಹೇಳುತ್ತೇನೆ. ಅದಕ್ಕೋಸ್ಕರವಾಗಿ ಗುಲ್ಬರ್ಗಾದವರನ್ನು ಕೋಲಾರಕ್ಕೋ ದಕ್ಷಿಣ ಕನ್ನಡ ಜಿಲ್ಲೆಗೋ ಹಾಕಿಬಿಟ್ಟರೆ ಅಲ್ಲಿಯ ಆಹಾರ ಅವರಿಗೆ ಹಿಡಿಸುವುದಿಲ್ಲ. ಶೆಕೆ ಬೆವರು ತಾಳುವುದಕ್ಕಾಗುವುದಿಲ್ಲ ಅವರು ಯಾವಾಗಲೂ ತಮ್ಮ ಸ್ಥಳಕ್ಕೆ ಹೋಗಲು ಯಾವುದೋ ಒತ್ತಡವನ್ನು ತಂದು ಅದೇ ಚಿಂತನೆಯಲ್ಲಿರುತ್ತಾರೆ. ಇದರಿಂದ ಶಾಲೆಗಳಲ್ಲಿ ಮಕ್ಕಳಿಗೆ ಪಾಠವನ್ನು ಕಲಿಸುವ ಮನಸ್ಸೇ ಇರುವುದಿಲ್ಲ, ಯಾವಾಗ ಊರಿಗೆ ಹೋಗುತ್ತೇನೆಯೋ ಎನ್ನುವ ಚಿಂತನೆಯಲ್ಲಿಯೇ ಇರುತ್ತಾರೆ. ಮಕ್ಕಳ ಬಗ್ಗೆ ಚಿಂತನೆಯೇ ಇರುವುದಿಲ್ಲ. ಆದ್ದರಿಂದ ಅಧ್ಯಾಪಕರನ್ನು ನೇಮಕ ಮಾಡಿದರೆ ಹತ್ತು ವರ್ಷಗಳ ಕಾಲ ವರ್ಗಾವಣೆಯೇ ಇಲ್ಲವೆಂದು ಮಾಡಿಬಿಡಬೇಕು. ೧೦ ವರ್ಷಗಳ ಕಾಲ ತಾನು ದುಡಿಯಲೇಬೇಕೆಂಬ ಅಭಿಪ್ರಾಯದಿಂದಿರುತ್ತಾನೆ ಮತ್ತು ಅಲ್ಲಿಯ ಜನರನ್ನು ಹೊಂದಿಕೊಂಡು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನವನ್ನು ಕೊಡುತ್ತಾನೆ. ಇಂಥ ಒಂದು ಬದಲಾವಣೆ ವಿದ್ಯಾ ಇಲಾಖೆಯವರು ಮಾಡಬೇಕು.

ಇನ್ನು ಸಹಕಾರಿ ಸಂಘಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಒಳ್ಳೆಯ ಉದ್ದೇಶದಿಂದ ಸ್ಥಾಪನೆ ಮಾಡಲ್ಪಟ್ಟಿರುತ್ತವೆ. ಆದರೆ ಬಹುತೇಕ ಸೊಸೈಟಿಗಳಲ್ಲಿ ಬಹಳಷ್ಟು ಅನ್ಯಾಯಗಳು ನಡೆಯುತ್ತಿವೆ. ಮುಖ್ಯವಾಗಿ ಮೇಲ್ವಿಚಾರಣೆ ಯೋಗ್ಯ ರೀತಿಯಲ್ಲಿ ಆಗದ ಕಾರಣದಿಂದಾಗಿ ಬಹಳ ತೊಂದರೆಯುಂಟಾಗಿದೆ. ನನ್ನ ಊರಿನ ಒಂದು ಸೊಸೈಟಿ ಅಂದರೆ ಒಂದು ಕೋಆಪರೇಟಿವ್ ಬ್ಯಾಂಕ್ ಇತ್ತು. ಒಂದು ವರ್ಷವಾಯಿತು ೨೫ ಲಕ್ಷ ರೂಪಾಯಿ ಬೆಲೆ ಬಾಳುವಂಥ ಚಿನ್ನ ಕಳ್ಳರು ಕದ್ದುಕೊಂಡು ಹೋದರು. ಆದ್ದರಿಂದ ಆ ಬ್ಯಾಂಕು ದಿವಾಳಿಯಾಗುವಂಥ ಸಂದರ್ಭ ಬಂದಿತು. ಆದರೆ ಅಲ್ಲಿ ಯಾವ ಡೈರೆಕ್ಟರ್ ಇದ್ದರು ಆ ಡೈರೆಕ್ಟರ್ ತಮ್ಮ ಹಣಕ್ಕೆ ತೊಂದರೆ ಉಂಟಾಗುತ್ತದೆಂದು ಅವರು ಇಟ್ಟಿದ್ದ ಡಿಪಾಸಿಟ್ ಹಣವನ್ನು ಬೇಗ ತೆಗೆದುಕೊಂಡರು. ಬಾಕಿ ಊರಿನ ಜನರು ಹಾಕಿದ್ದ ಡಿಪಾಸಿಟ್ ಹಣ

ಮತ್ತು ಎಸ್.ಬಿ.ಯಲ್ಲಿಟ್ಟಿದ್ದ ಹಣ ಕಾಣವಂತಾಯಿತು. ಇಂಥ ಒಂದು ಪ್ರಕರಣಗಳಿಂದ ಕರ್ನಾಟಕದಲ್ಲಿ ಸಹಕಾರಿ ಸಂಘಗಳು ತಮ್ಮ ವಿಶ್ವಾಸವನ್ನೇ ಕಳೆದುಕೊಳ್ಳುವಂಥಾಗಿದೆ. ಆದ್ದರಿಂದ ಸಹಕಾರಿ ಸಂಘಗಳು ಬೆಳೆಯಬೇಕಾದರೆ ಹೆಚ್ಚಿನ ನಿಗಾವಹಿಸಬೇಕು. ಉತ್ತಮಮಟ್ಟದಲ್ಲಿ ಕೆಲಸವಾಗುವಂಥ ಸೊಸೈಟಿಗಳ ಬಗ್ಗೆ ನಿರ್ಲಕ್ಷಿಣವಾದಂಥ ಒಂದು ಮೇಲ್ವಿಚಾರಣೆಯನ್ನು ಇಟ್ಟುಕೊಳ್ಳುವುದು ಬಹಳ ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

೧-೩೦ ಪಿ.ಎಂ.

ಮೂರನೆಯದಾಗಿ ನಮ್ಮ ದೇಶದಲ್ಲಿರುವಂಥ ಸಮಸ್ಯೆ ಎಂದರೆ ನಿರುದ್ಯೋಗ ಸಮಸ್ಯೆ. ಇದು ನಮ್ಮ ದೇಶದ ಸಮಸ್ಯೆ, ಅದರೊಟ್ಟಿಗೆ ಕರ್ನಾಟಕದ ಸಮಸ್ಯೆಯಾಗಿದೆ. ಇಂದು ಕಲಿತಂಥ ವಿದ್ಯಾರ್ಥಿಗಳು, ಬಿ.ಎ. ಎಂ.ಎ. ಮಾಡಿದವರಿಗೆ ಒಂದು ಕೆಲಸ ಮಾತ್ರ ನಮ್ಮಲ್ಲಿದೆ. ಅದು ಯಾವುದು ಎಂದರೆ ಕೆಲಸ ಹುಡುಕುವುದು ಪತ್ರಿಕೆಗಳಲ್ಲಿ ಬರುವ ಪ್ರಕಟಣೆಗಳನ್ನು ನೋಡಿ ಎಲ್ಲಿ ಖಾಲಿ ಹುದ್ದೆಗಳು ಇದೆ. ಅಲ್ಲಿಗೆ ಅರ್ಜಿ ಹಾಕಿ ಕಾಯುತ್ತಿರುವುದು. ಇಂಥ ಪ್ರಮೇಯ ಯುವಕರಿಗೆ ಬರಬಾರದು. ಎಲ್ಲಾ ಪೋಸ್ಟ್‌ಗಳನ್ನು ಭರ್ತಿ ಮಾಡುವಾಗ ಈ ಖಾಲಿ ಹುದ್ದೆಗಳು ಭರ್ತಿಯಾಗುತ್ತವೆ. ಇವತ್ತು ನಿವೃತ್ತಿ ವಯಸ್ಸನ್ನು ೫೮ ರಿಂದ ೫೫ಕ್ಕೆ ಇಳಿಸುವ ಯೋಜನೆ ಬಹಳ ಉತ್ತಮವಾದುದು. ಇಲ್ಲದಿದ್ದರೆ ಈ ಯುವಕರು ಕರ್ನಾಟಕದ ದೊಡ್ಡ ಶತ್ರು ರೂಪದಲ್ಲಿ ಬಂದು. Idle mind is the devils workshop ಅಂದಹಾಗೆ ಕೆಲಸ ಇಲ್ಲದ ಯುವಕರು ದೇಶದ ಮೇಲೆ ಅಪಾಯ ತರುವ, ಕರ್ನಾಟಕದ ಸಂಪತ್ತಿಗೆ ಧಕ್ಕೆ ತರುವ ಶಕ್ತಿಯಾಗುತ್ತಾರೆ. ಆದ್ದರಿಂದ ಅಷ್ಟು ಕಾಲ ಹೊಸ ಶಾಲೆಗಳನ್ನು ತೆರೆಯಬೇಡಿ. ಯುವಕರಿಗೆ ಒಳ್ಳೆಯ ಉದ್ಯೋಗ ಕೊಡಿ. ಇರುವ ಶಾಲೆಗಳನ್ನು ಒಳ್ಳೆಯದಾಗಿ ಉಳಿಸಿ, ಬೆಳಸಿ ಎಂದು ಹೇಳುತ್ತಾ, ಕಡೆಯದಾಗಿ ನಮ್ಮ ಕರ್ನಾಟಕ ಸರ್ಕಾರದವರು ಯಾವ ಭೂಹೀನರಿಗೆ ಅಕ್ರಮವಾಗಿರುವಂತಹ ಸರ್ಕಾರೀ ಭೂಮಿಯನ್ನು ಸಕ್ರಮಗೊಳಿಸುವ ಕೆಲಸ ಮಾಡುತ್ತಿದ್ದಾರೆ ಇದು ಬಹಳ ಒಳ್ಳೆಯ ಯೋಜನೆ. ದೊಡ್ಡ ದೊಡ್ಡ ಭೂಮಾಲೀಕರು, ಬಡವರು ಅರ್ಜಿ ಹಾಕಿದಾಗ ಅವರಿಗೆ ಆ ಭೂಮಿ ಸಿಗದಂತೆ ತೊಂದರೆ ಮಾಡುತ್ತಿದ್ದಾರೆ. ಈ ಬಗ್ಗೆ ಜಾಗ್ರತೆ ವಹಿಸಿ ಬಡವರಿಗೆ. ೧೦-೨೦ ವರ್ಷಗಳಿಂದ ಸಾಗುವಳಿಮಾಡಿಕೊಂಡು ಬಂದ ಭೂಮಿಯನ್ನು ಅವರಿಗೆ ಕೊಡುವ ಕೆಲಸ ಮಾಡಬೇಕು. ಇದು ಸರ್ಕಾರೀ ಅಧಿಕಾರಿಗಳಿಂದ ಆಗದಿದ್ದರೆ ಅದಕ್ಕೆ ಒಂದು ಕಮಿಟಿ ನೇಮಿಸಿ ೩-೪ ತಿಂಗಳಲ್ಲಿ ಪಾಪದ ಬಡವರಿಗೆ ಆ ಭೂಮಿ ಸಿಗುವಂತೆ ಮಾಡಬೇಕು. ಸರ್ಕಾರ ಈ ಕೆಲಸವನ್ನು ಖಂಡಿತ ಮಾಡಬೇಕೆಂದು ಕೇಳಿಕೊಂಡು ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಯು.ಕೆ ಶಾಮಣ್ಣ (ಶೃಂಗೇರಿ).—ಸನ್ಮಾನ್ಯ ಅಧ್ಯಕ್ಷಿಣಿಯವರೆ, ಈ ದಿವಸ ಮಾನ್ಯ ರಾಜಶೇಖರ ಮೂರ್ತಿಯವರು ಮಂಡಿಸಿರತಕ್ಕ ೧೯೮೦-೮೧ನೇ ಸಾಲಿನ ಆಯವ್ಯಯ ಪತ್ರವನ್ನು ನಾನು ಮನಸಾರೆ ಮೆಚ್ಚಿ ಅವರು ಬಹಳ ಉತ್ತಮವಾಗಿರುವಂತಹ ಪೂರ್ವ ಯೋಜನೆಯನ್ನಿಟ್ಟುಕೊಂಡು ಇದನ್ನು ಮಂಡಿಸಿದ್ದಾರೆಂದು ಹೇಳಬಯಸುತ್ತೇನೆ. ಇದರ ಬಗ್ಗೆ ಬಹಳವಾಗಿ ಮೆಚ್ಚುತ್ತಿದ್ದೇನೆ. ಈ ಬಗ್ಗೆ ಈಗಾಗಲೇ ಕಳೆದ ೪ ದಿನಗಳಿಂದ ಸತತವಾಗಿ ವಿಚಾರಗಳನ್ನು ವಿನಿಮಯ ಮಾಡಬೇಕಾದ ಎಲ್ಲ ಸದಸ್ಯರು ಮಾತನಾಡಿದ್ದಾರೆ. ನಾನು ಹೆಚ್ಚಿನದಾಗಿ ಹೇಳವೆ ಅದರಲ್ಲಿ ಹೊಸದಾಗಿ ಸೇರಿಸಿರತಕ್ಕ ಯೋಜನೆಗಳಾದ 'ಗ್ರಾಮ ನಿರ್ಮೂಲ ಕ್ರಮ' ಹಾಗೂ ೫೮ ವರ್ಷದ ಸೇವೆಯನ್ನು ೫೫ಕ್ಕೆ ಕಡಿಮೆಮಾಡುವ ಮೂಲಕ ವಿದ್ಯಾವಂತ ತರುಣರಿಗೆ ಹೆಚ್ಚಿನ ಉದ್ಯೋಗ ಕಲ್ಪಿಸುವ ಯೋಜನೆಯನ್ನು ಇಟ್ಟುಕೊಂಡು ಇವತ್ತು ಅವರು ೫೫ಕ್ಕೆ ಸೇವೆಯನ್ನು ಇಳಿಸುವಂಥದ್ದು ಹಾಗೂ ಕಲಬೆರಕೆ ಮೋಸವನ್ನು ಮಾರಾಟ ಮಾಡುವುದನ್ನು ನಿಷೇಧ ಮಾಡಿರುವುದನ್ನು ಬಹಳ ಉತ್ಸುಕತೆಯಿಂದ ಸಮಾಜದ ಹಿತ ದೃಷ್ಟಿಯಿಂದ ಅವರು ಮಾಡಿದ್ದಾರೆಂದು ಹೇಳಿದರೆ ತಪ್ಪಿಲ್ಲ. ಅದನ್ನು ನಾನು ಮನಸಾರೆ ಮೆಚ್ಚಿದ್ದೇನೆ. ನಾನು ಹೆಚ್ಚಿನದಾಗಿ ಹೇಳದೆ ನನ್ನ ಕ್ಷೇತ್ರವಾದ ಶೃಂಗೇರಿ ಕ್ಷೇತ್ರಕ್ಕೆ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕೆಂಬ ಬೇಡಿಕೆಯನ್ನು ಇಡುವ ಮೂಲಕ ಈ ಬಜೆಟ್ಟನಲ್ಲಿ ಕೆಲವು ಅಂಶಗಳನ್ನು ಸೇರಿಸುವ ಸಂದರ್ಭದಲ್ಲಿ ಅವರೂ ಸಹ ಪರಿಶೀಲನೆ ಮಾಡಲಿ ಎಂದು ಬೇಡಿಕೊಳ್ಳುತ್ತಿದ್ದೇನೆ. ಮಲೆನಾಡು ಪ್ರದೇಶ, ಅದರಲ್ಲೂ ನನ್ನ ಕ್ಷೇತ್ರ ಈ ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಎರಡನೆಯ ಸ್ಥಾನವನ್ನು ಹೊಂದಿದೆ. ಯಾವುದರಲ್ಲಿ ಅಂದರೆ ಮಳೆಯಲ್ಲಿ ವರ್ಷದಲ್ಲಿ ೨೫೦ ರಿಂದ ೩೦೦ ಇಂಚಿನವರೆಗೆ ಮಳೆ ಬೀಳುವ ಮಲೆನಾಡು ಪ್ರದೇಶವಾದ ಶೃಂಗೇರಿ ಕ್ಷೇತ್ರ ಕುದುರೇಮುಖದಿಂದ ಹಿಡಿದು ತರೀಕೆರೆ ಭಾಗದವರೆಗೆ ಉದ್ದಗಲ ಇದೆ. ಮಲೆನಾಡು ಪ್ರದೇಶದಲ್ಲಿ ೧೦ ಕಿಲೋಮೀಟರ್ ೫ ಕಿಲೋಮೀಟರ್ ಉದ್ದದಲ್ಲಿ ಮನೆಗಳು ನಿರ್ಮಾಣವಾಗಿ ಹಳ್ಳಿಗಳು ಬೆಳೆದಿವೆ. ಆದರೆ ಅಲ್ಲಿ ಅತಿ ಮುಖ್ಯವಾಗಿ ಬೇಕಾದಂಥ ಸಾರಿಗೆ ಸಂಪರ್ಕ ಇಲ್ಲದೆ ಕಷ್ಟವಾಗು

ತ್ತಿದೆ. ಮಳೆಗಾಲದಲ್ಲಿ ರಸ್ತೆ ಸಂಪೂರ್ಣವಾಗಿ ಕೊಚ್ಚಿ ಹಳ್ಳಕೊಳ್ಳಗಳಿಂದ ಕೂಡಿರುತ್ತದೆ. ಹಳ್ಳಕೊಳ್ಳಗಳಿಂದ ಹಾಗೂ ಗುಡ್ಡಗಾಡು ಪ್ರದೇಶಗಳಿಂದ ಕೂಡಿದ ಪ್ರದೇಶ ನಮ್ಮ ಮಲೆನಾಡು ಪ್ರದೇಶ. ಜೊತೆಗೆ ಲೋಕೋಪಯೋಗಿ ಇಲಾಖೆಯಿಂದ ಏನು ದುಡ್ಡು ಅಲ್ಲಿಗೆ ಇಟ್ಟಿದ್ದಾರೆ ಅದು ಸಮುದ್ರದ ನೆಂಟಸ್ತಿಕೆ ಉಪ್ಪಿಗೆ ಬಡತನ ಎಂಬಂತಾಗಿದೆ. ವಿರೋಧಪಕ್ಷದ ಎಲ್ಲಾ ಸನ್ಮಾನ್ಯ ಮುಖಂಡರು ನೀವು ೧೮೦ ಜನ ಇದ್ದೀರಿ. ಆಡಳಿತವನ್ನು ನಡೆಸಿಕೊಳ್ಳಿ ಎಂದು ಹೇಳಿದ್ದಾರೆ. ಸ್ವಾಗತ ಅಷ್ಟೊಂದು ಮೆಜಾರಿಟಿ ಕೊಟ್ಟು ಕೆಲಸ ಮಾಡಿ ಎಂದು ಆಶೀರ್ವಾದ ಮಾಡಿ ಕಳುಹಿಸಿದ್ದಾರೆ. ಆದ್ದರಿಂದ ರಾಜ್ಯದ ಕೆಲಸವನ್ನು ಅಷ್ಟೇ ಧೈರ್ಯವಾಗಿ ಮಾಡಿಕೊಂಡು ಹೋಗುವುದರಲ್ಲಿ ನಾವು ಮೊದಲಿಗರಾಗಬೇಕೆಂದು ಹೇಳುತ್ತೇನೆ. ಮಲೆನಾಡು ಪ್ರದೇಶದಲ್ಲಿರುವಂಥ ರಸ್ತೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು ಅಲ್ಲಿ ಸೇತುವೆಗಳೇನಿವೆ ಅದನ್ನು ದಷ್ಟಪುಷ್ಟವಾಗಿ ಕಟ್ಟದೆ. ವ್ಯವಸ್ಥಿತವಾಗಿ ಕಟ್ಟದೆ ಕೊಚ್ಚಿಕೊಂಡು ಹೋದಂಥ ಉದಾಹರಣೆಗಳಿವೆ. ಅದನ್ನು ಹೋಗಲಾಡಿಸುವುದಕ್ಕೆ ದಕ್ಷರಾದ ಇಂಜಿನಿಯರುಗಳಿರಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನನ್ನ ಕ್ಷೇತ್ರವಾದ ಶೃಂಗೇರಿ ಕ್ಷೇತ್ರದಲ್ಲಿ ಮೂರು ಬ್ರಿಡ್ಜ್‌ಗಳು ಕೆಟ್ಟುಹೋಗಿವೆ. ಅದು ಕಳೆದಸಾರಿ ಕಟ್ಟಿದ್ದುದು. ಕಳೆದ ಸಾಲಿನಲ್ಲಿ ಕಟ್ಟಿರುವ ಬ್ರಿಡ್ಜ್ ಮಳೆಗಾಲದಲ್ಲಿ ನೋಡಿದಾಗ ಅರ್ಧಭಾಗ ಕೆಟ್ಟುಹೋಗಿವೆ. ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಹೊಸದಾಗಿ ಎಷ್ಟು ದುಡ್ಡು ಕೊಟ್ಟರೂ ಸಾಕಾಗುವುದಿಲ್ಲ. ಕಟ್ಟುವುದನ್ನು ವ್ಯವಸ್ಥಿತವಾಗಿ ಕಟ್ಟಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಮೇಲೆ ಜಿಲ್ಲಾ ಪರಿಷತ್ತು ಮತ್ತು ಲೋಕೋಪಯೋಗಿ ಇಲಾಖೆಗೂ ಇರತಕ್ಕ ರಸ್ತೆಗಳ ಸಂಖ್ಯೆಯನ್ನು ನೋಡಿದಾಗ ಜಿಲ್ಲಾ ಪರಿಷತ್ತಿಗೆ ಶೇಕಡ ೭೫ರಷ್ಟಿದೆ. ಜಿಲ್ಲಾ ಪರಿಷತ್ತಿನಲ್ಲಿ ಶೇಕಡ ೬೦ರಷ್ಟು ಹಣ ಸ್ಯಾಲರಿಗೆ ಹೋಗುತ್ತದೆ. ಇನ್ನುಳಿದ ೪೦ ಪರ್ಸೆಂಟ್‌ನಲ್ಲಿ ಕೆಲಸ ಮಾಡುವುದಕ್ಕಾಗದೆ ಹಣ ಇಲ್ಲ ಎಂದು ಹೇಳುತ್ತಿರುವುದನ್ನು ಜಿಲ್ಲಾ ಪರಿಷತ್ ಸದಸ್ಯನಾಗಿ ನಾನು ನೋಡುತ್ತಿದ್ದೇನೆ. ಅಲ್ಲಿ ಯಾವ ಕಾಮಗಾರಿಗಳನ್ನು ಮಾಡುವುದಕ್ಕೂ ಆಗುತ್ತಿಲ್ಲ. ಆದ್ದರಿಂದ ಈಗ ಜಿಲ್ಲಾ ಪರಿಷತ್ತಿಗೆ ಬಿಟ್ಟಿರುವ ರಸ್ತೆಗಳಲ್ಲಿ ಕೆಲವನ್ನಾದರೂ ಬಸಲಿಂಗಪ್ಪನವರು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಮಾನ್ಯ ಲೋಕೋಪಯೋಗಿ ಮಂತ್ರಿಗಳು ಇದಕ್ಕೆ ಒಪ್ಪಿದ್ದಾರೆಂದು ನಂಬಿಕೊಂಡಿದ್ದೇನೆ. ಅತಿ ಶೀಘ್ರವಾಗಿ ಇದನ್ನು ಮಾಡಿಸಬೇಕು ಮಾನ್ಯ ಹಣಕಾಸಿನ ಮಂತ್ರಿಗಳಾದ ರಾಜಶೇಖರ ಮೂರ್ತಿಯವರು ತಮ್ಮ ಆಯವ್ಯಯದಲ್ಲಿ ಹೇಳಿದ್ದಾರೆ. ವ್ಯವಸಾಯೋತ್ಪನ್ನ ಮಾರುಕಟ್ಟೆಯಲ್ಲಿ ಶುಲ್ಕಗಳ ಮೂಲಕ ಬರುವ ಹಣದಲ್ಲಿ ರಸ್ತೆಗೆ ೧೦೦ ಕೋಟಿ ರೂಪಾಯಿ ಇಟ್ಟಿದ್ದೇವೆಂದು ಹೇಳಿದ್ದಾರೆ. ಸಂತೋಷ. ನಮ್ಮ ವ್ಯವಸಾಯೋತ್ಪನ್ನ ಮಾರುಕಟ್ಟೆ ವ್ಯಾಪ್ತಿ ಶಿವಮೊಗಕ್ಕೆ ಬರುತ್ತದೆ. ನಾನೂ ಸಹ ಅಲಿ ಒಬ್ಬ ವರ್ತಕನಾಗಿ ಹೋಗುವಂಥ ಸಂದರ್ಭ ಬಂದಿತ್ತು. ಅಲ್ಲಿ ಕೊಟ್ಟಿಗಟ್ಟಲೆ ದುಡ್ಡು ಬಂದರೂ ಇದುವರೆಗೂ ಯಾವ ರಸ್ತೆಗಳಿಗೂ ದುಡ್ಡು ಕೊಟ್ಟಿಲ್ಲ. ಕಾಯಿದೆಬದ್ಧವಾಗಿ ಇದ್ದರೂ ಇದುವರೆಗೂ ಕೊಟ್ಟಿಲ್ಲ. ಅಲ್ಲಿನ ಸಮಿತಿಯ ಸದಸ್ಯರನ್ನು ಅನೇಕ ಸಾರಿ ನಾನು ಕೇಳಿದ್ದೇನೆ. ಹಣ ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಒಂದು ರಸ್ತೆಯಾದರೂ ನಮ್ಮ ಕ್ಷೇತ್ರಕ್ಕೆ ಬಂದಿಲ್ಲ. ಆದರೆ ರಸ್ತೆಗೆ ಖರ್ಚಾಗಿದೆ ಎಂದು ಕಾರ್ಯಕ್ರಮ ಪಟ್ಟಿಯಲ್ಲಿ ಬರೆದಿದ್ದಾರೆ. ಆದ್ದರಿಂದ ಈ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಸಾಮಾನ್ಯವಾಗಿ ಒಂದು ಕೋಟಿ ರೂಪಾಯಿವರೆಗೂ ಬರುತ್ತದೆ. ಅಲ್ಲಿ ಬರುವ ಹಣವನ್ನು ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕ ರಸ್ತೆಗಳಿಗೆ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಗ್ರಾಮ ನಿರ್ಮಲೀಕರಣ ಯೋಜನೆಯಲ್ಲಿ ಶೌಚಾಲಯಗಳಿಗೆ ಏನು ಹಣ ಕೊಡಬೇಕೆಂದು ಆಯವ್ಯಯ ಪತ್ರದಲ್ಲಿಟ್ಟಿದ್ದೀರಿ ಅದು ಒಳ್ಳೆಯದು. ತುಂಬಾ ಉತ್ತಮವಾದ ಕಾರ್ಯಕ್ರಮವನ್ನು ತಾವು ಹಾಕಿಕೊಂಡಿದ್ದೀರಿ. ಅದನ್ನು ಮಾಡಿಸಬೇಕಾದರೆ ಬೇರೆ ಸಂಘ ಸಂಸ್ಥೆಗಳಿಗೆ ಕೊಡುವುದು ಬೇಡ. ನಿಜವಾಗಿ ಇವನ್ನು ಯಾರು ಉಪಯೋಗಿಸುತ್ತಾರೋ ಅಂತಹ ಗ್ರಾಹಕರಿಗೆ ಕೊಡಬೇಕೆಂದು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಲ್ಯಾಟ್ರಿನ್ ಕಟ್ಟಬೇಕೆಂದು ಆ ಕೆಲಸವನ್ನು ಹುಡ್ಕೋದವರಿಗೆ ವಹಿಸಿದರು. ಎರಡು-ಎರಡು ಲ್ಯಾಟ್ರಿನ್‌ಗಳನ್ನು ೨೦ ಸಾವಿರ ರೂಪಾಯಿ ವೆಚ್ಚದಲ್ಲಿ ಕಟ್ಟಲು ಕೊಟ್ಟಿದ್ದು ಅವರು ಕಟ್ಟಿದ ೩ ತಿಂಗಳಲ್ಲಿ ಅದು ಕಂಪ್ಲೀಟಾಗಿ ಬಿದ್ದು ಹೋಯಿತು. ಇಂತಹದ್ದರಿಂದ ಯಾವುದೇ ಪ್ರಯೋಜನ ಆಗುವುದಿಲ್ಲ. ಇಂತಹ ಕೆಲಸ ಆಗುವುದು ಬೇಡ. ತಾವು ಯಾರಿಗೇ ಕೊಟ್ಟರೂ ಹುಡ್ಕೋದವರಿಗೆ ಮಾತ್ರ ಕಂಟ್ರಾಕ್ಟ್ ಕೊಡಬಾರದು ಎಂದು ಹೇಳುತ್ತೇನೆ. ಮಾನ್ಯ ರಾಜಶೇಖರಮೂರ್ತಿಯವರ ಸ್ವತಃ ವ್ಯವಸಾಯದಲ್ಲಿ ನುರಿತವರಾಗಿದ್ದಾರೆ. ಅವರು ವ್ಯವಸಾಯದ ಬಗ್ಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿರುವುದನ್ನು ನಾನು ಬಹಳ ಮೆಚ್ಚುತ್ತೇನೆ, ಆದರೆ ಪ್ರಕೃತಿ ವಿಕೋಪಕ್ಕೆ ಸಿಕ್ಕಿ ತೊಂದರೆಗೆ ಈಡಾಗಿರುವ ರೈತರಿಗೆ ಏನೂ ಕೂಡಾ ಹಣ ಇಟ್ಟಿಲ್ಲವೆಂದು ನಾನು ಹೇಳುತ್ತೇನೆ. ಮಲೆನಾಡಿನ ಪ್ರದೇಶದಿಂದ ನಾನು ಬಂದಿದ್ದೇನೆ. ಕಳೆದ ಜುಲೈ ತಿಂಗಳಲ್ಲಿ ಅಡಿಕೆ ತೋಟಕ್ಕೆ ಬಿರುಗಾಳಿ

ಯಿಂದ ಆಗಿರತಕ್ಕ ನಷ್ಟ ಸುಮಾರು ೧ ಕೋಟಿ ೭೦ ಲಕ್ಷ ರೂಪಾಯಿಗಳು ಈ ಬಗ್ಗೆ ನಾನು ಹಾಗೂ ನಮ್ಮ ರೈತ ಮಿತ್ರರು ಮುಖ್ಯ ಮಂತ್ರಿಗಳವರಿಗೆ ಮನವಿಯನ್ನು ಕೊಟ್ಟಿದ್ದು, ಆಗ ಅವರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದಿದ್ದರು ಹಾಗೂ ಸೂಕ್ತ ಪರಿಹಾರ ಕೊಡುವ ಯೋಜನೆಯನ್ನು ಹಾಕುತ್ತೇವೆಂದು ಹೇಳಿದರು. ಬಹುಶಃ ಅವರು ಇದನ್ನು ಗಮನದಲ್ಲಿ ಇಟ್ಟುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನಾನೇನೂ ೧ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಕೊಡಿ ಎಂದು ಕೇಳುವುದಿಲ್ಲ ಮಲೆನಾಡಿನ ರೈತರು ಸೌಜನ್ಯಶೀಲರೂ ಹೌದು, ಕಷ್ಟಸಹಿಷ್ಣುಗಳೂ ಹೌದು. ಅವರ ಮೈಗೆ ಬೆಂಕಿ ಬಿದ್ದರೆ ಅವರು ಸಹಿಸಿಕೊಳ್ಳುತ್ತಾರೆ ಆದರೆ ಅವರ ಹೊಟ್ಟೆಗೆ ಬೆಂಕಿ ಬಿದ್ದಾಗ, ಅವರು ಸಹಿಸಿಕೊಳ್ಳುವುದಿಲ್ಲ ಅವರೇನೂ ಇವತ್ತು ಸಾಲ ಮನ್ನಾ ಮಾಡಿ ಎಂದು, ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿ ಎಂದು ಕೇಳುತ್ತಾ ಇಲ್ಲ. ನಾವು ಬೆಳೆದಿರುವ ಫಸಲಿಗೆ, ಭತ್ತಕ್ಕೆ ಉತ್ತಮ ಬೆಲೆ ಕೊಡಿ ಎಂದು ಕೇಳುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಬೆಳೆದಿರುವ ಭತ್ತವನ್ನು ಎಫ್‌ಸಿಐನವರು ಕೊಂಡು ಕೊಳ್ಳುವ ಸಿಸ್ಟಮ್‌ನೇ ನಿಲ್ಲಿಸಿದ್ದಾರೆ. ನಮ್ಮ ಕ್ಷೇತ್ರದ ಜಮೀನಿನಲ್ಲಿ ಬರುವ ಭತ್ತ ಥರ್ಡ್ ಕ್ಲಾಸ್ ವೆರೈಟಿ ಎಂದು ರಿಜೆಕ್ಟೆಡ್ ಗೂಡ್ಸ್ ಎಂದು ಹೇಳುತ್ತಿದ್ದಾರೆ. ಬಹಳ ಕಾಲದಿಂದಲೂ ಇದನ್ನು ಬೆಳೆಯುತ್ತ ಬಂದಿದ್ದು ಈಗ ಅದು ರಿಜೆಕ್ಟೆಡ್ ಗೂಡ್ಸ್ ಹೇಗೆ ಆಯಿತು? ಹಿಂದೆ ಲೆವಿ ಮುಖಾಂತರ ವಸೂಲಿ ಮಾಡುತ್ತಿದ್ದಾಗ ಇದೇ ಭತ್ತವನ್ನು ನಮ್ಮ ರೈತರು ಕೊಡುತ್ತಿದ್ದರು. ಇವತ್ತು ನಮ್ಮ ರೈತರು ಬೆಳೆದ ಭತ್ತಕ್ಕೆ ಸರ್ಕಾರ ೨೫೦ ರೂಪಾಯಿ ನಿಗಧಿ ಮಾಡಿದ್ದರೂ ಅದನ್ನು ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಲ್ಲ. ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ ಮೂಲಕ ಇದನ್ನು ಕೊಂಡುಕೊಳ್ಳುವ ವ್ಯವಸ್ಥೆ ಮಾಡಬೇಕು. ಅದರ ಮೂಲಕ ಇದನ್ನು ಕೊಳ್ಳುವುದಕ್ಕೆ ಈಗ ಸಾಧ್ಯವಿದೆಯೆಂದು ನಾನು ಸರ್ಕಾರಕ್ಕೆ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ಭತ್ತದ ಜೊತೆಗೆ ನಮ್ಮ ರೈತರು ಬೆಳೆದ ಅಡಿಕೆಗೂ ಉತ್ತಮ ಬೆಲೆ ದೊರಕಿಸಿಕೊಡಬೇಕೆಂದು ನಮ್ಮ ರೈತರು ಕೇಳುತ್ತಿದ್ದಾರೆ. ನಮ್ಮ ಭಾಗದ ರೈತರಲ್ಲಿ ಇನ್ನೂ ಅನೇಕ ಸಮಸ್ಯೆಗಳು ಇವೆ. ಇವತ್ತು ರೈತರಿಗೆ ಸಮಸ್ಯೆ ತಂದಿರುವುದು ತುಂಡು ಭೂಮಿ ಕಾಯ್ದೆ ಮಲೆನಾಡಿನಲ್ಲಿ ಇವತ್ತು ಗೇಣಿದಾರರು ಜಮೀನನ್ನು ಭೂಮಾಲೀಕರಿಂದ ಪಡೆದಿದ್ದಾರೆ. ಅವರಿಗೆ ೧೦ ಗುಂಟೆ, ೧೫ ಗುಂಟೆ, ೧ ಎಕರೆ, ಅರ್ಧ ಎಕರೆ ಭೂಮಿ ಸಿಕ್ಕಿದೆ. ಏನು ಇವತ್ತು ಭೂ ಸುಧಾರಣೆ ಕಾಯ್ದೆ ಮೂಲಕ ೭೨ ನೇ ಇಸವಿಯಿಂದ ಭೂಮಿಯನ್ನು ಪಡೆದುಕೊಂಡಿದ್ದಾರೆ ಅದರಲ್ಲಿ ಒಂದೊಂದು ಕುಟುಂಬದಲ್ಲಿ ಅಣ್ಣತಮ್ಮಂದಿರು ಹಿಸ್ಸೆ ವಿಭಾಗ ಮಾಡಿಕೊಳ್ಳಬೇಕಾಗುತ್ತದೆ. ೧೦ ಗುಂಟೆ ಭೂಮಿ ಇರುವ ಅಣ್ಣ ತಮ್ಮಂದಿರು ಎರಡು ಭಾಗ ಮಾಡಬೇಕಾದರೆ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವುದಕ್ಕೆ ಅವಕಾಶ ಇಲ್ಲ, ಆದ್ದರಿಂದ ಇದನ್ನು ರಿಜಿಸ್ಟ್ರೇಷನ್ ಮಾಡುವ ಅವಕಾಶವನ್ನು ಕಲ್ಪಿಸಿಕೊಡಬೇಕು. ಹೀಗೆ ರಿಜಿಸ್ಟರ್ ಆಗದಿದ್ದರೆ ಅವರಿಗೆ ಆ ಭೂಮಿ ಮೇಲೆ ಸಾಲ ಸಿಗುವುದಿಲ್ಲ. ಅವರ ಹೆಸರಿಗೆ ಖಾತೆ ಬರುವುದಿಲ್ಲ. ಖಾತೆ ಇಲ್ಲದಿದ್ದರೆ ಸಹಕಾರ ಸಂಘಗಳ ಮುಖಾಂತರ, ಬ್ಯಾಂಕುಗಳ ಮುಖಾಂತರ ಸಾಲ ಪಡೆದುಕೊಳ್ಳುವುದಕ್ಕೆ ಅವಕಾಶವಾಗುವುದಿಲ್ಲ.

ಸಹಕಾರ ಸಂಘಗಳ ಮೂಲಕ ಬ್ಯಾಂಕುಗಳ ಮೂಲಕ ಸಾಲ ಸಿಗುವುದಿಲ್ಲ, ಸಾಲ ಪಡೆದುಕೊಳ್ಳುವುದಕ್ಕೆ ಅವಕಾಶ ಸಿಗುವುದಿಲ್ಲ. ತುಂಡು ಭೂಮಿ ಕಾಯಿದೆ ಏನಿದೆ ಅದನ್ನು ತಾವು ಸಡಿಲಗೊಳಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹೀಗೆ ಮಾಡಿದಾಗ ಏನಾಗುತ್ತದೆಂದರೆ ರೈತರು ಅಭಿವೃದ್ಧಿ ಕಾರ್ಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಡಿಕೆ ತೋಟವನ್ನು ಬಾಗಾಯ್ತುವಿನಿಂದ ತೆಗೆಯಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯುವಕರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವಂತಹ ವಿಚಾರವನ್ನು ಯೋಜನಾ ರೂಪದಲ್ಲಿ ಮಾನ್ಯ ರಾಜಶೇಖರಮೂರ್ತಿಯವರು ಮಾಡಿದ್ದಾರೆ. ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ೫೮ ರಿಂದ ೫೫ಕ್ಕೆ ಇಳಿಸಬೇಕೆಂದು ವಿಚಾರ ಮಾಡಿದ್ದಾರೆ. ಆ ವ್ಯಾಪ್ತಿಯನ್ನು ಕಡಿಮೆ ಮಾಡಿದಾಗ ಉದ್ಯೋಗಾವಕಾಶ ಹೆಚ್ಚಾಗುತ್ತದೆ. ೧೨ ಸಾವಿರ ಉಪಾಧ್ಯಾಯರುಗಳನ್ನು ತೆಗೆದುಕೊಳ್ಳುತ್ತೇವೆಂದು ಈಗಾಗಲೇ ಹೇಳಿದ್ದಾರೆ. ಅದು ಬಹಳ ಸಂತೋಷದ ವಿಚಾರ. ಆದರೆ ನಾನೊಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ನಾವು ಚುನಾಯಿತ ಪ್ರತಿನಿಧಿಗಳು ಆಯ್ಕೆಯಾಗಿ ಬಂದಿದೇವೆ. ಉಪಾಧ್ಯಾಯರುಗಳನ್ನು ಆಯ್ಕೆ ಮಾಡುವಾಗ ಡಿಎಲ್‌ಆರ್‌ಸಿ ಮೂಲಕ ಅಪಾಯಿಂಟ್ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ನಾವು ಅಧಿಕಾರಿಗಳ ಹತ್ತಿರ ಹೋಗಿ ಚೀಟಿ ಕೊಡಬೇಕು. ನಾವು ಅವರ ಹತ್ತಿರ ಹೋಗಿ ಸಾರ್ ಸಾರ್ ಏನಾದರೂ ಮಾಡಿಯೆಂದು ಕೇಳಿಕೊಳ್ಳುವಂತಹ ಒಂದು ವ್ಯವಸ್ಥೆಯನ್ನು ತಂದಿದ್ದೀರಿ. ನಾವು ಚುನಾಯಿತ ಪ್ರತಿನಿಧಿಗಳಾದರೂ ಆಳುದ್ದ ಶರೀರವನ್ನು ಗೇಣುದ್ದ ಮಾಡಿಕೊಂಡು ತಲೆಬಾಗುವ ಮಟ್ಟಕ್ಕೆ ಅಂತಹ ಒಂದು ಪರಿಸ್ಥಿತಿಗೆ ತಂದಿದ್ದೀರಿ. ಡಿಎಲ್‌ಆರ್‌ಸಿ ಮುಖಾಂತರ ಆಯ್ಕೆ ಮಾಡುವಾಗ ಚುನಾಯಿತ ಪ್ರತಿನಿಧಿಗಳು ಅಲ್ಲಿರಲಿಕ್ಕೆ ಅವಕಾಶ ಕೊಡಬೇಕು. ಮಂಗಳಕಾರ್ಯ ಕೆಲಸವನ್ನು ಮಾಡುತ್ತೇವೆನ್ನುವ ಭಾವನೆಯನ್ನು ನಾವು ಇಟ್ಟುಕೊಳ್ಳುವುದರ

ಮೂಲಕ ಕೆಲಸ ಮಾಡಲಿಕ್ಕೆ ನಮಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಹಾಗೆಯೇ ನನ್ನ ಮತದಾರ ಕ್ಷೇತ್ರದಲ್ಲಿ ಕಾಫೀ ಬೆಳೆಗಾರರು ಇದ್ದಾರೆ. ಕಾಫಿ ಬೆಳೆಯುತಕ್ಕ ದೊಡ್ಡ ದೊಡ್ಡ ಎಸ್ಟೇಟ್ ಮಾಲೀಕರು ಇದ್ದಾರೆ. ಅಂದ ಮಾತ್ರಕ್ಕೆ ನಾನು ಮಾಲೀಕರ ಪರವಾಗಿ ಮಾತನಾಡುತ್ತೇನೆ ಎನ್ನುವ ಪ್ರಶ್ನೆಯಿಲ್ಲ. ಅಲ್ಲಿ ಸಾವಿರಾರು ಜನ ಕಾರ್ಮಿಕ ಬಂಧುಗಳು ಏನಿದ್ದಾರೆ ಅವರುಗಳು ಬಹುಶಃ ಇವತ್ತು ಊರುಗಳನ್ನು ಬಿಡುವ ಪ್ರಸಂಗ ಬಂದಿದೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಯಾವ ಎಸ್ಟೇಟ್‌ಗೆ ಹೋಗಲಿ ಅಂತಹ ಒಂದು ಪ್ರಸಂಗ ಬಂದಿದೆ. ಅಲ್ಲಿ ೧೬ ದಿವಸಗಳ ಕೆಲಸವೆಂದು ಹೇಳುತ್ತಾರೆ, ೧೬ ದಿವಸಗಳ ಕೆಲಸ ಆದರೆ ಅವರಿಗೆ ಯಾವುದೇ ಫೆಸಿಲಿಟೀಸ್ ಸಿಗುವುದಿಲ್ಲ. ಮಾಲೀಕರು ನಮಗೆ ಕಾಫಿ ಬೆಳೆಯಿಲ್ಲ, ಪರ್ಚೇಸ್ ಟ್ಯಾಕ್ಸ್ ಬೇರೆ ಹಾಕಿದ್ದಾರೆಂದು ಎಲ್ಲಾ ಮಾಲೀಕರ ಕೂಗು ಇದೆ. ಕಾರ್ಮಿಕರ ಹಿತದೃಷ್ಟಿಯಿಂದ ಇದನ್ನು ತಾವು ಗಮನದಲ್ಲಿಟ್ಟುಕೊಂಡು ಟ್ಯಾಕ್ಸನ್ನು ಹಾಕಬೇಕು. ಮಾಲೀಕರು ಬದುಕಿದರೆ ಅವರ ಹಿಂದುಗಡೆ ಇರುವಂತಹ ಸುಮಾರು ೩೦ ಸಾವಿರ ಜನ ಕಾರ್ಮಿಕರು ಅವರು ಸಹ ಚೆನ್ನಾಗಿರುತ್ತಾರೆ. ನನ್ನ ಕ್ಷೇತ್ರದಲ್ಲಿ ೩೦ ಸಾವಿರ ಜನ ಕಾಫಿ ಕೆಲಸಗಾರರಿದ್ದಾರೆ. ದಯವಿಟ್ಟು ಅವರಿಗೆ ಹೆಚ್ಚಿನ ಸಹಾಯವಾಗುವಂತೆ ಕೆಲಸ ಮಾಡಬೇಕೆಂದು ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯೆಂದು ಮಲೆನಾಡು ಪ್ರದೇಶಕ್ಕೆ ಹಣವನ್ನು ಕೊಟ್ಟಿದ್ದಾರೆ. ಮಳೆ ಜಾಸ್ತಿಯಾಗಿ ಭೂಮಿಯ ಸಾರ ಕೊಚ್ಚಿಕೊಂಡು ಹೋಗುವುದನ್ನು ತಡೆಹಿಡಿಯಲಿಕ್ಕೆ ಹಣವನ್ನು ಕೊಡಲಾಗಿದೆ. ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ಅದರಲ್ಲೂ ಸಾಯಿಲ್ ಕನ್ಸರ್ವೇಶನ್‌ಗೆ ಹಣ ಕೊಟ್ಟಿದ್ದಾರೆ. ಟ್ರಂಚ್‌ಗಳನ್ನು ತೆಗೆಯುವುದರ ಮೂಲಕ ಟಾಪ್ ಸಾಯಿಲ್ ಕೊಚ್ಚಿಹೋಗದ ರೀತಿಯಲ್ಲಿ ಮಾಡಬೇಕೆಂದು ಯೋಜನೆಗಳನ್ನು ಕೊಟ್ಟಿದ್ದಾರೆ. ಅದು ನಮಗೆ ಫಲಕಾರಿಯಾಗಿಲ್ಲ. ಈ ಪುಸ್ತಕದಲ್ಲಿ ಮಾತ್ರ ಫಲಕಾರಿಯಾಗಿದೆ. ಮಾರ್ಚಿ ಕೊನೆಯಲ್ಲಿ ಪೂರ್ತಿ ಹಣವನ್ನು ಖರ್ಚು ಮಾಡಲಿಕ್ಕೆ ಆತುರಿತದಲ್ಲಿ ಬಿಗುಮಾನ ತೋರಿಸುವುದು ಅದು ಯಾವ ರೂಪದಲ್ಲಿ ಹಣ ಖರ್ಚಾಗುತ್ತದೆ? ಸರ್ಕಾರ ಮಾಡುವ ಕೆಲಸವನ್ನು ಬೇಗ ಮಾಡಬೇಕು ಆಗ ಸದಾ ನಾವು ನಿಮ್ಮ ಹಿಂದೆ ಇರುತ್ತೇವೆ. ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಕ್ಕೆ ಹಿಂದೆ ಬೀಳಬಾರದು. ನನಗೆ ಈ ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ಪುನಃ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾವ್).—ಮಾನ್ಯ ಅಧ್ಯಕ್ಷಿಣಿಯವರೆ, ಇವತ್ತಿನ ದಿವಸ ೧೯೯೦–೯೧ನೇ ಸಾಲಿನ ಆಯವ್ಯಯ ಪತ್ರವನ್ನು ನಮ್ಮ ನೆಚ್ಚಿನ ಹಣಕಾಸಿನ ಮಂತ್ರಿಗಳು ಮಂಡಿಸಿರುವುದನ್ನು ನಾನು ಸ್ವಾಗತಿಸುತ್ತಾ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ಭ್ರಷ್ಟಾಚಾರ ನಿರ್ಮೂಲನಕ್ಕಾಗಿ ಆಡಳಿತ ಯಂತ್ರವನ್ನು ಚುರುಕುಗೊಳಿಸುವುದು, ಹಾಗೂ ಹೆಂಡ ಮಾರಾಟವನ್ನು ನಿಷೇಧ ಮಾಡಿದ್ದುದು, ದಲಿತರಿಗೆ ನೇರವಾಗಿ ನೌಕರಿ ಒದಗಿಸುವುದು, ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವುದು. ಹಾಗೂ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೫ ವರ್ಷಕ್ಕೆ ಇಳಿಸುವುದು, ಕೈಗಾರಿಕಾ ಅಭಿವೃದ್ಧಿ ಬಗ್ಗೆ ನಮ್ಮ ಸರ್ಕಾರವು ತಳೆದಂಥ ನಿಲುವು, ಪ್ರಾಥಮಿಕ ಶಿಕ್ಷಣ ಇತ್ಯಾದಿ ವಿಷಯಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ನಮ್ಮ ನೆಚ್ಚಿನ ಆರ್ಥಿಕ ಮಂತ್ರಿಗಳಾದ ಶ್ರೀ ರಾಜಶೇಖರಮೂರ್ತಿಯವರು ಒಳ್ಳೆಯ ಅನುಭವಿಗಳು. ಆರ್ಥಿಕ ವ್ಯವಸ್ಥೆಯ ಪ್ರತಿಯೊಂದು ಮುಖಗಳನ್ನು ತಿಳಿದುಕೊಂಡಿರತಕ್ಕಂಥವರು. ನಮ್ಮ ಹಿಂದಿನ ಜನತಾದಳ ಸರ್ಕಾರ ಇವತ್ತು ಏನು ನಮ್ಮ ಸರ್ಕಾರದ ಖಜಾನೆಯನ್ನು ಬರಿದು ಮಾಡಿದಂಥ ಸಂದರ್ಭದಲ್ಲಿ ಅವರು ಒಂದು ಗುರುತರವಾದ ಜವಾಬ್ದಾರಿಯನ್ನು ಹೊತ್ತುಕೊಂಡು ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಯಥಾಸ್ಥಿತಿಗೆ ತರತಕ್ಕಂಥ ಹೊಣೆಗಾರಿಕೆಯನ್ನು ಹೊತ್ತುಕೊಂಡಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ನಮ್ಮ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಯಾವ ಹಿಂದುಳಿದ ಪ್ರದೇಶಗಳಿಗೆ ೪೦ ಕೋಟಿ ರೂಪಾಯಿಗಳನ್ನು ಮೀಸಲಿಡಬೇಕೆಂದು ಮಾಡಿದ್ದಾರೆ. ಅದನ್ನು ಕೂಡ ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ ಒಂದು ಸಣ್ಣ ಸಲಹೆಯನ್ನು ಮಾಡುತ್ತೇನೆ. ನಾವು ಮುಂಬೈ ಕರ್ನಾಟಕ ಪ್ರದೇಶದವರು ಇರುವುದರಿಂದ ಮುಂಬೈ ಕರ್ನಾಟಕ ಪ್ರದೇಶದಲ್ಲಿ ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ಕಾರವಾರ ಈ ನಾಲ್ಕು ಜಿಲ್ಲೆಗಳು ಬರುತ್ತಿದ್ದು ದುರ್ದೈವದಿಂದ ಅಲ್ಲಿ ಸತತವಾಗಿ ಬರಗಾಲ ಬಿದ್ದಿರುವುದರಿಂದ ಅಲ್ಲಿ ಬರಗಾಲ ಪೀಡಿತ ಪ್ರದೇಶಗಳ ಅಭಿವೃದ್ಧಿ ಮಂಡಳಿಯನ್ನು ರಚಿಸಿ ಅಲ್ಲಿರತಕ್ಕಂಥ ಜನರಿಗೆ ಉದ್ಯೋಗಾವಕಾಶಗಳನ್ನು, ಬರಗಾಲ ಕಾಮಗಾರಿಗಳನ್ನು ಪ್ರಾರಂಭಿಸಬೇಕೆಂದು ಚಿಕ್ಕ ಸಲಹೆಯನ್ನು ಕೊಟ್ಟು ಮಾನ್ಯ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಕಾಲಿಡತಕ್ಕಂಥ ಸಂದರ್ಭದಲ್ಲಿ ನಮ್ಮ ಈ ಆಯವ್ಯಯ ಪತ್ರದಲ್ಲಿ ನೀರಾವರಿಗೆ ಮತ್ತು ವಿದ್ಯುಚ್ಛಕ್ತಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಆಧುನಿಕ ಬೇಸಾಯ

ಪದ್ಧತಿಯನ್ನು ಮಂಡನೆ ಮಾಡಿದ್ದಕ್ಕಾಗಿ ಈ ಒಂದು ಶತಮಾನದಲ್ಲಿ ಎರಡನೇ ಹಸಿರುಕ್ರಾಂತಿ ಆಗುತ್ತದೆ ಎಂಬ ಭಾವನೆಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಕೂಡ ಒಂದು ನೂರು ಕೋಟಿ ರೂಪಾಯಿಯ ಯೋಜನೆ ಹಾಕಿದ್ದು ಇದು ಅತ್ಯಂತ ಸ್ವಾಗತಾರ್ಹ. ಆದರೆ ಎಲ್‌ಐಸಿ ಹುಡ್ಕೋ ಮೊದಲಾದ ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆಯುವಾಗ ನಮ್ಮ ಸರ್ಕಾರದವರು ಮುನಿಸಿ ಪಾಲಿಟಿಯವರು ೨೫ ಪರ್ಸೆಂಟ್ ಕಾಂಟ್ರಿಬ್ಯೂಶನ್ ಮಾಡಬೇಕು ಎನ್ನತಕ್ಕಂಥ ವಿಧಿಯನ್ನು ನಿರ್ಮಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಅನೇಕ ನಗರ ಪ್ರದೇಶಗಳಲ್ಲಿ ಮುನಿಸಿಪಾಲಿಟಿಗಳಲ್ಲಿ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟಕರವಾಗಿದೆ. ಆಕ್ಟ್ರಾಯಿಯನ್ನು ಇವತ್ತು ಹಾಕಲೇಬೇಕಾಗಿದೆ. ಅಂದರೆ ಮಾತ್ರ ಆರ್ಥಿಕ ಅಭಿವೃದ್ಧಿ ಅಲ್ಲಿ ಸಾಧ್ಯ. ಈ ಬಸ್ಸಲಿಯಲ್ಲಿ ನನ್ನ ಕ್ಷೇತ್ರವಾದ ಶಿಗ್ಗಾವಿ, ಸವಣೂರು ನಗರ ಸಭೆಯಲ್ಲಿ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟಕರವಾಗಿದೆ. ನಮ್ಮ ರಾಜ್ಯದ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ನಮ್ಮ ಕ್ಷೇತ್ರದಿಂದ ಆರಿಸಿ ಹೋದಾಗ ಅಲ್ಲಿಯ ಜನರಿಗೆ ಈ ಕುಡಿಯುವ ನೀರಿನ ವ್ಯವಸ್ಥೆಯನ್ನು ವರದಾ ನದಿಯಿಂದ ಸವಣೂರು, ಶಿಗ್ಗಾವಿ ಮತ್ತು ಬಂಕಾಪುರ– ಇವೆಲ್ಲ ಒಂದು ಲಕ್ಷ ಜನಸಂಖ್ಯೆ ಇರತಕ್ಕಂಥ ಗ್ರಾಮಗಳಿಗೆ ನೀರು ಪೂರೈಕೆ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಹಣಕಾಸಿನ ಪರಿಸ್ಥಿತಿಯಿಂದಾಗಿ ಅದು ಸಾಧ್ಯವಾಗದೇ ಹೋಯಿತು. ಇಂತಹ ಒಂದು ಸ್ಥಿತಿಯಲ್ಲಿ ವರದಾ ನದಿಯಿಂದ ೧೫–೨೦ ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ನಮ್ಮ ಊರುಗಳಿಗೆ ನೀರು ಪೂರೈಸಲು ಈ ಸ್ಕೀಮ್‌ನ್ನು ಮಾಡಿಸುತ್ತೇವೆ ಎಂದು ಹೇಳಿದರೆ ನನ್ನ ಕ್ಷೇತ್ರದ ಜನರು ಇದು ಸಾಧ್ಯವಾಗದ ಮಾತು, ಎಂದು ಇವತ್ತಿನ ದಿವಸ ಹೇಳುತ್ತಿದ್ದಾರೆ. ಆದ್ದರಿಂದ ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಅತಿಯಾಗಿದೆ. ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ನಮ್ಮ ನಗರಗಳಲ್ಲಿ ಜನರು ಹರತಾಳ ಮಾಡಿ, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ, ಅನೇಕ ದಿವಸ ಖಾಲಿ ಕೊಡಗಳ ಪ್ರದರ್ಶನ ಕೂಡ ಮಾಡಿ ಸರ್ಕಾರದ ಗಮನ ಸೆಳೆದಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಅಧಿಕಾರಿಗಳು ಕೂಡ, ಇಂತಹ ಸ್ಕೀಮ್‌ಗಳನ್ನು ಮಾಡುವಾಗ ಯಾವ್ಯಾವ ನಗರಗಳಲ್ಲಿ ಈ ಕುಡಿಯುವ ನೀರಿನ ಸಮಸ್ಯೆ ಇದೆ, ಇಂತಹ ಪಟ್ಟಣಗಳನ್ನು ಗುರುತಿಸಿ ಏನು ಈಗಾಗಲೇ ೧೭ ಊರುಗಳನ್ನು ಗುರುತಿಸಿ ಇಟ್ಟಿದ್ದಾರೆ. ಈ ಸ್ಕೀಮ್‌ನಲ್ಲಿ ನಮ್ಮ ಪ್ರದೇಶಗಳನ್ನೂ ಇಟ್ಟರೆ ಆಗ ಒಳ್ಳೆಯದಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ೨೫ ಪರ್ಸೆಂಟ್ ಕಾಂಟ್ರಿಬ್ಯೂಟ್ ಮಾಡತಕ್ಕಂಥ ಹಣವನ್ನು ಕಡಿಮೆ ಮಾಡಿ ಈ ಅನುಕೂಲತೆಗಳನ್ನು ಜನರಿಗೆ ಒದಗಿಸಿಕೊಟ್ಟರೆ ಅದರಿಂದ ಅನುಕೂಲವಾಗುತ್ತದೆ ಎಂಬ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಲ್ಲದೇ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಇದರ ಬಗ್ಗೆ ಯೋಗ್ಯ ಕಾರ್ಯಕ್ರಮವನ್ನು ಮಾನ್ಯ ಸರ್ಕಾರದವರು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ನಮ್ಮ ಕೇಂದ್ರ ಸರ್ಕಾರದವರು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಏರಿಸಿದ್ದನ್ನು ನೋಡಿದರೆ, ನಮ್ಮ ಆರ್ಥಿಕ ಸಚಿವರು ಮಂಡಿಸಿದ ಆಯವ್ಯಯ ಪಟ್ಟಿಯನ್ನು ಬದಲಿ ಮಾಡಬೇಕಾಗುತ್ತದೆ ಎನ್ನುವ ಸಂಶಯ ಉದ್ಭವವಾಗುತ್ತಿದೆ. ಇದರಿಂದ ನೇರವಾಗಿ ನಮ್ಮ ರಾಜ್ಯ ಸರ್ಕಾರದ ಮೇಲೆ ಹೊರೆ ಬೀಳುತ್ತಿದೆ. ಒಂದು ಲೀಟರ್ ಪೆಟ್ರೋಲ್ ಬೆಲೆಯನ್ನು ೨ ರೂಪಾಯಿಗಳಿಂದ ಏರಿಸಿದ್ದಾರೆ. ಒಂದು ಲೀಟರ್ ಡೀಸೆಲ್ ಬೆಲೆಯನ್ನು ೫೦ ಪೈಸೆ ಏರಿಸಿದ್ದಾರೆ. ಈ ರೀತಿ ಹೆಚ್ಚಿನ ಹಣ ವಿಧಿಸಿರುವುದನ್ನು ನೋಡಿದರೆ. ಹಿಂದೆ ಯಾವ ಸರ್ಕಾರಗಳೂ ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ಒಮ್ಮೆಂದೊಮ್ಮೆಗೆ, ಈ ರೇಟಿನಲ್ಲಿ ಏರಿಸಿರಲಿಲ್ಲ ಎಂಬ ಮಾತನ್ನು ಕೂಡ ಹೇಳ ಬಯಸುತ್ತೇನೆ. ನಾವು ವಸ್ತುಗಳನ್ನು ತರಬೇಕಾದರೆ, ಟ್ರಾನ್ಸ್‌ಪೋರ್ಟ್-ಲಾರಿಗಳ ಮುಖಾಂತರ ಟ್ರಕ್‌ಗಳ ಮುಖಾಂತರ ತರಬೇಕೆಂದರೆ, ಒಂದು ಲೀಟರಿಗೆ ೫೦ ಪೈಸೆ ಜಾಸ್ತಿ ಕೊಟ್ಟರೆ. ಪ್ರತಿಯೊಂದು ವಸ್ತುಗಳ ಮೇಲೆ ಜಾಸ್ತಿ ಹಣವನ್ನು ರಾಜ್ಯ ಸರ್ಕಾರದವರು ಶೇಖರಿಸಿ, ಕೇಂದ್ರಕ್ಕೆ ಕೊಡತಕ್ಕ ಪರಿಸ್ಥಿತಿ ಬರುತ್ತದೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಡೀಸೆಲ್ ಮತ್ತು ಪೆಟ್ರೋಲ್ ಬೆಲೆಯನ್ನು ವಿಪರೀತವಾಗಿ ಏರಿಸಿರುವುದನ್ನು ನಾನು ಖಂಡನೆ ಮಾಡುತ್ತೇನೆ. ಇನ್ನು ನೀರಾವರಿ ಬಗ್ಗೆ ಹೇಳಬೇಕೆಂದರೆ, ಇವತ್ತು ನಮ್ಮ ರಾಜ್ಯದಲ್ಲಿ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳಿಗೆ ಹೆಚ್ಚಿನ ಮಹತ್ವವನ್ನು ಕೊಡಬೇಕೆಂದು ನನ್ನ ಸಲಹೆ. ಏಕೆಂದರೆ, ಇವತ್ತು ಭೀಮಾ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಹಾರಾಷ್ಟ್ರ ರಾಜ್ಯದಲ್ಲಿ, ಗುಜರಾತ್ ರಾಜ್ಯದಲ್ಲಿ ನರ್ಮದಾ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್, ಇವುಗಳು ಸರ್ಕಾರದ ಸ್ವತಂತ್ರ ಏತ ನೀರಾವರಿ ನಿಗಮಗಳಾಗಿರುವುದರಿಂದ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಹಿಂದೆ ೧೯೭೩ನೇ ಇಸವಿಯಲ್ಲಿ ಮಾನ್ಯ ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲೇ ಕೆಲವು ನೀರಾವರಿ ಯೋಜನೆಗಳನ್ನು ಮಾಡಿದರು. ಈ ತಾಲ್ಲೂಕಿನಲ್ಲಿ ನೀರಾವರಿ ಕ್ಷೇತ್ರಗಳನ್ನು ಹೆಚ್ಚಿಗೆ ಮಾಡಿ, ಅಲ್ಲಿಯೂ ಕೂಡ ೧೫೦೦ ಎಕರೆಯಿಂದ ೩,೦೦೦ ಎಕರೆಗೆ

ನೀರಾವರಿಯನ್ನು ಒಂದು ವರ್ಷದೊಳಗಾಗಿ ಪೂರ್ಣಗೊಳಿಸಬೇಕೆಂದು, ಯೋಜನೆ ಹಾಕಿಕೊಂಡು, ಇಂತಹ ಸವಲತ್ತುಗಳನ್ನು ಮಾಡಿದ್ದರು. ದುರ್ದೈವದಿಂದ ೧೯೮೩ ರಿಂದ ೧೯೯೦ನೇ ಇಸವಿಯೊಳಗೆ ಇಂತಹ ಯಾವುದೇ ಕೆಲಸಗಳೂ ಆಗದೇ ಜನರಿಗೆ ಸಾಕಷ್ಟು ಮೋಸವನ್ನು ಮಾಡಿದ್ದೇವೆಂದು ಹೇಳಿದರೆ, ತಪ್ಪಾಗುವುದಿಲ್ಲ. ಬಚಾವತ್ ಆಯೋಗದಲ್ಲಿ ನಮ್ಮೆಲ್ಲರಿಗೂ ತಿಳಿದಂತೆ ಎರಡು ಸಾವಿರ ಇಸವಿಯೊಳಗೆ ೭೨.೬ ಟಿ, ಎಂ. ಸಿ. ನೀರನ್ನು ಕೃಷ್ಣಾ ಜಲಾಶಯದಿಂದ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಮತ್ತು ತುಂಗಾ ಯೋಜನೆಯಿಂದ ೫೨ ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ ಎಂಬ ರೂಪರೇಷೆಯನ್ನು ಬಚಾವತ್ ಆಯೋಗದಲ್ಲಿ ಹಾಕಿದ್ದಾರೆ. ಈ ತುಂಗಾ ಯೋಜನೆಯನ್ನು ಇನ್ನೂ ತನಕ ಪ್ರಾರಂಭ ಮಾಡದೇ ಇದ್ದಾಗ, ಎರಡು ಸಾವಿರ ಇಸವಿಯೊಳಗೆ ನಾವು ಹೇಗೆ ಮುಗಿಸುತ್ತೇವೆ ಎಂಬ ವಿಷಯ ಬಹಳ ದುಃಖಕರವಾಗಿದೆ. ಆದ್ದರಿಂದ ಇವತ್ತು ಕೃಷ್ಣಾ ಜಲಾಶಯವಾಗಲೀ, ತುಂಗಾ ಜಲಾಶಯವಾಗಲೀ, ನಾವು ಹೆಚ್ಚಿನ ಮಹತ್ವವನ್ನು ಕೊಟ್ಟು, ಇದರ ಜೊತೆಗೆ ಏತ ನೀರಾವರಿಗೂ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿದೆ. ಎಂದು ಈ ಮೂಲಕ ಪ್ರಾರ್ಥಿಸುತ್ತೇನೆ. ಇನ್ನು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಇವುಗಳಿಂದ ನಮ್ಮ ಕ್ಷೇತ್ರದಲ್ಲಿ ಸಿದ್ಧನೂರುಕೆರೆ, ಸವಣೂರು ಮೋತಿ ತಲಾಬ್ ಮತ್ತು ಶಿಗ್ಗಾಂವ್ ತಾಲ್ಲೂಕು ನಾಗನೂರು ಕೆರೆ. ಈ ಮೂರು ಕೆರೆಗಳಿಂದ ಸುಮಾರು ೪೦೦-೫೦೦ ಎಕರೆ ವಿಸ್ತೀರ್ಣ ಇದೆ. ವರದಾ ನದಿಯು ಇಲ್ಲಿಗೆ ೧೦-೨೦ ಕಿಲೋಮೀಟರ್ ಅಂತರದಲ್ಲಿ ಇರುವುದರಿಂದ, ಈ ಮೂರು ಕೆರೆಗಳ ಸುತ್ತಮುತ್ತಲೂ ಸಾವಿರಾರು ಎಕರೆಗಳಲ್ಲಿ ಎಲೆ ತೋಟಗಳು ಇವೆ. ಇವತ್ತು ಹಿರಿಯರು ಹೇಳಿದಂತೆ, ಸವಣೂರು ಎಲೆ, ಶಿರಸಿ ಅಡಿಕೆ ಮತ್ತು ಕಲ್ಕತ್ತಾ ಸುಣ್ಣ. ಇಂತಹ ಕೆಲವು ವಸ್ತುಗಳು ಇಡೀ ದೇಶದಲ್ಲಿಯೇ ಪ್ರಸಿದ್ಧವಾಗಿವೆ ಇಂತಹ ಪ್ರಸಿದ್ಧವಾದ ಎಲೆ, ತೋಟಗಳಿಗೆ ಸ್ವತಂತ್ರವಾಗಿ ಬರಗಾಲ ಬಿದ್ದುದರಿಂದ, ಸಾವಿರಾರು ಎಕರೆಗಳು ಸಂಪೂರ್ಣವಾಗಿ ನಾಶ ಹೊಂದುತ್ತಿವೆ. ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರಾದ ಶ್ರೀ ಪುಟ್ಟಸ್ವಾಮಿಗೌಡರು ನಮ್ಮ ಕ್ಷೇತ್ರಕ್ಕೆ ಬಂದಾಗ, ಈ ಎಲೆ ತೋಟಗಳನ್ನು ಅವರಿಗೂ ತೋರಿಸಲಾಯಿತು. ಆದರೆ ಅಲ್ಲಿ ನೀರು ಇಲ್ಲದಂತಾಗಿ, ಸಂಪೂರ್ಣವಾಗಿ ನಮ್ಮ ದೇಶಕ್ಕೆ ಬರಬೇಕಾದ ಉತ್ಪನ್ನವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ.

೨-೦೦ ಪಿ.ಎಂ.

ಮತ್ತು ರೈತ ಬಾಂಧವರಿಗೆ ತುಂಬಾ ಕಷ್ಟಗಳೂ ಕೂಡಾ ಇವತ್ತು ಬರುತ್ತಿವೆ. ಆದುದರಿಂದ ಇಂತಹ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟು, ಮಳೆಗಾಲದಲ್ಲಿ ನದಿಗಳಲ್ಲಿ ಹರಿದು ಹೋಗತಕ್ಕ ನೀರನ್ನು ಸಂಗ್ರಹಿಸಿ, ನೀರಾವರಿ ಆಗುವುದಕ್ಕೆ ಅನುಕೂಲತೆಯನ್ನು ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದು ಕೇವಲ ಶಿಗ್ಗಾಂವ್, ಸವಣೂರು ಕಡೆ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕುಗಳಲ್ಲಿ ಎಲ್ಲಿ ನದಿಗಳು ೧೫-೨೦ ಕಿಲೋಮೀಟರ್ ಅಂತರದಲ್ಲಿ ಹರಿಯುತ್ತವೆ, ಅಲ್ಲಿ, ಮಳೆಗಾಲದಲ್ಲಿ ನೀರು ಹರಿದು ಸಮುದ್ರಕ್ಕೆ ಕೊಡತಕ್ಕಂಥ ನೀರು ಏನಿದೆ ಅದನ್ನು ತಡೆಹಿಡಿದು ಸಂಗ್ರಹಿಸಿ, ಲಿಫ್ ಇರಿಗೇಷನ್ ಕಾರ್ಪೊರೇಷನ್ ಮುಖಾಂತರ ನೀರಾವರಿ ಸೌಲಭ್ಯವನ್ನು ರೈತರಿಗೆ ಕಲ್ಪಿಸಿಕೊಟ್ಟರೆ ಒಂದು ಉಪಕಾರವನ್ನು ಮಾಡಿದಂತಾಗುತ್ತದೆ ಎಂದು ಹೇಳಬಯಸುತ್ತೇನೆ. ಏತಕ್ಕೆಂದರೆ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗೆ ಇವತ್ತು ೧೦೦ಕ್ಕೆ ೭೫ ಪರ್ಸೆಂಟ್‌ನಷ್ಟು ಹಣವನ್ನು ನಬಾರ್ಡ್ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ನಮ್ಮ ರಾಜ್ಯ ಸರಕಾರದವರು ಕೇವಲ ೨೫ ಪರ್ಸೆಂಟ್ ಹಣ ತೊಡಗಿಸಬೇಕಾಗುತ್ತದೆ. ಆದುದರಿಂದ ಇವತ್ತು ನಬಾರ್ಡ್ ಸಂಸ್ಥೆಯಿಂದ ಹಣ ಪಡೆದುಕೊಂಡು, ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ನಿಯಮಾವಳಿಗೆ ತಿದ್ದುಪಡಿ ಮಾಡಿ, ಅದರಿಂದ ಹೆಚ್ಚಿನ ಒಂದು ಸೌಲಭ್ಯವನ್ನು ಮಾಡಿಕೊಳ್ಳಬೇಕು. ಯಾವ ಸಂದರ್ಭದಲ್ಲೂ ಲಿಫ್ಟ್ ಇರಿಗೇಷನ್ ಕಾರ್ಪೊರೇಷನನ್ನು ತೆಗೆಯಬಾರದು, ವೈಂಡ್‌ಅಪ್ ಮಾಡಬಾರದು ಇದಕ್ಕೆ ಪ್ರತ್ಯೇಕವಾದ ಅಸ್ತಿತ್ವ ಕೊಟ್ಟು ಮುಂದುವರಿಸಬೇಕೆಂದು ಹೇಳಬಯಸುತ್ತೇನೆ.

ಇವತ್ತಿನ ದಿವಸ ಶಿಕ್ಷಣ ಆಯವ್ಯಯದಲ್ಲಿ ೭೨.೫೫ ಕೋಟಿ ಹಣವನ್ನು ವಿನಿಯೋಗಿಸಲಾಗಿಟ್ಟಿದ್ದಾರೆ. ಈ ಹಣ ಶಿಕ್ಷಣ ಕ್ಷೇತ್ರಕ್ಕೆ ಸಾಲುವುದಿಲ್ಲ ಎಂಬ ಮಾತನ್ನು ಒತ್ತಿ ಹೇಳುತ್ತೇನೆ. ವಯಸ್ಕರ ಶಿಕ್ಷಣಕ್ಕಾಗಿ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಇಡೀ ರಾಜ್ಯದಲ್ಲಿ ವಯಸ್ಕರ ಶಿಕ್ಷಣದಿಂದ ಎಷ್ಟು ಲಾಭವಾಗಿದೆ ಎಂದರೆ ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳಾದರೂ ಕೂಡ ಇದರಿಂದ ಯಾವ ಉಪಯೋಗವನ್ನೂ ಸಾಧಿಸಿಲ್ಲ ಎಂಬ ಮಾತನ್ನು ನಾವು ಒಪ್ಪಲೇಬೇಕು. ಆದುದರಿಂದ ವಯಸ್ಕರ ಶಿಕ್ಷಣಕ್ಕೆ ಖರ್ಚು ಮಾಡತಕ್ಕಂಥ ಹಣವನ್ನು, ಪ್ರಾಥಮಿಕ ಶಿಕ್ಷಣಕ್ಕೆ ಮತ್ತು ಶಾಲಾ ಕಟ್ಟಡಗಳಿಗೆ

ಉಪಯೋಗ ಮಾಡಿದರೆ ಒಳ್ಳೆಯದಾಗುತ್ತದೆ ಎಂಬ ಸಲಹೆಯನ್ನು ನೀಡಬಯಸುತ್ತೇನೆ. ಇಲ್ಲಿ ಬರುವವರಲ್ಲಿ ಅನೇಕ ಜನರು ಗ್ರಾಮಾಂತರ ಪ್ರದೇಶದಿಂದ ಬರುವವರು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಒಂದು ಶಿಕ್ಷಣ ಮಟ್ಟಕ್ಕೂ, ನಗರ ಪ್ರದೇಶಗಳಲ್ಲಿರತಕ್ಕಂಥ ವಿದ್ಯಾಭ್ಯಾಸದ ಮಟ್ಟಕ್ಕೂ ಹೋಲಿಸಿ ನೋಡಿದಾಗ ಭೂಮಿಗೂ ಆಕಾಶಕ್ಕೂ ಇರತಕ್ಕಂಥ ಅಜಗಜಾಂತರ ವ್ಯತ್ಯಾಸ ಇದೆ. ಆದುದರಿಂದ ಈ ಒಂದು ಶಿಕ್ಷಣ ಮಟ್ಟವನ್ನು ಹೆಚ್ಚಿಸಬೇಕಾದರೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆದರೆ ದುರ್ದೈವದಿಂದ ಕಳೆದ ಆರೂವರೆ ವರ್ಷಗಳಿಂದ ಮರಾಡಳಿತವನ್ನು ನಡೆಸಿದ ಜನತಾ ಮತ್ತು ಜನತಾದಳದ ಸರಕಾರದ ವ್ಯವಸ್ಥೆಯಿಂದ ಇಡೀ ಕರ್ನಾಟಕ ರಾಜ್ಯದಲ್ಲಿ ೧೨ ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇದನ್ನು ಹೇಳುವುದಕ್ಕೆ ನಮಗೆ ನಾಚಿಕೆ ಎನಿಸುತ್ತಿದೆ. ಆದುದರಿಂದ ಇವತ್ತು ನಾವು ಶಿಕ್ಷಕರನ್ನು ಕೊಡದೇ ಇದ್ದಾಗ ಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಣ ಮಟ್ಟವನ್ನು ಎತ್ತರಿಸಲಿಕ್ಕೆ ಯಾವ ರೀತಿ ಸಾಧ್ಯ ಎಂಬ ಬಗ್ಗೆ ನಾವು ಬಹಳ ಆಲೋಚನೆ ಮಾಡಬೇಕಾಗಿದೆ. ಆದುದರಿಂದ ನಗರ ಪ್ರದೇಶಗಳಲ್ಲಿ ಯಾವ ರೀತಿ ಉತ್ತಮ ಗುಣ ಮಟ್ಟದ ಶಿಕ್ಷಣ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿದೆ, ಅದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲೂ ಉತ್ತಮ ಶಿಕ್ಷಣ ಮಟ್ಟವನ್ನು ಕಲ್ಪಿಸಿಕೊಡಬೇಕು. ಶಿಕ್ಷಣ ಮಟ್ಟವನ್ನು ಉತ್ತಮಗೊಳಿಸುವುದು ಕೇವಲ ಶಿಕ್ಷಕರನ್ನು ಕೊಡುವುದರಿಂದ ಅಷ್ಟೇ ಅಲ್ಲ, ನವೋದಯ ಶಾಲೆಗಳನ್ನು ಪ್ರತಿ ತಾಲ್ಲೂಕಿನಲ್ಲೂ ತೆರೆದು ಅದಕ್ಕೆ ಉತ್ತಮವಾದ ವ್ಯವಸ್ಥೆಯನ್ನು ಮಾಡಿಕೊಡಬೇಕೆಂಬ ಮಾತನ್ನು ಹೇಳಬಯಸುತ್ತೇನೆ.

ನಮ್ಮ ರಾಜ್ಯದ ವಿಧಾನ ಮಂಡಲದ ಅಧಿವೇಶನ ನಮ್ಮ ಉತ್ತರ ಕರ್ನಾಟಕದಲ್ಲಿ, ಹುಬ್ಬಳ್ಳಿ ಧಾರವಾಡದಂತಹ ನಗರ ಪ್ರದೇಶದಲ್ಲಿ ನಡೆಯಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಹಾರಾಷ್ಟ್ರದಲ್ಲಿ ವಿಧಾನಸಭಾ ಅಧಿವೇಶನವನ್ನು ನಾಗಪುರದಲ್ಲೂ ನಡೆಸುತ್ತಾರೆ, ಮುಂಬಯಿಯಲ್ಲೂ ಕೂಡಾ ನಡೆಸುತ್ತಾರೆ. ಇಲ್ಲೂ ಅದೇ ರೀತಿ ನಡೆಯಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಉತ್ತರ ಕರ್ನಾಟಕದ ಜನರ ಬಹಳ ದಿನದ ಬೇಡಿಕೆಯಾದ, ಹೈಕೋರ್ಟ್ ಬೆಂಚನ್ನು ಹುಬ್ಬಳ್ಳಿ ನಗರದಲ್ಲಿ ಸ್ಥಾಪಿಸಬೇಕೆಂಬುದನ್ನು ಈಡೇರಿಸಬೇಕು. ಇದರಿಂದ ಆ ಭಾಗದ ಅಭಿವೃದ್ಧಿಗೆ ಹೆಚ್ಚಿನ ಅನುಕೂಲವಾಗುವುದು ಎಂದು ಹೇಳುತ್ತೇನೆ.

ಇದರ ಜೊತೆಗೆ ನಮ್ಮ ಧಾರವಾಡ ಜಿಲ್ಲೆಯಲ್ಲಿ ಸುಮಾರು ೧೮ ಕ್ಷೇತ್ರಗಳು ಇವೆ. ಅದರಲ್ಲಿ ಹಾವೇರಿ ಬಹಳ ದೊಡ್ಡದು ಇದೆ. ಹಾವೇರಿಯನ್ನು ಜಿಲ್ಲೆ ಎಂದು ಪರಿಗಣಿಸಬೇಕಾಗಿದೆ. ನಾವು ಈಗಾಗಲೇ ಜಿಲ್ಲಾ ವಿಂಗಡಣೆ ಮಾಡಬೇಕೆಂದು ಮನವಿ ಮಾಡುತ್ತಾ ಬಂದಿದ್ದೇವೆಂದು ಹೇಳಿ ಇಮವರೆಗೂ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಎಲ್. ಜಾಲಪ್ಪ (ದೊಡ್ಡಬಳ್ಳಾಪುರ).— ಮಾನ್ಯ ಅಧ್ಯಕ್ಷಣೀಯವರೇ ಮಾನ್ಯ ಅರ್ಥ ಮಂತ್ರಿಗಳು ಮಂಡಿಸಿರತಕ್ಕಂಥ ಬಜೆಟ್ ಭಾಷಣವನ್ನು ಓದಿದಾಗ ಮೇಲಿನಿಂದ ಐದಾರು ಪುಟಗಳಲ್ಲಿ ತಮ್ಮ ಚಿಂತನೆಯನ್ನು ಮಾಡಿದ್ದಾರೆ. ಅದರಲ್ಲೂ ಈಗಿನ ಪ್ರಪಂಚದಲ್ಲಿ ಏನು ವ್ಯತ್ಯಾಸಗಳು ಆಗುತ್ತವೆ ಎನ್ನುವ ಬಗ್ಗೆ ನಮ್ಮ ಗಮನಹರಿಸುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಅದರಲ್ಲಿರುವ ಒಂದು ಅಂಶವನ್ನು ನಾನು ಉದ್ಧರಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

> "12. In the melee of plan targets, growth rates, per capita incomes, gross domestic products and other planning jargon, the focus sometimes tends to get blurred, the statistical targets becoming more important than the persons for whom they are meant. Whatever might have happened in the past, it is the intention of this Government that the focal point of the Plan shall be the common man..."

ಈ ಕಾಮನ್ ಮ್ಯಾನ್ ಅನ್ನು ದೃಷ್ಟಿಯಲ್ಲಿಟ್ಟುಕೊಂಡು ಆಯವ್ಯಯವನ್ನು ರೂಪಿಸಿದ್ದಾರೆ. ಇದು ಎಷ್ಟರ ಮಟ್ಟಿಗೆ ಈ ಸಾಧಾರಣ ಮನುಷ್ಯನನ್ನು ಮುಟ್ಟುತ್ತದೆ? ಅದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. ತೆರಿಗೆಗಳನ್ನು ಹಾಕಲೇಬಾರದು ಎಂದು ಹೇಳುವವನು ನಾನಲ್ಲ. ತೆರಿಗೆಗಳನ್ನು ಹಾಕಿದರೆ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳುವವನು ನಾನಲ್ಲ. ಯಾವುದೇ ಒಂದು ರಾಜ್ಯ ರಾಷ್ಟ್ರ ಅಭಿವೃದ್ಧಿ ಹೊಂದಬೇಕಾದರೆ ತೆರಿಗೆಗಳನ್ನು ಹಾಕಲೇಬೇಕು. ಯಾರ ಮೇಲೆ ಎಷ್ಟರ ಮಟ್ಟಿಗೆ ತೆರಿಗೆಗಳನ್ನು ಹಾಕಬೇಕು, ಹಾಗೆ ಬಂದಂತಹ

ತೆರಿಗೆಗಳನ್ನು ಯಾವುದಕ್ಕೆ ಉಪಯೋಗ ಮಾಡಬೇಕು ಎನ್ನುವುದೇ ಬಹಳ ಮುಖ್ಯ. ನಮ್ಮ ಸಭೆಯಲ್ಲಿ ಬಹಳ ಜನರು ನಮ್ಮ ರೈತರು ಚುನಾಯಿಸಿ ಕಳುಹಿಸಿರುವ ಪ್ರತಿನಿಧಿಗಳು ಇದ್ದಾರೆ. ನಮ್ಮ ಗುರಿ ರೈತರ ಅಭಿವೃದ್ಧಿ ಕಡೆಗೆ ಇರಬೇಕು. ಅವನು ಸಹ ಸರಿಯಾಗಿ ಆತ್ಮಗೌರವದಿಂದ ಬಾಳಬೇಕು. ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೂ ರೈತರಿಗೂ ಅಥವಾ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೂ ರೈತರಿಗೂ ಆದಾಯದಲ್ಲಿ ವ್ಯತ್ಯಾಸ ಇರಬಾರದು ಇದು ನಮ್ಮೆಲ್ಲರ ಗುರಿ ಆಗಬೇಕು. ಬಹಳ ವರ್ಷಗಳಿಂದ ನಮ್ಮ ರೈತರು ನಾವು ಹಳ್ಳಿಗಳಿಗೆ ಹೋದಾಗ ಹೇಳುತ್ತಾರೆ. ಏನು ಸ್ವಾಮಿ ಸರ್ಕಾರದಲ್ಲಿ ಕ್ಲಾಸ್ ಫೋರ್ ಮತ್ತು ಕ್ಲಾಸ್ ೩ ನೌಕರರಿಗೆ ಏನು ಸಂಬಳ ಕೊಡುತ್ತಾರೆ ಅದು ನಮ್ಮ ೩-೪ ವರ್ಷಗಳ ಆದಾಯಕ್ಕೆ ಸಮಾನ ಎಂದು. ನಾವು ನಮ್ಮ ಜೀವನದಲ್ಲಿ ಸರಿ ಹೋಗುವುದು ಯಾವಾಗ ? ನಮ್ಮ ಮಕ್ಕಳು ಮರಿಗಳು ಯಾವಾಗ ಸರಿ ಹೋಗುವುದು? ಅವರಿಗೆ ನಾವು ಯಾವಾಗ ಒಳ್ಳೆಯ ವಿದ್ಯಾಭ್ಯಾಸ ಕೊಡಿಸುವುದು ಎಷ್ಟೋ ಸರ್ಕಾರಗಳು ಬಂದರೂ ಇದು ಪರಿಹಾರವಾಗಲಿಲ್ಲ ಎಂದು ಎಲ್ಲಾ ಚುನಾಯಿತ ಪ್ರತಿನಿಧಿಗಳನ್ನು ಇವತ್ತು ಹಳ್ಳಿಗಳಲ್ಲಿ ಕೇಳುತ್ತಿದ್ದಾರೆ. ಈ ಬಜೆಟ್‌ನಲ್ಲಿ ನಮ್ಮ ರೈತರಿಗೆ ಬೇಕಾದದ್ದು ಮುಖ್ಯವಾಗಿ ಏನೆಂದರೆ ನೀರು ಮತ್ತು ಗೊಬ್ಬರಗಳು ಬೆಳೆದ ಬೆಳೆಗೆ ಸರಿಯಾದ ಅಂದರೆ ಸ್ವಲ್ಪ ಮಟ್ಟಿಗೆ ಉತ್ತಮವಾದ ಧಾರಣೆ ಈ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ಎಷ್ಟು ಪ್ರಯತ್ನ ಪಟ್ಟಿದ್ದಾರೆಂದು ನಾವು ಗಮನಿಸಬೇಕು. ಈ ಸಾರಿ ಬಜೆಟ್‌ನಲ್ಲಿ ೨೦೦ ಕೋಟಿ ರೂಪಾಯಿಯಷ್ಟು ಹಣವನ್ನು ನೀರಾವರಿಗೆ ಇಟ್ಟಿದ್ದಾರೆ. ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಕೃಷ್ಣಾ ನದಿಯ ನೀರನ್ನು ಉಪಯೋಗಿಸಿಕೊಳ್ಳಬೇಕಾದರೆ ೩ ಸಾವಿರ ಕೋಟಿ ರೂಪಾಯಿಗಳು ಬೇಕೆಂದು ಹೇಳಿದ್ದಾರೆ. ಪ್ರತಿ ವರ್ಷವೂ ೨೦೦ ಕೋಟಿ ರೂಪಾಯಿಗಳನ್ನು ಮಾತ್ರ ಕೊಡುತ್ತಾ ಹೋದರೆ ಇನ್ನೆಷ್ಟು ವರ್ಷಕ್ಕೆ ಈ ನೀರನ್ನು ಉಪಯೋಗಿಸಿಕೊಳ್ಳಬಹುದು? ಇನ್ನು ೧೫ ವರ್ಷವಾದರೂ ಬೇಕಾಗುತ್ತದೆ. ಆಗ ಮೂರರಷ್ಟು ಎಸ್ಕಲೇಷನ್ ಕಾಸ್ಟ್ ಹೆಚ್ಚಾಗಿರುತ್ತವೆ. ಹೀಗೆ ಆದರೆ ನೀರನ್ನು ಪೂರ್ಣ ಮಟ್ಟದಲ್ಲಿ ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕೆ ಆಲ್ಟರ್‌ನೇಟಿವ್ ಏನು? ಇದರ ಬಗ್ಗೆ ತಾವು ಏನು ಚಿಂತನೆ ಮಾಡಿದ್ದೀರಿ ಇದು ಒಳ್ಳೆಯದೇ. ಲಿಫ್ಟ್ ಇರಿಗೇಷನ್ ಸ್ಕೀಮ್ ಮಾಡುವುದಕ್ಕೆ ರೈತರುಗಳಿಗೆ ಸರ್ಕಾರ ನೇರವಾಗಿ ಕಾಂಟ್ರಿಬ್ಯೂಷನ್ ಮಾಡುತ್ತದೆಂದು ಹೇಳಿದ್ದೀರಿ. ಸ್ವಾಮಿ, ನಿಮ್ಮ ಹತ್ತಿರ ಸವಲತ್ತುಗಳು ಏನಿದೆ? ನಿಮ್ಮಲ್ಲಿ ಹಣ ಎಷ್ಟಿದೆ? ಎಷ್ಟು ಲಿಫ್ಟ್ ಇರಿಗೇಷನ್‌ಗೆ ಹಣವನ್ನು ಕೊಡಬಲ್ಲಿರಿ? ಅದನ್ನು ಯೋಚನೆ ಮಾಡಿದಾಗ ಈ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳಿಗೆ ಸರ್ಕಾರ ಕಾಂಟ್ರಿಬ್ಯೂಟ್ ಮಾಡುವ ಸ್ಥಿತಿಯಲ್ಲಿ ಇಲ್ಲ. ಇದರ ಬಗ್ಗೆ ನೀವು ಯೋಚನೆ ಮಾಡಿ ಇದನ್ನು ಜಾರಿಗೆ ತರುವುದಕ್ಕಾಗಿ ಸಹಕಾರ ಸಂಘಗಳನ್ನು ರಚಿಸಿಕೊಳ್ಳಿರಿ. ಲಿಫ್ಟ್ ಇರಿಗೇಷನ್ ಸ್ಕೀಮ್‌ಗೆ ರೈತರುಗಳು ೧೦ ಪರ್ಸೆಂಟ್ ಆದರೂ ಕಾಂಟ್ರಿಬ್ಯೂಟ್ ಮಾಡಲಿಕ್ಕೆ ಹೇಳಿ. ಇನ್ನು ಮಿಕ್ಕ ಹಣವನ್ನು ಸಹಕಾರಿ ಬ್ಯಾಂಕುಗಳಿಂದ ಅಥವಾ ಬೇರೆ ಬ್ಯಾಂಕುಗಳಿಂದ ಪಡೆದು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ನಾನು ಈಗಲೂ ಹೇಳುತ್ತೇನೆ. ರೈತರಿಂದ ಅಲ್ಪಸ್ವಲ್ಪ ಹಣವನ್ನು ನೀವು ಕಾಂಟ್ರಿಬ್ಯೂಷನ್ ರೂಪದಲ್ಲಿ ತೆಗೆದುಕೊಳ್ಳದಿದ್ದರೆ ಈ ಯೋಜನೆಗಳನ್ನು ಯಶಸ್ವಿಯಾಗಿ ಮಾಡುವುದಕ್ಕಾಗುವುದಿಲ್ಲ. ಪರಿಶಿಷ್ಟ ವರ್ಗದವರು ಮತ್ತು ದುರ್ಬಲ ವರ್ಗದವರು ಕಾಂಟ್ರಿಬ್ಯೂಟ್ ಮಾಡುವುದಕ್ಕೆ ಶಕ್ತಿ ಇರುವುದಿಲ್ಲ. ಅಂತಹವರುಗಳಿಗೆ ಶೇರ್ ಕ್ಯಾಪಿಟಲ್ ಇಂಜೆಕ್ಟ್ ಮಾಡಿ, ಅವರುಗಳಿಗೆ ಶಕ್ತಿ ತುಂಬಿ. ಈ ರೀತಿ ಮಾಡುವುದರಿಂದ ಕಾರ್ಯಗಳನ್ನು ಸಾಧಿಸಬೇಕೇ ವಿನಹ ಎಲ್ಲಾ ಸರ್ಕಾರವೇ ಮಾಡುತ್ತದೆಂದರೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ — ಬೆಟರ್‌ಮೆಂಟ್ ವಾಟರ್ ಚಾರ್ಜ್ ಕೊಡಿ ಎಂದರೆ ದೊಡ್ಡ ಚಳುವಳಿ ನಡೆಯುತ್ತದೆ ಇನ್ನು ಶೇರ್ ಕೊಟ್ಟು ಲಿಫ್ಟ್ ಇರಿಗೇಷನ್ ಮಾಡುತ್ತೇವೆಂದು ಜನ ಮುಂದೆ ಬರುತ್ತಾರೆಯೋ?

ಶ್ರೀ ಆರ್. ಎಲ್. ಜಾಲಪ್ಪ.— ನಮ್ಮ ತಾಲ್ಲೂಕಿನಲ್ಲಿ ಒಂದು ಗಾದೆ ಇದೆ. ಕಳ್ಳನಿಗೆ ಸಾಲ ಸಿಕ್ಕಿದರೆ ಅವನು ಕಳ್ಳತನಕ್ಕೆ ಏಕೆ ಹೋಗಬೇಕು ಎಂದು ಪ್ರತಿಯೊಂದು ಕೆಲಸ ಮಾಡುವಾಗಲೂ ಚಳುವಳಿ ನಡದೇ ನಡೆಯುತ್ತದೆ. ಸಾವಿರಾರು ರೂಪಾಯಿಗಳ ಸಂಬಳ ಪಡೆಯುವವರೂ ಕೂಡ ಚಳುವಳಿ ಮಾಡುತ್ತಾರೆ. ಚಳುವಳಿಗೆ ಹೆದರಿಕೊಂಡು ಕೆಲಸ ಮಾಡದೇ ಇರುವುದಕ್ಕಾಗುತ್ತದೇನು?

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ — ನಿಮಗೂ ಗೊತ್ತಿದೆ. ಇದಕ್ಕೆ ಭಯ ಬಿದ್ದು ಇದನ್ನು ನಾನು ಹೇಳಲಿಲ್ಲ, ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ಬೆಟರ್‌ಮೆಂಟ್ ವಾಟರ್ ಲೆವಿ ಟ್ಯಾಕ್ಸ್ ಮಾಡ್ರಿ ಎಂದದ್ದಕ್ಕೆ ಒಂದು ಚಳುವಳಿ ಆಯಿತು. ಪಂಪುಸೆಟ್ಟುಗಳಿಗೆ ಎಲೆಕ್ಟ್ರಿಸಿಟಿ ಕನ್‌ಸೆಷನ್ ಕೊಡಬೇಕೆಂದು ಅದನ್ನೂ ಕೊಟ್ಟಾಯಿತು. ಅದೇ ಇಶ್ಯೂ ಮೇಲೆ ದೊಡ್ಡ ಚಳುವಳಿ

ನಡೆದು ಕೊನೆಗೆ ಸರ್ಕಾರ ಉರುಳಿ ಬೀಳುವ ಪರಿಸ್ಥಿತಿಗೆ ಬಂತು. ಆಮೇಲೆ ನೀವು ಬಂದ್ರಿ ನಿಮಗೂ ಇದೇ ಇಶ್ಯೂ ಮೇಲೆ ಬೋಲ್ಡ್ ಡಿಸಿಷನ್ ತೆಗೆದುಕೊಂಡು ರಿಸೋರ್ಸ್ ಮೊಬಿಲೈಸೇಷನ್ ಮಾಡಿ ಎಂದು ನಾವು ಕೇಳಿದಾಗ ನೀವು ಅದನ್ನು ಮಾಡುವುದಕ್ಕಾಗಲಿಲ್ಲ. ಈಗ ನಾವು ಪ್ರಾಕ್ಟಿಕಲ್ ಆಗಿ ಮಾತನಾಡೋಣ. ಯಾವ ರೀತಿ ಇರತಕ್ಕ ರಿಸೋರ್ಸ್‌ನಲ್ಲೇ ಈ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡಬಹುದು? ಮಾಡುವುದಕ್ಕಾಗದಿದ್ದರೆ ಅದಕ್ಕೆ ಆಲ್ಟರ್‌ನೇಟಿವ್ ಏನಿದೆ ಎಂದು ತಾವು ಹೇಳಿದರೆ ಅದು ಒಳ್ಳೆಯ ಸಲಹೆಯಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.— ಇರುವ ಸಂಪನ್ಮೂಲಗಳಲ್ಲೇ ಪ್ರಾಜೆಕ್ಟ್‌ಗಳನ್ನು ಕಂಪ್ಲೀಟ್ ಮಾಡುವುದಕ್ಕೆ ನಿಮ್ಮ ಕೈಲೂ ಆಗುವುದಿಲ್ಲ, ನಮ್ಮ ಕೈಲೂ ಆಗುವುದಿಲ್ಲ. ಈಗ ಮೂರು ಸಾವಿರ ಕೋಟಿ ಬೇಕೆಂದು ಅಂದಾಜಿರುವ ಕಡೆ ಇನ್ನು ೧೫ ವರ್ಷ ಆಗುವ ಹೊತ್ತಿಗೆ ಅದು ೧೫ ಸಾವಿರ ೨೦ ಕೋಟಿ ರೂಪಾಯಿಗೆ ಅಂದಾಜು ಹೋಗಬಹುದು. ಬಚಾವತ್ ಕಮೀಷನ್ ಪ್ರಕಾರ ನೀರನ್ನು ಉಪಯೋಗಿಸಿಕೊಳ್ಳಬೇಕು. ಆ ನೀರನ್ನು ಉಪಯೋಗಿಸಿಕೊಳ್ಳಬೇಕಾದರೆ ಬೇರೆ ಆಲ್ಟರ್‌ನೇಟಿವ್ ಕಂಡುಹಿಡಿಯಬೇಕಾಗುತ್ತದೆ. ಯಾರಿಗೆ ನೀರಿನ ಸೌಲಭ್ಯ ಬೇಕೋ ಅವರು ೫ ಪರ್ಸೆಂಟ್ ೧೦ ಪರ್ಸೆಂಟ್ ಹಣವನ್ನು ಕಾಂಟ್ರಿಬ್ಯೂಟ್ ಮಾಡಬೇಕಾಗುತ್ತದೆ. ಅವರೇನು ಧರ್ಮಕ್ಕೆ ಕೊಡಬೇಕಾಗಿಲ್ಲ. ಇವತ್ತು ಅದಕ್ಕೆ ನೀವೇ ಕೊಟ್ಟರೆ ಎಷ್ಟು ಕೊಡುವುದಕ್ಕೆ ಸಾಧ್ಯ?

ಎರಡನೆಯದಾಗಿ ಕಾವೇರಿ ಕೃಷ್ಣ ಬೇಸಿನ್‌ಗಳಲ್ಲಿ ನೀರು ಉಪಯೋಗದ ಮಾತಾಯಿತು. ಸ್ವಾಮಿ ಮೈದಾನ ಪ್ರದೇಶಗಳ ಗತಿಯೇನು? ಬೆಂಗಳೂರು ಜಿಲ್ಲೆ ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಿವೆ. ಅವರ ಕಡೆ ಏನು ಯೋಚನೆ ಮಾಡಿದ್ದೀರಿ. ಜಿಲ್ಲಾಪರಿಷತ್ತು ಆದ ಮೇಲೆ ೫೦೦ ಎಕರೆ ಕಡಿಮೆ ಇರುವ ಯೋಜನೆಗಳನ್ನು ಜಿಲ್ಲಾಪರಿಷತ್ತುಗಳು ಮಾಡಬೇಕು ಅದಕ್ಕಿಂತ ಹೆಚ್ಚಾಗಿದ್ದರೆ ಸರ್ಕಾರ ಮಾಡಬೇಕೆಂದು ಇದೆ. ೫೦೦ ಎಕರೆ ಒಳಗೆ ಬರುವ ಯೋಜನೆಗಳು ನಾನು ಕಂಡಂತೆ ಯಾವುದೂ ಇಲ್ಲ. ಎಲ್ಲಾ ೨೦, ೩೦, ೧೫, ಎಕರೆಗಳ ಕೆರೆಕುಂಟೆ ಮಾಡಬಹುದೇ ಹೊರತು ಮೇಜರ್ ಪ್ರಾಜೆಕ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ ಅದಕ್ಕೆ ಅವಕಾಶವೂ ಇಲ್ಲ. ಅವರ ಗತಿಯೇನು? ಏನು ಯೋಚನೆ ಮಾಡಿದ್ದೀರಿ? ಕೆಲವು ಜಿಲ್ಲೆಗಳಿಗೆ ಹಣ ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ಉದಾಹರಣೆಗೆ ಬೆಂಗಳೂರು ಜಿಲ್ಲಾಪರಿಷತ್ತಿಗೆ ನೀರಾವರಿಗೆ ೨೨ ಲಕ್ಷ ಕೊಟ್ಟಿದ್ದೀರಿ. ಇದರಲ್ಲಿ ಬರುವ ೮ ತಾಲ್ಲೂಕುಗಳಲ್ಲಿ ಇಷ್ಟು ಹಣದಲ್ಲಿ ಏನು ಡೆವಲಪ್‌ಮೆಂಟ್ ಮಾಡುವುದು. ಅದು ಮೇಂಟೆನೆನ್ಸ್‌ಗೆ ಸಾಕಾಗುವುದಿಲ್ಲ. ಅವರ ಗತಿಯೇನು? ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಪ್ರೊಜೆಕ್ಟ್ ಮಾಡುತ್ತಿದ್ದೀರಿ. ಈ ಹಣ ಹೊಂಚಬೇಕಾದರೆ ರೈತರಿಗೂ ನೀವು ಏನಾದರೂ ಸೌಲಭ್ಯ ಕೊಡಬೇಕಲ್ಲ. ಆದ್ದರಿಂದ ದಯವಿಟ್ಟು ಜಿಲ್ಲಾಪರಿಷತ್ತುಗಳಿಗೆ ಕಡೆ ಪಕ್ಷ ಒಂದೊಂದು ಜಿಲ್ಲೆಗೆ ೨-೩ ಕೋಟಿಯಾದರೂ ಪ್ರೊವೈಡ್ ಮಾಡದಿದ್ದರೆ ಜನ ನೀರಾವರಿ ಮಾಡುವುದಕ್ಕೆ ಆಗುವುದಿಲ್ಲ.

ಎರಡನೆಯದಾಗಿ ಬಹಳಷ್ಟು ರೈತರು ಕೇಳುತ್ತಿದ್ದಾರೆ. ಮೇಜರ್ ಪ್ರೊಜೆಕ್ಟ್ ಮಾಡುತ್ತಿದ್ದೀರಿ ಅಲ್ಲಿ ೧೫೦ ರಿಂದ ೨೫೦ ರವರೆಗೂ ವಾಟರ್‌ರೇಟ್ ಎಂದು ಕೊಡುತ್ತಾ ಇದ್ದಾರೆ. ಹಾಗೆಯೇ ಒಂದು ಪಂಪಸೆಟ್ಸ್ ಹಾಕಬೇಕಾದರೆ ೪೦ ಸಾವಿರ ರೂಪಾಯಿಗಳು ಬೇಕಾಗುತ್ತದೆ. ಅದನ್ನು ಸಾಲ ಮಾಡಿ, ತೀರಿಸುವ ಹೊತ್ತಿಗೆ ಅದು ೮೦ ಸಾವಿರ ಆಗಿರುತ್ತದೆ. ಜೊತೆಗೆ ವಿದ್ಯುಚ್ಛಕ್ತಿ ರೇಟ್ ಕೊಡಬೇಕು. ಇಷ್ಟಾದರೂ ವರ್ಷಕ್ಕೆ ೨ ಸಲ ೩ ಸಲ ಬೋರ್‌ವೆಲ್ ಸುಟ್ಟುಹೋಗುತ್ತದೆ. ವಿದ್ಯುತ್ ಸರಬರಾಜು ಸರಿಯಿರುವುದಿಲ್ಲ. ರಾತ್ರಿ ಹೊತ್ತು ನಿದ್ದೆಗೆಟ್ಟು ನೀರು ಕಟ್ಟಬೇಕು. ಈ ಕಷ್ಟವನ್ನೆಲ್ಲ ಏಕೆ ಅನುಭವಿಸಬೇಕು ನಮಗೂ ಬೋರ್‌ವೆಲ್‌ನ್ನು ನೀವೇ ಹಾಕಿಸಿಕೊಟ್ಟು ಬಿಡಿ, ನೀವು ಕೇಳಿದ ವಾಟರ್ ರೇಟನ್ನು ಕೊಟ್ಟು ಬಿಡುತ್ತೇವೆಂದು ರೈತರು ಕೇಳುತ್ತಿದ್ದಾರೆ. ಇದನ್ನೆಲ್ಲಾ ಸರ್ಕಾರ ಜ್ಞಾಪಕದಲ್ಲಿಟ್ಟುಕೊಂಡು ಮೈದಾನ ಜಿಲ್ಲೆಗಳಲ್ಲಿ ಒಂದೊಂದು ಜಿಲ್ಲೆಗೆ ಕಡೆ ಪಕ್ಷ ಸಾವಿರ ಎಕರೆಯನ್ನಾದರೂ ನೀರಾವರಿ ಮಾಡದಿದ್ದರೆ ಇಂಬ್ಯಾಲೆನ್ಸ್ ಆಗುತ್ತದೆ, ಒಂದಲ್ಲಾ ಒಂದು ದಿವಸ ಇದು ರಾಜ್ಯದ ಹಿತಕ್ಕೆ ಧಕ್ಕೆ ಬರುತ್ತದೆಂದು ಹೇಳಲು ಇಷ್ಟಪಡುತ್ತೇನೆ.

ಎರಡನೆಯದಾಗಿ ಗಂಗಾಕಲ್ಯಾಣ. ಇದೊಂದೇ ಆಲ್ಟರ್‌ನೇಟಿವ್ ಇರುವುದು. ಇದನ್ನು ಹೇಳಿಕೊಂಡು ಎಷ್ಟು ಅಂತ ಕೊಡುತ್ತೀರಿ ಸ್ವಾಮಿ? ಬೆಂಗಳೂರು ಜಿಲ್ಲೆ ಇದಕ್ಕಾಗಿ ೮೦ ಲಕ್ಷ ಕೊಡುತ್ತಿದ್ದಿರಿ, ಇದರಲ್ಲಿ ಎಷ್ಟು ಗಂಗಾಕಲ್ಯಾಣ ಮಾಡಬಹುದು? ಅಬ್ಬಾಬ್ಬ ಎಂದರೆ ೮ ತಾಲ್ಲೂಕಿನಲ್ಲಿ ತಲಾ ೫ ರಂತೆ ೪೦ ಮಾಡಬಹುದು, ಇದರಂತೆ ಒಂದು ತಾಲ್ಲೂಕಿನಲ್ಲಿ ೪೦೦ ಅಥವಾ ೫೦೦ ಎಕರೆ ಆಗಬಹುದು, ಒಂದೊಂದು ತಾಲ್ಲೂಕಿಗೆ ಸಾಕೇ ಇದು. ಜೊತೆಗೆ ಒಂದು ರಿಸ್ಟ್ರಿಕ್ಷನ್ ಹಾಕಿದ್ದಿರಿ. ಗಂಗಾಕಲ್ಯಾಣ ಇರುವುದು ಮುಖ್ಯವಾಗಿ ಎಸ್. ಸಿ. ಮತ್ತು ಎಸ್. ಟಿ. ಜನಾಂಗಗಳಿಗೆ ಅವರೂ ಕೂಡ ೨೫ ಪರಸೆಂಟ್ ಕೊಟ್ಟರೆ ೭೫ ಪರ್ಸೆಂಟ್ ಸರ್ಕಾರ ಕೊಡುತ್ತದೆಯೆಂದು ರಿಸ್ಟ್ರಿಕ್ಷನ್ ಇದೆ. ದಯವಿಟ್ಟು

ಈ ನಿಬಂಧನೆಯನ್ನು ತೆಗೆಯಿರಿ ಇದಕ್ಕೆ ಹೆಚ್ಚು ಹಣಕೊಡದಿದ್ದರೆ ಬಡವರ ಉದ್ಧಾರವಾಗುವುದಿಲ್ಲ. ಸರ್ಕಾರದ ಕಾರ್ಯಕ್ರಮ ಸಾಮಾನ್ಯನಿಗೆ ತಲುಪುವುದಿಲ್ಲ, ದಯಮಾಡಿ ಯಾವರೀತಿಯಾದರೂ ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಪ್ರೈವೇಟ್ ಪಾರ್ಟಿಗಳೇ ಸಾಲಸೋಲ ಮಾಡಿ ತಾವೇ ಬೋರ್‌ವೆಲ್ ಹಾಕಿಸಿಕೊಂಡಿರುತ್ತಾರೆ. ಅವುಗಳಲ್ಲಿ ಎಷ್ಟು ಪಂಪ್‌ಸೆಟ್‌ಗಳಿಗೆ ತಾವು ವಿದ್ಯುತ್ ಸರಬರಾಜು ಮಾಡುವುದಕ್ಕೆ ಸಾಧ್ಯ ಎಂಬುದನ್ನು ಹೇಳಬೇಕು. ನಮ್ಮ ಸರ್ಕಾರ ಇದ್ದಾಗ ೪೦ ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದೆವು. ತಾವು ಈಗ ಏನೂ ಹೇಳದಿರುವುದರಿಂದ ರೈತರು ತಾನೇ ಯಾವ ಧೈರ್ಯದ ಮೇಲೆ ಬೋರ್‌ವೆಲ್ ಹಾಕಿಸುತ್ತಾರೆ? ೬೫ ಸಾವಿರ ಬಾವಿಗಳಿಗೆ ನಾವು ವಿದ್ಯುಚ್ಛಕ್ತಿ ಕೊಡಬೇಕಾಗಿದೆಯೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಈ ವರ್ಷ ಮುಗಿಯುವುದರೊಳಗೆ ಎಷ್ಟಾಗುತ್ತದೆಯೋ ಮಾಡುತ್ತೇವೆ. ಮಿಕ್ಕಿದ್ದನ್ನು ಯೋಚನೆ ಮಾಡೋಣ ಎಂದು ಹೇಳಿದ್ದಾರೆ, ಅಲ್ಲದೇ ಮಂಗಳೂರಿನಲ್ಲಿ ಜನವಾಣಿ ಪ್ರೋಗ್ರಾಂನಲ್ಲಿ ಸ್ಪೆಸಿಫಿಕ್ಕಾಗಿ ಉತ್ತರ ಹೇಳಲಿಲ್ಲ ದಯಮಾಡಿ ಈಗ ಅರ್ಥ ಮಂತ್ರಿಗಳು ಉತ್ತರದಲ್ಲಿ ೯೦-೯೧ನೇ ಸಾಲಿಗೆ ಎಷ್ಟು ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡುತ್ತೀರಿ ಎಂಬುದನ್ನು ಹೇಳಿ. ಆ ಪ್ರಕಾರ ರೈತರು ಪ್ಲಾನ್ ಮಾಡಿಕೊಳ್ಳಬಹುದು. ದಯಮಾಡಿ ಇದನ್ನು ಹೇಳಬೇಕು. ನನ್ನ ಪ್ರಾರ್ಥನೆ ಏನೆಂದರೆ ನೀವು ಒಂದು ಕಾನೂನಾದರೂ ತಂದು ಪ್ರತಿಯೊಂದು ಇಂಚು ಭೂಮಿ ಕಾಂಟೂರ್‌ಬಂಡಿಂಗ್ ಆಗಬೇಕು. ಅಲ್ಲಿ ಬಿದ್ದ ನೀರು ಇಂಗುವ ಹಾಗೆ ಮಾಡಬೇಕು. ನಾವೇ ಮಾಡಬೇಕಾಗಿತ್ತು ಇದನ್ನು. ಕಾರಣಾಂತರಗಳಿಂದ ನಾವು ಮಾಡಲಿಲ್ಲ, ನೀವಾದರೂ ಮಾಡಿ. ಎರಡನೆಯದಾಗಿ ಕೆರೆಗಳಲ್ಲಿ ಹೂಳು ತುಂಬಿ ಹೋಗಿದೆ. ಇರೋ ಹೂಳನ್ನು ತೆಗೆಸುವುದು ಎಷ್ಟು ಕಷ್ಟಕರ ಎಂಬುದು ನಿಮಗೇ ಬಿಟ್ಟಿದ್ದೇವೆ. ಅದಕ್ಕೆ ಏನಾದರೂ ಯೋಜನೆ ಇದ್ದರೆ ಯೋಚನೆ ಮಾಡಿ. ಒಂದು ಯೋಜನೆ ಹಾಕಿಕೊಳ್ಳುವುದು ಉತ್ತಮ. ಈ ಕಾಂಟೂರ್‌ಬಂಡಿಂಗ್‌ನಿಂದ ಫರ್ದರ್ ಹೂಳು ತುಂಬುವುದನ್ನು ತಪ್ಪಿಸಬಹುದು.

ಇದರ ಬಗ್ಗೆ ತಾವಾದರೂ ಯೋಚನೆ ಮಾಡಿ ಯಾವುದಾದರೂ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಒಂದು ಕಾನೂನು ತರುವುದು ಸುಲಭವೆಂದು ಕಾಣುತ್ತದೆ. ಏನೆಂದರೆ ೧೦ ಎಕರೆ ಮೇಲೆ ಯಾರಿಗೆ ಜಮೀನು ಇರುತ್ತದೆಯೋ ಅವರು ಒಂದು ಎಕರೆ ಅಫೋರೆಸ್ಟೇಷನ್ ಮಾಡಲೇಬೇಕು, ತಲಾ ೧೦ ಎಕರೆಗೆ ಅವರ ಜಮೀನಿನಲ್ಲಿ. ನಮ್ಮನಷ್ಟೆ ಅಲ್ಲ ಮುಂದಿನ ಜನರೇಷನ್ ಅನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಿದರೆ ಬಹಳ ಒಳ್ಳೆಯದೆಂದು ಹೇಳುತ್ತಿದ್ದೇನೆ. ಇದನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ. ಸ್ವಾಮಿ, ಕುಡಿಯುವ ನೀರಿನದು. ಈಗ ಸೆಪ್ಟೆಂಬರ್‌ನಲ್ಲಿ ಮಳೆ ಬಿದ್ದದ್ದು ಇವತ್ತಿನವರೆಗೂ ಒಂದು ಹನಿ ಇಲ್ಲ. ಅದರಲ್ಲೂ ಕಳೆದ ವರ್ಷವಂತೂ ನಮ್ಮ ಕಡೆ ಮಳೆಯಾಗಲಿಲ್ಲ. ಕೋಲಾರ ಜಿಲ್ಲೆಯ ಕೆಲವು ಭಾಗಗಳಲ್ಲಿ ಬಹಳ ಕಡೆ ರಾಗಿ ಬೆಳೆಯೂ ಸರಿಯಾಗಿ ಕೈಗೆ ಬರಲಿಲ್ಲ. ಆರೇಳು ವರ್ಷದ ಹಿಂದೆ ಹಾಕಿದ್ದ ಬೋರ್‌ವೆಲ್‌ಗಳಲ್ಲಿ ಇವತ್ತು ನೀರಿಲ್ಲ. ವಾಟರ್‌ಲೆವಲ್ ಕೆಳಗಡೆ ಹೋಯಿತು. ಎರಡು ವರ್ಷ ಸರ್ಕಾರ ಕೊಟ್ಟಿದ್ದ ಹಣಕ್ಕೆ ಸೇರಿಸಿ ಜಿಲ್ಲಾ ಪರಿಷತ್ತುಗಳು ಹೆಚ್ಚು ಖರ್ಚು ಮಾಡಿ ನೀರು ಒದಗಿಸಿದ್ದಾರೆ. ಈ ವರ್ಷ ತಾವು ಕುಡಿಯುವ ನೀರಿಗೆ ಕೊಟ್ಟಿರುವುದು ೩೩ ಲಕ್ಷ ಅಂದರೆ ಸುಮಾರು ೧೬೦ ಬಾವಿಗಳನ್ನು ೮ ತಾಲ್ಲೂಕಿನಲ್ಲಿ ನಾವು ತೋಡಿಸ ಬಹುದು ಈ ಹಣ ಯಾವುದಕ್ಕೂ ಸಾಕಾಗುವುದಿಲ್ಲ. ಈಗಾಗಲೇ ನೀರಿನ ತೊಂದರೆ ಸ್ಟಾರ್ಟಾಗಿದೆ. ೩೩ ಲಕ್ಷ ಏನು ಕೊಟ್ಟಿದ್ದೀರಿ ಕನಿಷ್ಟ ೧ ಕೋಟಿಯಾದರೂ ನಮ್ಮ ಜಿಲ್ಲಾಪರಿಷತ್ತಿಗೆ ನೀರು ಒದಗಿಸಲು ಕೊಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೈದಾನ ಪ್ರದೇಶಗಳಲ್ಲಿ ಈ ಪ್ರಾಬ್ಲಂ ಇದೆ ಅದರ ಕಡೆ ತಾವು ಹೆಚ್ಚಿನ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು ರಸ್ತೆ ಗಳು. ನಮ್ಮ ಸ್ನೇಹಿತರು ಕೆಲವರು ಹೇಳಿದರು ರಸ್ತೆಗಳ ಪರಿಸ್ಥಿತಿ ಹೇಗಿದೆ ಎಂದು. ಹಾಸನ ಜಿಲ್ಲೆಯಲ್ಲಂತೂ ರಸ್ತೆಗಳು ಚೆನ್ನಾಗಿವೆ. ನಮ್ಮ ಹೊಸ ಮಂತ್ರಿಗಳಿಗೆ ತಲೆನೋವು ಕಡಿಮೆಯಾಗಿದೆ,

ಆದರೆ ಈ ಜಿಲ್ಲಾ ಪರಿಷತ್ತುಗಳ ಮೇಲ್ವಿಚಾರಣೆಗೆ ರಸ್ತೆಗಳನ್ನು ನಾವು ಏನು ಕೊಟ್ಟಿದ್ದೇವೆ. ಅವುಗಳ ಸ್ಥಿತಿಯಂತೂ ಬಹಳ ಶೋಚನೀಯವಾಗಿದೆ. ತಾಲ್ಲೂಕು ಬೋರ್ಡ್‌ನಲ್ಲಿ ನಾನು ಅಧ್ಯಕ್ಷನಾಗಿ ದ್ದಾಗ ಒಳ್ಳೆಯ ಕೆಲಸಗಳನ್ನು ಏನು ಮಾಡಿದ್ದೇನೆ, ಈಗ ಆ ರಸ್ತೆಗಳು ಕೂಡಾ ಸರಿಯಾಗಿಲ್ಲ ನಮ್ಮ ಜಿಲ್ಲೆಯೊಳಗೆ ಜಿಲ್ಲಾ ಪರಿಷತ್ತಿಗೆ ಕೊಟ್ಟಿರುವ ರಸ್ತೆ ೩೮೫೭ ಕಿಲೋಮೀಟರ್, ಟಾರ್ ರೋಡು ಇರುವುದು ೩೬೦ ಕಿಲೋಮೀಟರ್. ಈ ವರ್ಷ ಅದಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಟಾರ್ ರೋಡ್ ಮಾಡುವುದಕ್ಕೆ ಇಡೀ ಜಿಲ್ಲೆಗೆ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಏನು ಮಾಡುವುದು ಸ್ವಾಮಿ? ಹತ್ತು ಲಕ್ಷ ರೂಪಾಯಿಗಳಿಗೆ ಎಂಟು ಕಿಲೋಮೀಟರ್ ಆಗುತ್ತದೆ. ಸಾಕೆ? ಹತ್ತು ಕಿಲೋ ಮೀಟರ್ ಆಗುವುದಿಲ್ಲ. ಏಕೆಂದರೆ ಎಸ್ಕಲೇಟ್ ಜನ ಎಲ್ಲಾ ಜಾಸ್ತಿಯಾಗಿದೆ. ತಾವೇ ಇದರ ಬಗ್ಗೆ ಯೋಚನೆ ಮಾಡಿ. ಮೇಜರ್ ಪೋರ್ಷನ್ ನಿಮಗೆ ಇನ್‌ಕಂ ಬರುವುದು ರೈತರ ಪ್ರಾಡಕ್ಟ್ಸ್‌ನಿಂದ.

ನೀವು ನಮ್ಮನ್ನೇ ಕಡೆಗಾಣಿಸಿದರೆ ಹೇಗೆ? ದಯಮಾಡಿ ಇದರ ಕಡೆ ಸ್ವಲ್ಪ ಗಮನವನ್ನು ಕೊಡಬೇಕು. ಕಡೆಯಪಕ್ಷ ಒಂದೊಂದು ತಾಲ್ಲೂಕಿಗೆ ಎಂಟು–ಹತ್ತು ಕಿಲೋಮೀಟರ್‌ನಾದರೂ ಮಾಡಿಸಿಕೊಡಿ.

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಸಚಿವರು).—ರೂರಲ್ ರೋಡ್ಸ್‌ಗೆ ಎಂದು ನೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ.—ನೂರು ಕೋಟಿ ರೂಪಾಯಿಗಳನ್ನು ಹಾಕಿದ್ದೀರಿ. For the entire State are you going to spend this money through Zilla Parishad or are you going to spend this money directly through your department. I know y u are going to give this money to Zilla Parishads. In your budget I find the Bangalore District gets only 10 lakhs.

ಶ್ರೀ ಎಂ. ರಾಜಶೇಖರಮೂರ್ತಿ.—ಎ.ಪಿ.ಎಂ.ಸಿ. ಗ್ರಾಂಟ್ಸ್‌ನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ ಇದೇನು ಹೊಸ ಯೋಜನೆ ಅಲ್ಲ. ನಮ್ಮ ಸರ್ಕಾರದಲ್ಲೂ ನಮ್ಮ ಮಂತ್ರಿಗಳಿಗೆ ಬಹಳ ಜನಕ್ಕೆ ಇದರ ಮೇಲೆ ಕಣ್ಣಿತ್ತು. ಬಹಳ ಜನ ಮಂತ್ರಿಗಳಿಗೆ ಇದರ ಮೇಲೆ ಕಣ್ಣಿತ್ತು. ಆದರೆ ನಾನು ಇದನ್ನು ಅಲೋ ಮಾಡಿರಲಿಲ್ಲ. ಏತಕ್ಕೆ ಅಲೋ ಮಾಡಿರಲಿಲ್ಲ ಎಂದರೆ ಅದಕ್ಕೆ ಕಾನೂನು ಅಡ್ಡಿ ಬೇರೆ ಇದೆ. ನಾವು ಸಬ್ ಮಾರ್ಕೆಟ್ಸ್‌ಗಳನ್ನು ಜಾಸ್ತಿ ಮಾಡಿದ್ದೆವು. ನೀವು ಸಬ್ ಮಾರ್ಕೆಟ್ ಫೆಸಿಲಿಟೀಸ್ ಕೊಡಬೇಕು ಎಂದು ರಸ್ತೆಗೆ ಉಪಯೋಗಿಸಿಕೊಂಡುಬಿಟ್ಟಿದ್ದೀರಿ. ಅವರ ಗತಿ ಏನು ಸ್ವಾಮಿ? ದುಡ್ಡನ್ನು ಕೊಡುವವರ ಗತಿ ಏನು? ಮಾರ್ಕೆಟ್ ಸೆಸ್ ಎಂದು ಕೊಡುತ್ತಾರಲ್ಲಾ, ಅವರ ಗತಿಯೇನು ಸ್ವಾಮಿ? ನಾವು ಕಾನೂನನ್ನು ಬದಲಾಯಿಸಿದ್ದೇವೆ. ಕಾನೂನನ್ನು ಬದಲಾಯಿಸಿ ಬೇರೆ ಎ.ಪಿ.ಎಂ.ಸಿ. ಯಾರ್ಡ್‌ಗಳಲ್ಲಿ ಸಬ್‌ಯಾರ್ಡ್‌ಗಳಿಗೆ ಕೂಡಾ ಅನುಕೂಲಗಳನ್ನು ಕೊಡಬೇಕು, ಗೋಡೌನುಗಳನ್ನು ಕಟ್ಟಿಸಿ ಕೊಡಬೇಕು, ರೈತರು ಬೆಳೆದ ಬೆಳೆ ಖರ್ಚಾಗದಿದ್ದರೆ ಅವರಿಗೆ ಅಡ್ವಾನ್ಸ್ ಕೊಡಬೇಕು, ಅವರಿಗೆ ಫ್ರೀ ಆಫ್ ಇಂಟೆರೆಸ್ಟ್ ಅಡ್ವಾನ್ಸ್ ಕೊಡಬೇಕು, ಮತ್ತು ಹಳ್ಳಿಗಳಿಂದ ಬರುವ ಮಾಲು ಅದರಲ್ಲಿ ಸಣ್ಣ ರೈತರು, ಅತಿ ಸಣ್ಣ ರೈತರು ತರುವಾಗ "ನೋ ಪ್ರಾಫಿಟ ನೋ ಲಾಸ್"ನ ಮೇಲೆ ಅವರ ಪ್ರೊಡ್ಯೂಸ್‌ನ್ನು ಟ್ರಾನ್ಸ್‌ಪೋರ್ಟ್ ಮಾಡಿಕೊಡಬೇಕು ಎಂದು ಹೇಳಿ ಕಾನೂನನ್ನು ಬದಲಾಯಿಸಿದ್ದೇವೆ. ಆ ಹಣವನ್ನೆಲ್ಲಾ ಉಪಯೋಗಿಸಿಕೊಂಡಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸಹಕಾರಿ ಕ್ಷೇತ್ರದಲ್ಲಿ ಕೆಲಸವನ್ನು ಮಾಡಿರತಕ್ಕಂಥ ಹಿರಿಯ ಶಾಸಕರಾದಂಥ ಜಾಲಪ್ಪನವರು ಮಾತನಾಡುತ್ತಿದ್ದಾರೆ. ಎ.ಪಿ.ಎಂ.ಸಿ. ಪ್ರಶ್ನೆ ಬಂದಿದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅನೇಕ ಕಡೆ ಎ.ಪಿ.ಎಂ.ಸಿ.ಗೆ ಬೇಕಾದಂಥ ಎಲ್ಲಾ ಅಭಿವೃದ್ಧಿ ಕಾರ್ಯವಾಗಿದೆ. ನನ್ನ ಶಿಕಾರಿಪುರ ತಾಲ್ಲೂಕಿನಲ್ಲಿ ೭೦-೮೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಯಾರ್ಡ್ ಆಗಿದೆ, ಬಿಲ್ಡಿಂಗ್ ಆಗಿದೆ ಎಲ್ಲಾ ಇದೆ ಆದರೆ ಅದೇ ರೀತಿ ಮಾರ್ಕೆಟ್ ಬಂದು ಎಲ್ಲಾ ವ್ಯವಹಾರಗಳು ಕೂಡಾ ನಡೆಯಬೇಕಾಗಿತ್ತು ಈ ರೀತಿ ನಮ್ಮ ರಾಜ್ಯದಲ್ಲಿ ನನಗೆ ಗೊತ್ತಿರುವ ಪ್ರಕಾರ ೨೫–೩೦ ಕಡೆ ಮಾರ್ಕೆಟ್ ಷಿಫ್ಟ್ ಆಗದೇ ಕೋಟ್ಯಾಂತರ ರೂಪಾಯಿಗಳು ಇನ್‌ವೆಸ್ಟ್ ಮಾಡಿರುವುದು ವ್ಯರ್ಥವಾಗಿದೆ. ಅಂಥ ಎ.ಪಿ.ಎಂ.ಸಿ.ಗಳ ನಾಳೆ ಅಭಿವೃದ್ಧಿಯಾಗಿ ಮಾರ್ಕೆಟ್ ಷಿಫ್ಟ್ ಆಗಿ ಅಲ್ಲಿ ವ್ಯವಹಾರ ಶುರುವಾಗುವವರೆಗೂ ದುಡ್ಡು ಏತಕ್ಕೆ ಮೂಲೆಯಲ್ಲಿ ಕೊಳೆಯಬೇಕು? ಅದರ ಬದಲಿಗೆ ಅಭಿವೃದ್ಧಿಗೆ ವಾಪಸ್ ಕೊಡುವ ಹಾಗೆ ಅದನ್ನಾದರೂ ಮಾಡಬೇಕು. ಮತ್ತು ಎ.ಪಿ.ಎಂ.ಸಿ. ಮಾರ್ಕೆಟ್‌ಗಳಲ್ಲಿ ವ್ಯವಹಾರ ಶುರುವಾಗುವ ಹಾಗೆ ಗಮನವನ್ನು ಕೊಡಬೇಕು, ಆ ರೀತಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆಂದು ನನ್ನ ಸಲಹೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾರ್ಕೆಟನ್ನು ಷಿಫ್ಟ್ ಮಾಡಬೇಕಾದದ್ದು ಸರ್ಕಾರದ ಕರ್ತವ್ಯ ಮತ್ತು ಸ್ಥಳೀಯ ವರ್ತಕರು ಏನು ಇದ್ದಾರೆ, ಅದು ಅವರ ಕರ್ತವ್ಯ. ನನ್ನ ಕಾಲದಲ್ಲಿ ಆಗಿದ್ದ ೯೦-೯೫ರಷ್ಟು ಮಾರ್ಕೆಟ್‌ಗಳನ್ನು ಜನರಿಂದ ಅಡ್ಡಿ ಬಂದರೂ, ನಾನು ಷಿಫ್ಟ್ ಮಾಡಿಸಿದ್ದೇನೆ, ಧಿಕ್ಕಾರವನ್ನು ಹಾಕಿಸಿಕೊಂಡಿದ್ದೇನೆ, ಹೊಡೆಯುವುದಕ್ಕೆ ಬಂದಿದ್ದರು, ಎಲ್ಲಾ ಮಾಡಿದರೂ ಅದಕ್ಕೆ ಗಮನ ಕೊಡದೆ ಷಿಫ್ಟ್ ಮಾಡಿಸಿದ್ದೇನೆ. ಷಿಫ್ಟ್ ಅಲ್ಲಿ ಆಗದಿದ್ದರೆ ಷಿಫ್ಟ್ ಮಾಡಿಸಬೇಕಾದದ್ದು ಸರ್ಕಾರದ ಜವಾಬ್ದಾರಿ ಮತ್ತು ಅದಕ್ಕೆ ನಾವು ನೀವು ಒತ್ತಾಯವನ್ನು ಕೂಡಾ ತರೋಣ.

೨-೩೦ ಪಿ. ಎಂ.

ಈ ಇನ್‌ಫ್ರಾಸ್ಟ್ರಕ್ಚರ್ ಪ್ರೊವೈಡ್ ಮಾಡುವುದಕ್ಕೆ ಹಣ ಖರ್ಚು ಮಾಡಬೇಕು. ಎರಡನೆಯದಾಗಿ ಸುಪ್ರೀಂ ಕೋರ್ಟಿನ ಒಂದು ಜಡ್ಜ್‌ಮೆಂಟ್ ಇದೆ. ಅದರಲ್ಲಿ ಏನು ಹೇಳುತ್ತಾರೆ ಎಂದರೆ "However laudable the cause may be the market fee that is collected shall not be diverted for other purposes." ತಾವು ಬೇಕಾದರೆ ತರಿಸಿ ನೋಡಿ. ನಮ್ಮ ರಾಜ್ಯದ ಹೈಕೋರ್ಟಿನ ಡಿಸಿಷನ್ ಇದೆ. ಅದರಲ್ಲಿ ಸ್ಪೆಸಿಫಿಕ್ ಆಗಿ ಹೇಳಿದ್ದಾರೆ. ಇದರ ಮೇಲೆ ರಸ್ತೆಗಳಿಗೆ ಹಿಂದೆ ಗುಂಡೂರಾಯರ ಕಾಲದಲ್ಲಿ ಈ ಹಣ ಉಪಯೋಗಿಸುತ್ತಿದ್ದರು. ೧೩ ಕೋಟಿ ರೂಪಾಯಿ ರೋಡ್‌ಗಳಿಗೆ ಕೊಟ್ಟಿದ್ದರು. ಹೈ ಕೋರ್ಟಿನವರು ತೀರ್ಮಾನ ಕೊಟ್ಟರು. ಈ ಹಣವನ್ನು ಬೇರೆಯದಕ್ಕೆ ಉಪಯೋಗಿಸಲು ನಿಮಗೆ ಅಧಿಕಾರ ಇಲ್ಲ ಎಂದು. ಇದನ್ನು ರಿಟರ್ನ್ ಮಾಡಿ ಎಂದು ಹೇಳಿದರು. ನಾವು ಒಂದು ಅಪೀಲ್ ಹೋಗಿದ್ದೆವು. ಸುಪ್ರೀಂ ಕೋರ್ಟ್ ಆರ್ಗ್ಯುಮೆಂಟ್ ಮಾಡುವಾಗ ನಾನು ಸಹ ಹೋಗಿದ್ದೆ. ೧೩ ಕೋಟಿ ರೂಪಾಯಿಗಳನ್ನು ಉಳಿಸಿಕೊಂಡು ಬಂದೆವು. ಇದಕ್ಕೆ ಕಾನೂನು ಬದ್ಧವಾಗಿ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಅದನ್ನು ನೋಡಿಕೊಂಡು ತಾವು ಕಾರ್ಯಕ್ರಮ ಮಾಡಿ. I don't think it will be held valid in the High Court. ಮೊದಲು ರೈತರಿಗೆ ಕೊಡಬೇಕಾದ ಸೌಭಾಗ್ಯಗಳನ್ನು ಕೊಟ್ಟು ಬಿಡಿ. ನಮ್ಮ ಕಾಲದಲ್ಲಿ ಒಂದು ರೂಪಾಯಿಗೆ ಇದ್ದದ್ದನ್ನು ಎಂಟಾಣೆಗೆ ಇಳಿಸಿದ್ದೇವೆ. ಎರಡು ರೂಪಾಯಿ ಇದ್ದದ್ದನ್ನು ಒಂದು ರೂಪಾಯಿಗೆ ಇಳಿಸಿದಾಗ ಕೂಡ ಅಷ್ಟೇ ಹಣ ಬಂತು. ನಮ್ಮ ಉದ್ದೇಶ ಏನು ಅಂದರೆ ಎರಡು ರೂಪಾಯಿ ಇದ್ದದ್ದನ್ನು ಒಂದು ರೂಪಾಯಿಗೆ ಇಳಿಸಿದಂಥ ಕಾಲದಲ್ಲಿ ಮಾಲು ಹೊರಗಡೆ ಹೋಗುತ್ತದೆ. ಮಾರ್ಕೆಟ್‌ಯಾರ್ಡಿಗೆ ಬರುತ್ತದೆ. ಅದರಿಂದ ಕಮರ್ಷಿಯಲ್ ಟ್ಯಾಕ್ಸ್‌ನವರಿಗೆ ಅನುಕೂಲವಾಗುತ್ತದೆ ಎಂದು ಉದ್ದೇಶ ಇಟ್ಟುಕೊಂಡು ಮಾಡಿದ್ದೆವು. ತಾವು ಅರ್ಥ ಮಂತ್ರಿಗಳಾಗಿದ್ದೀರಿ. ಬಹಳ ಅನುಭವಸ್ಥರು ಕೂಡ. ದಯಮಾಡಿ ಈ ಮಾರ್ಕೆಟ್‌ಯಾರ್ಡಿಗೆ ಹೆಚ್ಚು ಮಾಲು ಬರುತ್ತದೆ, ಚೆಕ್ ಪೋಸ್ಟ್‌ನಲ್ಲಿ ಮಾಲು ಎಂಟ್ರಿ ಏನು ಮಾಡುತ್ತಾರೆ ಅವರದ್ದು ಕಂಪೇರ್ ಮಾಡಿಸಿದರೆ ನಿಮಗೆ ಟ್ಯಾಕ್ಸ್ ಕೊನೆಯ ಪಕ್ಷ ೧೬–೧೫ ಲಕ್ಷ ರೂಪಾಯಿ ಜಾಸ್ತಿ ಬರುತ್ತದೆ ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದ ಬಹಳ ಮುಖ್ಯವಾದ ಸಂಗತಿಯನ್ನು ಹೇಳಬೇಕಾಗಿದೆ. ನಾವು ಒಂದು ಕಾನೂನನ್ನು ಬದಲಾಯಿಸಿದ್ದೇವೆ. ರೈತನಿಂದ ಕಮೀಷನ್ ತೆಗೆದುಕೊಳ್ಳುವ ಬದಲು ಮಾರ್ಕೆಟ್ ಯಾರ್ಡ್‌ನಿಂದ ತೆಗೆದುಕೊಳ್ಳಬೇಕೆಂದು. ಇವೊತ್ತು ಏನು ಆಗುತ್ತಿದೆ. ರೈತನಿಂದ ತೆಗೆದುಕೊಳ್ಳುವುದಕ್ಕೆ ಬದಲು ಪರ್ಚೇಸರ್‌ನಿಂದ ತೆಗೆದುಕೊಳ್ಳುತ್ತಿದ್ದೀರಿ. ಇದು ಶೋಷಣೆ. ಇಲ್ಲಿ ಹಗಲು ದರೋಡೆ ನಡೆಯುತ್ತಿದೆ, ಈ ಕಾನೂನು ಬರಬಾರದು ಎಂದು ನಮ್ಮ ಪಕ್ಷದಲ್ಲಿಯೇ ವಿರೋಧ ಇತ್ತು. ವೆಸ್ಟೆಡ್ ಇಂಟರೆಸ್ಟ್ ಎಂದು ಅವರು ನಮ್ಮ ಪಕ್ಷದಲ್ಲೂ ಇರುತ್ತಾರೆ, ನಿಮ್ಮ ಪಕ್ಷದಲ್ಲೂ ಇದ್ದಾರೆ. ಅಲ್ಲಿಗೂ ಸಹ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಧೈರ್ಯ ಮಾಡಿ ಈ ಕಾನೂನನ್ನು ತರಬೇಕೆಂದು ಹೇಳಿದ ಮೇಲೆ ಕಾನೂನನ್ನು ತಂದಿದ್ದೇವೆ. ನಿಮ್ಮ ಪಕ್ಷದ ಸದಸ್ಯರಾದ ಶ್ರೀಮಾನ್ ಕೆ. ಹೆಚ್. ಪಾಟೀಲರು ಈ ಕಾನೂನನ್ನು ೩೫ ವರ್ಷಗಳಿಂದ ತರುವುದಕ್ಕೆ ನಮಗೆ ಸಾಧ್ಯವಾಗಿರಲಿಲ್ಲ. ಇವೊತ್ತು ಮಂತ್ರಿಗಳು ಮಂಡಿಸಿದ್ದಾರೆ. ಇದರ ಮೇಲೆ ಚರ್ಚೆ ಬೇಡ. ಯುನಾನಿಮಸ್ ಆಗಿ ಇದನ್ನು ಒಪ್ಪಿಕೊಳ್ಳೋಣ ಎಂದು ಹೇಳಿದರು. ಇವೊತ್ತು ಕಾನೂನಿನ ಗತಿ ಏನು ಆಗಿದೆ. ರಕ್ಷಣೆ ಕೊಡುವುದಕ್ಕೆ ಸಾಧ್ಯ ಇಲ್ಲ. ನಮ್ಮ ಕೈಯಲ್ಲಿ ಯೋಗ್ಯತೆ ಇಲ್ಲ ಎಂದು ಇದರಿಂದ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇದರ ಬಗ್ಗೆ ನಮ್ಮದು ನಿಮ್ಮದು ಇಬ್ಬರದ್ದೂ ಜವಾಬ್ದಾರಿ ಇದೆ. ಇದನ್ನು ಇನ್‌ಸಿಸ್ಟ್ ಮಾಡಬೇಕು. ರೈತನ ಹತ್ತಿರ ಯಾವುದೇ ಕಾರಣದಿಂದ ತೆಗೆದುಕೊಂಡರೆ ಪನಿಷಬಲ್ ಅಫೆನ್ಸ್ ಎಂದು ಮಾಡಬೇಕು. ಇದನ್ನು ಮಾಡದೇ ಇದ್ದರೆ ನೀವು ರೈತರ ಶೋಷಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಕೊಟ್ಟ ಹಾಗೆ ಆಗುತ್ತದೆ. ದಯವಿಟ್ಟು ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು, ಒಂದುವೇಳೆ ನಿಮ್ಮ ಕೈಯಲ್ಲಿ ಆಗದಿದ್ದರೆ you scrap the commission system itself. I wanted to do it but there were so many constraints. ನಮ್ಮ ಕೈಲಿದ್ದು ಮಾಡಿದ್ದೇವೆ. ರೈತನ ಶೋಷಣೆಯನ್ನು ತಪ್ಪಿಸಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ತಾವು ಕಮೀಷನ್ ತೆಗೆದು ಹಾಕಬೇಕೆಂದು ಹೇಳಿದ್ದಿರಿ. ಇದು ಸ್ವಾಗತಾರ್ಹ ವಿಚಾರ, ಆದರೆ ವಾಸ್ತವವಾಗಿ ಮಾರ್ಕೆಟ್ ಕಮಿಟಿಯಲ್ಲಿ ರೈತನಿಂದ ಕೂಡ ವಸೂಲಿ ನಡೆದಿದೆ, ವ್ಯಾಪಾರಸ್ಥರಿಂದ ವಸೂಲಿ ನಡೆದಿದೆ, ಅದನ್ನು ಕೂಡ ನಿಲ್ಲಿಸುವುದಕ್ಕೆ ಆಗುತ್ತಾ,

ಇಲ್ಲ. ಅದನ್ನು ಮತ್ತೆ ಮೊದಲಿನ ತರಹ ಇಂಟ್ರೊಡ್ಯೂಸ್ ಮಾಡಿದರೆ ಒಳ್ಳೆಯದು. ಇದರಿಂದ ಜನಸಾಮಾನ್ಯರಿಗೆ ಒಳ್ಳೆಯದು ಆಗುತ್ತದೆ ಎಂದು ನನ್ನ ಅಭಿಪ್ರಾಯ ಕೂಡ ಇದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಈ ಪಟ್ಟಿ ತೀರಿಸುವಂತಹ ಪದ್ಧತಿ ಬದಲಾವಣೆ ಮಾಡಿದರೆ ಅನುಕೂಲ ಆಗಬಹುದು. ನನ್ನ ವಿಚಾರ ಅಂದರೆ ಚೆಕ್ ಪ್ರಾಂತಾಂತರ ಪಟ್ಟಿ ತೀರಿಸಿ ಎ. ಪಿ. ಎಂ. ಸಿ. ಕಛೇರಿ ಮುಖಾಂತರ ಪಟ್ಟಿ ಕೊಟ್ಟರೆ ದಳ್ಳಾಳಿ ಹೇಗೆ ತೆಗೆದುಕೊಳ್ಳುತ್ತಾನೆ. ಇದನ್ನು ಸ್ವಲ್ಪ ವಿಚಾರ ಮಾಡಬೇಕೆಂದು ಹೇಳುತ್ತೇನೆ....

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಹೇಳಿದ ಹಾಗೆ ಮಾಡಿದರೆ ಪ್ರಾಬ್ಲಮ್ ಸಾಲ್ವ್ ಆಗುವುದಿಲ್ಲ. ಏಕೆಂದರೆ ೧೨೦೦ಕ್ಕೆ ಚೆಕ್ ಕೊಡಬೇಕಾದಾಗ ೧೦೦೦ಕ್ಕೇ ಚೆಕ್ ಕೊಡುತ್ತಾನೆ. ಅದು ಸಾಲ್ವ್ ಆಗುವುದಿಲ್ಲ. ಆತ ಏನು ಮಾಡುತ್ತಾನೆ ಎಂದರೆ ಹಿಂದುಗಡೆ ಸೆಟಲ್ ಮಾಡಿ ೧೨೦೦ ರೂ. ಆಗಿದ್ದರೆ ೨೦ರಂತೆ ಕಮೀಷನ್ ಲೆಕ್ಕ ಮಾಡಿ ೨೦೦ ರೂ. ಹಿಡಿದುಕೊಂಡು ೧೦೦೦ ರೂ. ಕೊಡುತ್ತಾನೆ. ಇವೊತ್ತು ಹೀಗೆ ನಡೆಯುತ್ತಿರುವುದು. ಸನ್ಮಾನ್ಯ ಮಲ್ಲಾರಿಗೌಡರು ಹಿಂದಿನ ಸಿಸ್ಟಂ ತರೋಣ ಎಂದರು. ಹಿಂದಿನ ಸಿಸ್ಟಂ ತರುವುದರಿಂದ ಅದು ನಮ್ಮ ಇನ್‌ಎಫಿಷಿಯೆನ್ಸಿಯನ್ನು ತೋರಿಸಿದ ಹಾಗೆ ಆಗುತ್ತದೆ. that means they haveno faith in the Government. ಆದ್ದರಿಂದ ಇದನ್ನು ಇನ್‌ಸಿಸ್ಟ್ ಮಾಡಬೇಕು. ರೈತನ ಕಮೀಷನ್ ಯಾವುದೇ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ತೆಗೆದುಕೊಳ್ಳಬಾರದು. ರೈತನ ಶೋಷಣೆ ಆಗಬಾರದು, ನಾವು ಹಿಂದೆ ಕಾನೂನನ್ನು ಬದಲಾಯಿಸಿದ್ದೇವೆ. ಆದ್ದರಿಂದ ತಾವು ಕಾನೂನ್ನು ಎನ್‌ಫೋರ್ಸ್ ಮಾಡಿ ಅದು ಆಗದಿದ್ದರೆ ನೋ ಕಮೀಷನ್ ಎಂದು ಮಾಡಿ ಅವನು ಮಾರ್ಕೆಟ್ ಸೆಸ್‌ನಿಂದ ಒಂದು ರೂಪಾಯಿ ಕೊಟ್ಟು ಮಾಡಲಿ. ಒಂದು ಸಮಯ ಬಿಕರಿ ಆಗಲಿಲ್ಲ ಎಂದರೆ you advance him, you give him some advance out of market funds. ಇದನ್ನು ಮಾಡದೇ ಇದ್ದರೆ ಯಾರಿಗೋಸ್ಕರ ನಾವು ಸರ್ಕಾರವನ್ನು ನಡೆಸಬೇಕಾಗುತ್ತದೆ ? ಯಾವುದೇ ಸರ್ಕಾರ ಇರಬಹುದು, ರೈತನನ್ನು ಪ್ರೊಟೆಕ್ಟ್ ಮಾಡದೇ ಇದ್ದರೆ. ಅಥವಾ ಮಾಡುವುದಕ್ಕೆ ಆಗದಿದ್ದರೆ ಸರ್ಕಾರ ನಡೆಸಿ ಏನು ಪ್ರಯೋಜನ? ನಮ್ಮ ಸರ್ಕಾರ ಇರಬಹುದು ಅಥವಾ ನಿಮ್ಮ ಸರ್ಕಾರ ಇರಬಹುದು. ಸರ್ಕಾರ ಯಾವುದೂ ಶಾಶ್ವತವಾಗಿ ಇರುವುದಿಲ್ಲ. ೩–೪ ವರ್ಷ ಅಷ್ಟೇ. ೫ ವರ್ಷ ಈಗ ಜನ ನಿಮಗೆ ಓವರ್‌ಲೋಡ್ ಮಾಡಿದ್ದಾರೆ ಎಲ್ಲಿ ಕುಸಿದು ಬೀಳುತ್ತದೋ ಎಲ್ಲಿ ನಿಂತು ಬಿಡುತ್ತದೋ ಗೊತ್ತಿಲ್ಲ. ನನ್ನ ಆಸೆ ಐದು ವರ್ಷ ನೀವು ಅಧಿಕಾರದಲಿ ಇರಬೇಕು ಎಂದು. ಏಕೆಂದರೆ ಒಂದು ಸ್ಟೆಬಿಲಿಟಿ ಸರ್ಕಾರದಲ್ಲಿ ಇರುತ್ತದೆ. ಆದರೆ ಈ ಓವರ್‌ಲೋಡ್ ತಡೆದುಕೊಳ್ಳುವುದು ಕಷ್ಟವಾಗಬಹುದು. ಅದು ಏನೇ ಇರಲಿ ಅದು ನಿಮ್ಮ ಆಂತರಿಕ ವ್ಯವಹಾರ ಇದರ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ ನನ್ನ ವಿಚಾರ ಇಷ್ಟೇ. ರೈತರು ಇರಬಹುದು ಅಥವಾ ಕಾರ್ಮಿಕರೇ ಇರಬಹುದು, ಬಹಳ ಆಸೆ ಇಟ್ಟುಕೊಂಡು ನಿಮಗೆ ಚುನಾವಣೆಯಲ್ಲಿ ಮತ ನೀಡಿದ್ದಾರೆ, ಸಂತೋಷ. ಅದೂ ದೊಡ್ಡ ಮೆಜಾರಿಟಿ ಕೊಟ್ಟಿದ್ದಾರೆ. ಇತಿಹಾಸದಲ್ಲಿ ಎಂದೂ ಇರಲಿಲ್ಲ, ೧೭೭ ಜನರು ಅಷ್ಟು ಕೊಟ್ಟಿದ್ದಾರೆ. ಅವರಿಗೆ ಏನಾದರೂ ಸ್ವಲ್ಪ ಮಾಡಿ. ಒಂದು ಕಡೆ ತಾವು ಹೇಳಿದ್ದೀರಿ. "I must congratualate the people of Karnataka who have reposed confidence and voted us back to power." You only thanked them and we have to congratulate you and pity those people who have voted you to power.

ಛೇರ್ಮನ್.—೨೫ ನಿಮಿಷವಾಯಿತು, ಮುಗಿಸಿ...

ಶ್ರೀ ಆರ್. ಎಲ್. ಜಾಲಪ್ಪ.—ಆದ್ದರಿಂದ ಮತ ಕೊಟ್ಟವರ ಬಗ್ಗೆ ಏನಾದರೂ ವ್ಯವಸ್ಥೆ ಮಾಡಿ. ಕಂಗ್ರಾಚುಲೇಷನ್ ಎಂದರೆ ಅವರಿಗೆ ಏನಾದರೂ ಸಿಕ್ಕಬೇಕಲ್ಲಿ. ಆ ರೀತಿ ಸಿಕ್ಕುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿ ಎಂದು ನಾನು ತಮ್ಮನ್ನು ಕೇಳುತ್ತಾ ಇದ್ದೇನೆ...

ಶ್ರೀ ಎಂ. ರಾಜಶೇಖರಮೂರ್ತಿ.—ಅವರನ್ನು ಬಿಟ್ಟು ನಿಮ್ಮನ್ನೇ ಕಂಗ್ರಾಚುಲೇಟ್ ಮಾಡಿಬಿಡುತ್ತೇವೆ.

SRI R. L. JALAPPA.—We are also responsible for your coming here ಅದು ಒಂದು ಕಾರಣವೇ. You have to congradulate us also. ನಾವು ನಮ್ಮ ನಮ್ಮಲ್ಲೇ ಜಗಳ ಆಡದೇ ಇದ್ದಿದ್ದರೆ ನಮ್ಮ ಸರ್ಕಾರ ಹೋಗುತ್ತಿರಲಿಲ್ಲ, ಕೆಲಸ ಮಾಡದೇ ಹೋಗಲಿಲ್ಲ ನಾವು ಜಗಳ ಆಡಿಕೊಂಡು ಹೋದೆವು. ಆಮೇಲೆ ಟ್ಯಾಕ್ಸ್ ಬಗ್ಗೆ ನಾನು ಆಗಲೇ ಹೇಳಿದೆ. ತೆರಿಗೆಗಳನ್ನು ಹಾಕದೆ ಯಾರೂ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇನೆ.

ಈಗ ರೇಷ್ಮೆ ಮೇಲೆ ನೀವು ತೆರಿಗೆ ಹಾಕಿದ್ದೀರಿ. ರೇಷ್ಮೆ ಬೆಲೆ ಮಾರ್ಕೆಟ್‌ನಲ್ಲಿ ಬಹಳಷ್ಟು ಫ್ಲಕ್ಚುಯೇಷನ್ ಇದೆ. ಒಂದು ಕೆ. ಜಿ. ೧೨೦೦ ರೂಪಾಯಿವರೆಗೆ ಹೋಗಿತ್ತು, ಈಗ ೭೦೦. ೬೦೦ ರೂಪಾಯಿಗೆ ಬಂದಿದೆ ನಮ್ಮ ರಾಜ್ಯದಲ್ಲಿ ಏನು ನೇಯುತ್ತಾರೆ. ಆ ರೀತಿ ನೇಯುವವರಿಗೆ ಕಾನೂನು ಬದ್ಧವಾಗಿ ಸೀರೆ ನೇಯುವುದಕ್ಕೆ ಅವಕಾಶವಿಲ್ಲ, ಬಿಳೀ ಬಟ್ಟೆಯನ್ನು ನೇಯಬೇಕು. ಅದು ಹೊರಗಡೆ ಹೋಗಬೇಕು. ಕ್ಯಾಲೆಂಡರ್ ಆಗಬೇಕು, ಡೈಯಿಂಗ್ ಆಗಬೇಕು ಎಲ್ಲಾ ಆಗಬೇಕು, ಅದನ್ನು ತೆಗೆದುಕೊಂಡು ಬಂದು ಇಲ್ಲಿ ಮಾರಬೇಕು ಹೊರಗಡೆಯಿಂದ ಜನ ಬರುತ್ತಾರೆ. ನಮ್ಮ ಪ್ರೊಡಕ್ಷನ್‌ನಲ್ಲಿ ಅಂದರೆ ನಮ್ಮಲ್ಲಿ ಖರ್ಚಾಗುವುದು ಮೂರರಲ್ಲೊಂದು ಭಾಗ ಹೀಗಿರುವಾಗ ನಾವು ಅವರ ಮೇಲೆ ೪ ಪರ್ಸೆಂಟ್ ಟ್ಯಾಕ್ಸ್ ಹಾಕಿದರೆ ಯಾರು ಬಡ ನೇಯ್ಗೆಯವರು ಇದ್ದಾರೆ ಅವರಿಗೆ ತಡೆದುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ನೀವು ಎಕ್ಸ್‌ಪೋರ್ಟ್‌ಗೆ ಹಾಕಿ. ಇಲ್ಲಿಂದ ಬೇರೆ ರಾಜ್ಯಗಳಿಗೆ ಏನು ಹೋಗುತ್ತದೆ ಅವರ ಮೇಲೆ ತೆರಿಗೆ ಹಾಕಿ ನಮ್ಮದೇನೂ ಅಭ್ಯಂತರವಿಲ್ಲ. ನಮ್ಮ ರಾಜ್ಯದ ನೇಯ್ಗೆಯವರ ದೃಷ್ಟಿಯಿಂದ ಇದನ್ನು ಕನ್ಸಿಡರ್ ಮಾಡಬೇಕು. ೪ ಪರ್ಸೆಂಟ್ ತೆರಿಗೆ ಹಾಕಿದರೆ ಅತಿ ಆಗುತ್ತದೆ. ಏಕೆಂದರೆ ನಾನು ದೊಡ್ಡಬಳ್ಳಾಪುರದಿಂದ ಬರುತ್ತಾ ಇದ್ದೇನೆ. ದೊಡ್ಡಬಳ್ಳಾಪುರದಲ್ಲಿ ೭-೮ ಸಾವಿರ ಪವರ್‌ಲೂಮ್ಸ್ ಇದೆ, ದಿನವೂ ಅವರ ಕಷ್ಟಗಳು ನನಗೆ ಗೊತ್ತಿದೆ. ಅವರಿಗೆ ಸಾಲ ತೀರಿಸುವ ಶಕ್ತಿಯಿಲ್ಲ, ಸಾಲ ದಿವಸಾ ಏರುತ್ತಾ ಇದೆ. ಅದೇರೀತಿ ಬೆಂಗಳೂರಿನಲ್ಲೂ ಪರಿಸ್ಥಿತಿ ಇದೆ. ಇಲ್ಲೂ ಪರಿಸ್ಥಿತಿ ಗಂಭೀರವಾಗಿದೆ. ತಾವು ಯೋಚನೆ ಮಾಡಿ, ಇದರ ಬಗ್ಗೆ ಸ್ವಲ್ಪ ತೀರ್ಮಾನ ತೆಗೆದುಕೊಂಡು ತೆರಿಗೆಯನ್ನು ರೆಡ್ಯೂಸಾದರೂ ಮಾಡಿ. ಮೊದಲು ಇದ್ದಹಾಗೆ ಮಾಡಿದರೆ ಸಂತೋಷ. ಇಲ್ಲ ಆಗುವುದೇ ಇಲ್ಲ ಏನಾದರೂ ಹಾಕಬೇಕು ಅಂದರೆ ಪ್ಲೀಸ್ ರೆಡ್ಯೂಸ್ ಸಂತಿಂಗ್,

ಆಮೇಲೆ ಆಯಿಲ್ ಕೇಕ್. ಇದರ ಮೇಲೆ ಏಕೆ ಬಿತ್ತು ನಿಮ್ಮ ಕಣ್ಣು ? ಹಾಲು ಕರೆಯುವ ದನಗಳಿಗೆ ಇದು ಬಹಳ ಮುಖ್ಯವಾಗಿ ಬೇಕಾದ ಆಹಾರ ಅದರಲ್ಲೂ ಕಡಲೇಕಾಯಿ ಹಿಂಡಿ ಮುಖ್ಯವಾದುದು, ಇದರ ಮೇಲೆ ೫ ಪರ್ಸೆಂಟ್ ತೆರಿಗೆ ಹಾಕಿದರೆ ನಾಳೆ ಹಾಲಿನ ರೇಟು ಜಾಸ್ತಿಮಾಡಿ ಎಂದು ಡಿಮ್ಯಾಂಡ್ ಬರುತ್ತದೆ. ತಿರಗಿ ತಲೆನೋವು ಏಕೆ ತಾವು ತಂದುಕೊಳ್ಳುತ್ತೀರಿ. ಅದರ್‌ವೈಸ್ ತಲೆ ನೋವು ಬಂದರೂ ಬರಬಹುದು, ಆ ವಿಷಯ ಬೇರೆ. ಇದರಿಂದ ಏಕೆ ತಲೆನೋವು ಬರಬೇಕು. ದಯಮಾಡಿ ಇದಕ್ಕೆ ೩ ಪರ್ಸೆಂಟ್ ಹಾಕಿ, ೫ ಪರ್ಸೆಂಟ್ ಹಾಕುವುದಕ್ಕೆ ಹೋಗಬೇಡಿ. ಸಾಧ್ಯವಾದರೆ ಕ್ಯಾಟಲ್ ಫೀಡ್‌ಗೆ ಟ್ಯಾಕ್ಸ್ ಬೇಡ ಎಂದು ಮಾಡುವುದಾದರೆ ಐ ವಿಲ್ ಬಿ ವೆರಿ ಮಚ್ ಹ್ಯಾಪಿ. ಕಡೆಗೆ ಎಕ್ಸೈಜ್ toddy ಸೇಂದಿ ಬಾಬು ತೆಗೆದಿದ್ದೀರಿ, ಬಹಳ ಸಂತೋಷ. ನಾವು ೫ ವರ್ಷದಲ್ಲಿ ಹಂತಹಂತವಾಗಿ ಮಾಡಬೇಕೆಂದು ಅಂದುಕೊಂಡಿದ್ದೆವು, ಇವತ್ತು ಸೇಂದಿ ತೆಗೆದಿದ್ದರಿಂದ ಒಂದು ಲಕ್ಷ ಸಂಸಾರಗಳಿಗೆ ಕೆಲಸ ಇಲ್ಲದಂತಾಗಿದೆ. ಮೊನ್ನೆ ನಮ್ಮ ಗೌಡರು ಮಾತನಾಡುತ್ತಾ ನೀವು ೭ ಜಿಲ್ಲೆಯಲ್ಲಿ ಸೇಂದಿಯನ್ನು ರದ್ದು ಮಾಡಿದಾಗ ಅಲ್ಲಿದ್ದಂತ ಜನಗಳಿಗೆ ಕೆಲಸ ಎಲ್ಲಿ ಕೊಟ್ಟಿದ್ದೀರಿ ಎಂದು ಕೇಳಿದರು. ಪಕ್ಕದ ಜಿಲ್ಲೆಗಳಲ್ಲಿ ಹೋಗಿ ಕೆಲಸ ಮಾಡುತ್ತಿದ್ದರು. ಈಗ ತಾವು ಏನು ಸೇಂದಿ ರದ್ದು ಮಾಡಿದ್ದೀರಿ, ಅಲ್ಲಿ ಕೆಲಸ ಕಳೆದುಕೊಂಡಿರುವವರೆಲ್ಲಾ ಶೇಕಡ ೯೫ ಭಾಗ ಹಿಂದುಳಿದವರು, ಅವರ ಮೇಲೆ ಗಧಾ ಪ್ರಹಾರ ಮಾಡಬೇಡಿ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸೇಂದಿಗೆ ಬದಲು ನೀರಾ ಎಂದು ಮಾಡಿದರೆ, ತುಂಬಾ ಅನುಕೂಲವಾಗುತ್ತದೆ. ಅಲ್ಲಿ ಕಂಟ್ರಾಕ್ಟ್‌ದಾರರು ೬೫೦-೧೦೦೦ ಸಂಬಳ ಕೊಟ್ಟು ಕೆಲಸಕ್ಕೆ ಇಟ್ಟುಕೊಂಡಿರುತ್ತಾರೆ. ಮೂರ್ತೆದಾರರೇ ಮರಗಳನ್ನು ಕಟ್ಟಿ, ಕಂಟ್ರಾಕ್ಟ್‌ದಾರರುಗಳಿಗೆ ತಂದು ಸರಬರಾಜು ಮಾಡುತ್ತಾರೆ,

ಶ್ರೀ ಎಂ. ರಾಜಶೇಖರಮೂರ್ತಿ.—ತಾವು ೭ ಜಿಲ್ಲೆಗಳಲ್ಲಿ ಸೇಂದಿಯನ್ನು ರದ್ದು ಮಾಡಿದಾಗ, ಅಲ್ಲಿದ್ದ ಕೆಲಸಗಾರರಿಗೆ ಪರ್ಯಾಯ ವ್ಯವಸ್ಥೆ ಏನು ಮಾಡಿದ್ದೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ನಾನು ಆಗಲೇ ಹೇಳಿದೆ, ತಾವು ಕೇಳಿಕೊಳ್ಳಲಿಲ್ಲ, ಪಕ್ಕದ ಜಿಲ್ಲೆಗಳಿಗೆ ಹೋಗಿ ಕೆಲಸ ಮಾಡುತ್ತಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸೌತ್‌ಕೆನರಾದಲ್ಲಿ ಅಬಾಲಿಷ್ ಆಗಿತ್ತು. ಪಕ್ಕದ ಜಿಲ್ಲೆಯಲ್ಲಿ ಕೆಲಸ ಎಲ್ಲಿತ್ತು ?

ಶ್ರೀ ಆರ್. ಎಲ್. ಜಾಲಪ್ಪ.—ಸೌತ್ ಕೆನರಾದಲ್ಲಿ ಅಬಾಲಿಷ್ ಆಗಿರಲಿಲ್ಲ. ಈ ಒಂದು ಬಾಬಿನಲ್ಲಿ ಬಾಟಲ್ ತೊಳೆದುಕೊಂಡು ಒಂದೂವರೆ ಸಾವಿರ ರೂಪಾಯಿ ಸಂಪಾದನೆ ಮಾಡುವವರೂ ಇದ್ದಾರೆ, ೨೪-೨೮ ರೂಪಾಯಿ ವೆಂಡರ್ಸ್ ದಿನಕ್ಕೆ ತೆಗೆದುಕೊಂಡು ಜೀವನ ಮಾಡುತ್ತಿದ್ದರು. ಅಂಥವರಿಗೆ ಕಷ್ಟವಾಗಿದೆ. ಅಲ್ಲಿ ಮರಗಳು ಇವೆ, ನೀರಾ ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ಇದು ಉತ್ತಮ ಟಾನಿಕ್ ಇದ್ದ ಹಾಗೆ. ಇದರ ಜೊತೆಗೆ ಈಚಲ ಬೆಲ್ಲ ಮಾಡುವುದಕ್ಕೆ ತಾಟಿ ಬೆಲ್ಲ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಹೆಂಡ ತೆಗೆದಿದ್ದರಿಂ

ಇನ್ನು ಮೇಲೆ ಸಾರಾಯಿ ಬೆಲೆ ಕೂಡ ಜಾಸ್ತಿಯಾಗುತ್ತದೆ. ಈಗ ೯೦ ಎಂ. ಎಲ್‌ಗೆ ೮-೯ ರೂಪಾಯಿ ಇದ್ದದ್ದು, ಮುಂದೆ ೧೨ ರೂಪಾಯಿ ಆಗಬಹುದು. ಮೂರು ರೂಪಾಯಿ ಕೊಟ್ಟು ಒಂದು ಬಾಟಲ್ ಹೆಂಡ ಕುಡಿಯುತ್ತಿದ್ದವನು. ೧೨ ರೂಪಾಯಿ ಕೊಟ್ಟು ೯೦ ಎಂ ಎಲ್ ೧೧೧ ಎಂಎಲ್ ಕುಡಿಯುವುದಕ್ಕೆ ಸಾಧ್ಯವಿಲ್ಲ. ಕುಡಿಯುತಕ್ಕವರು ಕಡೆಗೆ ಸಾರಾಯಿಗೆ ಹೋಗಬೇಕು. ಕಳ್ಳಬಟ್ಟಿ ಸಾರಾಯಿ ದುರಂತದಿಂದ ಬೆಂಗಳೂರಿನಲ್ಲಿ ೩೦೦ ಜನ ಸತ್ತಿದ್ದು ಗೊತ್ತಿದೆ, ಇದನ್ನು ತಪ್ಪಿಸುವುದಕ್ಕೆ ನಾನು ಒಂದು ಸಲಹೆ ಕೊಡುವುದೇನೆಂದರೆ, ಸರ್ಕಾರದವರು ಚೀಪ್ ಬೀರ್ ಸಪ್ಲೈ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ಯೋಚನೆ ಮಾಡಬೇಕು. ಇದರಿಂದ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ. ಮತ್ತು ಆರೋಗ್ಯಕರವೂ ಆಗಿರುತ್ತದೆ.

ಶ್ರೀ ಎ. ರಾಜಶೇಖರಮೂರ್ತಿ,—ಬೀರ್ ಕಿಕ್ ಕೊಡುವುದಿಲ್ಲವಲ್ಲ.

ಶ್ರೀ ಆರ್. ಎಲ್. ಜಾಲಪ್ಪ.--ಕಿಕ್ ಬೇಕಾದವರು ಸಾರಾಯಿಗೆ ಹೋಗಬೇಕು. ಬಿಯರ್ ತಯಾರಿಕೆ ಹೋಂ ಇಂಡಿಸ್ಟ್ರೀಸ್ ಆಗಬೇಕು. ದೇವರಾಜ ಅರಸುರವರ ಕಾಲದಲ್ಲಿ ಪ್ರಾಹಿಬಿಷನ್ ತಂದಾಗ ಏನಾಯಿತು ಎನ್ನುವುದು ಗೊತ್ತಿದೆ. ಚೀಪ್ ಬಿಯರ್ ಸಪ್ಲೈ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ಸರ್ಕಾರದವರು ನೋಡಬೇಕು,

ಈ ಕೈಗಾರಿಕೆ ತಲೆ ಬುಡ ಇಲ್ಲದಿರತಕ್ಕ ಕೈಗಾರಿಕೆ. ಇದಕ್ಕೆ ಬಹಳ ರಿಸ್ಟ್ರಿಕ್ಷನ್ ಹಾಕುವುದಕ್ಕೆ ಹೋಗಬೇಡಿ. ಹಾಕಿದ್ದರೆ ಇದು ಬೇರೆ ರಾಜ್ಯಗಳಿಗೆ ಹೋಗುತ್ತದೆ. ಸಕ್ಕರೆ ಬೆಲೆ ಜಾಸ್ತಿಯಾಗಿರುವುದರಿಂದ ಇವತ್ತು ಷುಗರ್ ಫ್ಯಾಕ್ಟರಿಗಳು ಎಲ್ಲಾ ಚೆನ್ನಾಗಿ ಕೆಲಸ ಮಾಡುತ್ತಿದೆ. ಇವತ್ತು ಮೊಲ್ಯಾಸಿಸ್ ಜಾಸ್ತಿಯಾಗುತ್ತಿದೆ. ರೆಕ್ಟಿಫೈಡ್ ಸ್ಪಿರಿಟ್ ಜಾಸ್ತಿಯಾಗುತ್ತಿದೆ. ಇದನ್ನು ನಾವು ಉಪಯೋಗಿಸಿಕೊಳ್ಳದಿದ್ದರೆ ನಮ್ಮ ರಾಜ್ಯಕ್ಕೆ ಲಂಕ್ಸಾನ್ ಜಾಸ್ತಿಯಾಗುತ್ತದೆ, ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸ್ವಾಮಿ, ಕಡೆಯದಾಗಿ ಈ ಸಾಲಗಳು; ನಿನ್ನೆ ಮಾನ್ಯ ಸಿಂಧ್ಯರವರು ಸಹ ಈ ಬಗ್ಗೆ ಹೇಳಿದರು. The Minister has understood the point and it is for me to take any measures. ನಮ್ಮದೇನು, ಸಲಹೆ ಕೊಡುವುದು ಅಷ್ಟೆ. We have our say. You have your way. You have got every right to reconsider also. It is left to you. We have given our thought to you. ತಾವು ಯೋಚನೆ ಮಾಡಿ, ಯಾವುದಾದರೂ ಸರ್ಕಾರದವರು to encourage the local industry ಎಕ್ಸ್‌ಪೋರ್ಟಿಗೆ ಡ್ಯೂಟಿಯನ್ನು ಕಡಿಮೆ ಮಾಡುತ್ತಾರೆ. ಇಂಪೋರ್ಟಿಗೆ ಸ್ವಲ್ಪ ಜಾಸ್ತಿ ಮಾಡುತ್ತಾರೆ. ನಾವು ಇಲ್ಲಿ ಏನು ಮಾಡಿದ್ದೇವೆಂದರೆ ತಾವು ತಿರುಗ ಮುರಂಗ ಮಾಡಿದ್ದೀರಿ. ತಾವು ಸ್ವಲ್ಪ ಅದನ್ನು ರೀಕನ್ಸಿಡರ್ ಮಾಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಕ್ಸ್‌ಪೋರ್ಟಿಗೆ ಸ್ವಲ್ಪ ಜಾಸ್ತಿ incentive ಕೊಡಬೇಕಾಗುತ್ತದೆ. ಯಾವತ್ತೂ ಅಷ್ಟೆ. They cannot thrive at our cost. So we have to encaourage exports our Industry and our people should not suffer. ಅದನ್ನು ಸ್ವಲ್ಪ ತಾವು ಜ್ಞಾಪಕ ಇಟ್ಟುಕೊಳ್ಳಿ. ಇನ್ನು ಸಾಲಗಳು, ಈ ಸಾಲ ವಜಾ ಮಾಡುವ ಬಗ್ಗೆ ಬಹಳಷ್ಟು ಇವತ್ತು ಕನ್‌ಫ್ಯೂಜನ್ ಇದೆ ಎಂದು ಹೇಳಿದರೆ ತಪ್ಪಾಗಲಾರದು. ತಾವು ಇದು ಕೇಂದ್ರ ಸರ್ಕಾರದವರ ಕರ್ತವ್ಯ, ಅವರು ಮಾಡಲೆಂದು ಹೇಳುತ್ತೀರಿ, ಕೇಂದ್ರ ಸರ್ಕಾರದವರು ಇದು ರಾಜ್ಯ ಸರ್ಕಾರದ ಜವಾಬ್ದಾರಿ ಅವರು ಮಾಡಲೆಂದು ಹೇಳುತ್ತಾರೆ. ಈ ರೀತಿ ಗಂಡ ಹೆಂಡಿರ ಜಗಳದ ಮಧ್ಯೆ ಕೂಸು ಬಡವಾಗುವುದು ಬೇಡ. ಇದರಲ್ಲಿ ಎಲ್ಲಾ ಹಣವೂ ನಬಾರ್ಡ್‌ನಿಂದ ನಮಗೆ ಬರುತ್ತಿಲ್ಲ. ಜಿಲ್ಲಾ ಬ್ಯಾಂಕ್‌ಗಳು ಮತ್ತು ಅಪೆಕ್ಸ್ ಬ್ಯಾಂಕಿನ ಡಿಫಾಸಿಟ್ ೬೦೦ ಕೋಟಿ ರೂಪಾಯಿ ಇದೆ. ಈ ಸಾರಿ ರೈತರಿಗೆ ಜಿಲ್ಲಾ ಬ್ಯಾಂಕಿನವರು ಸಾಲ ಕ್ರಾಪ್‌ಲೋನ್ ಕೊಟ್ಟಿರುವುದು ಸುಮಾರು ೩೦೨ ಕೋಟಿ ರೂಪಾಯಿಗಳು ಆದರಲ್ಲಿ ಅವರು ಸುಮಾರು ೧೬೮ ಕೋಟಿ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ. ಮಿಕ್ಕಿರುವುದು ಅವರ ಫಂಡ್ಸ್ ಅಪೆಕ್ಸ್ ಬ್ಯಾಂಕ್ ಫಂಡ್ಸ್‌ನಲ್ಲಿ ನಡೆಸಿದ್ದಾರೆ. ಒಂದು ಸಮಯ ನಬಾರ್ಡ್‌ನವರು ನಿಮಗೆ ಹಣ ಕೊಡುವುದಿಲ್ಲ ನೋಡೋಣ ಎಂದರೆ We can take it a challenge. ಅಂಥಾದ್ದೇನೂ ಮಹಾ ಕಷ್ಟವಾಗುವುದಿಲ್ಲ. ನನ್ನ ಒಂದು ಅಲ್ಪಸ್ವಲ್ಪದ ಅನುಭವದ ಮೇಲೆ ಮ್ಮ ಗಮನಕ್ಕೆ ತರುವುದೇನೆಂದರೆ you take bold decision. Writing off the loan, you consider afterwards. ಈ ಗೌರ್ನಮೆಂಟ್ ಆಫ್ ಇಂಡಿಯಾದಲ್ಲಿ ಚರ್ಚೆಗೆ ಕರೆಯುತ್ತಾರಂತೆ. ಏನೋ ಮಾಡಿ ಆಟಲೀಸ್ಟ್ ಶೇಕಡ ೭ ರಷ್ಟು ನಾವು ಈ ಸಾಲಕ್ಕೆ ಚಾರ್ಜ್ ಮಾಡುತ್ತೇವೆ. ಈಗ ಒಂದು-ಒಂದೂವರೆ ತಿಂಗಳು ಟೈಂ ಕೊಡಿ. ಈ ಪಿರೀಡ್‌ನಲ್ಲಿ ನೀವು ಹಣ ಕಟ್ಟಿಸಿದರೆ. We will be charging only

7% ಎಂದು ಅವರಿಗೆ ಹೇಳಿ, ಇಲ್ಲದೆ ಇದ್ದರೆ. every thing will be choked. ಇವತ್ತು ತಾವು ಸರ್ಕಾರದವರು ನೇರವಾಗಿ ಏನು ರೈತರಿಗೆ ಸಹಾಯ ಮಾಡಲಿಕ್ಕೆ ತಮಗೆ ಶಕ್ತಿ ಇದೆ, ಹೇಳಿ, ಇವತ್ತು ಒಂದು ೧೦೦ ಬೋರ್‌ವೆಲ್‌ಗಳಿಗೆ ಸಾಲ ಕೊಡುವುದಕ್ಕೆ ಶಕ್ತಿ ಇದೆಯೋ ನಿಮಗೆ ೫೦೦ ಬೋರ್‌ವೆಲ್‌ಗಳನ್ನು ಕೊಡುವುದಕ್ಕೆ ಶಕ್ತಿ ಇದೆಯೋ, ಸಾಧ್ಯವಿಲ್ಲ. ಅದನ್ನು ನಿಮ್ಮ ಸರ್ಕಾರವೂ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಸರ್ಕಾರವೂ ಮಾಡುವುದಕ್ಕೆ ಆಗುವುದಿಲ್ಲ. ಯಾವ ಸರ್ಕಾರವೂ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ ಬೇರೆ ಕಡೆ ಸಾಲ ಸಿಗುವ ವ್ಯವಸ್ಥೆ ನಾವು ಮಾಡದಿದ್ದರೆ ಹೇಗೆ? ಈಗ ಏಪ್ರಿಲ್ ಫಸ್ಟ್‌ಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ನಬಾರ್ಡಿಗೆ ೩೫–೪೦ ಕೋಟಿ ರೂಪಾಯಿಗೆ ಡಿಫಾಲ್ಟರ್ ಆಗುತ್ತಾರೆ. ಇದರಿಂದ ಒಂದು ಕಾಸೂ ಸಿಗುವುದಿಲ್ಲ. ಹಾಗಾದರೆ ವ್ಯವಸಾಯಗಾರರ ಗತಿ ಏನು? ಬೋರ್‌ವೆಲ್ ಮಾಡುವುದಕ್ಕೆ ಏನೇನೂ ಹಣ ಸಿಗುವುದಿಲ್ಲ. ಅದಕ್ಕಾಗಿ ತಾವು ಬೇರೆ ವ್ಯವಸ್ಥೆ ಮಾಡಬೇಕಾಗುತ್ತದೆ. ಕಡೆಯ ಪಕ್ಷ ಶೇಕಡ ೩೦–೪೦ ರಷ್ಟನ್ನು ಕೊಟ್ಟರೆ ಹಣ ಬರುತ್ತದೆ. ಶೇಕಡಾ ೧೦–೧೫ ರಷ್ಟು ಹಣ ವಸೂಲು ಆಗಿ, ತಾವು ೧೫ ಕೋಟಿ ಕೊಟ್ಟರೆ ಅಲ್ಲಿ ಸ್ವಲ್ಪ ಹಣ ಸಿಗುತ್ತದೆ. ಆಮೇಲೆ ನಾವು ಬೇಕಾದರೆ ಅವರ ಹತ್ತಿರ ಜಗಳ ಮಾಡೋಣ. ನಾನು ಮಂತ್ರಿಯಾಗಿದ್ದಾಗ. I went there and sat in their Office from morning to evening and convinced them I explained the whole position to them. ಯಾರಾದರೂ ಅವರ ಹತ್ತಿರ ಹೋಗಿ ಕುಳಿತುಕೊಂಡು ಮಾತಾಡಿ ಹಣ ವಸೂಲಾಗುತ್ತಿಲ್ಲ ಎಂದು ಹೇಳಿ ಅವರಿಗೆ ಕನ್ವಿನ್ಸ್ ಮಾಡಬೇಕಾಗುತ್ತದೆ. ಅದು ಬಿಟ್ಟು ಎಲ್ಲವನ್ನೂ ಹರಾಜು ಹಾಕಿ ತೆಗೆದು ಕೊಳ್ಳುತ್ತೇವೆಂದರೆ ಅದು ಸಾಧ್ಯವಾಗದ ಮಾತು. ಅದು ಕೋ–ಆಪರೇಟಿವ್ ಮೂವ್‌ಮೆಂಟ್ ಅಲ್ಲವೇ ಅಲ್ಲ. ಎಲ್ಲವನ್ನು ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲೋ ಶೇಕಡ ೫–೧೦ ಹರಾಜು ಹಾಕಿಸಬಹುದು. ಟಾಂಟಾಂ ಮಾಡಿಸಬಹುದು; ಆದರೆ ಎಲ್ಲರಿಗೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಏನಾದರೂ ಮಾಡಿ ಹಣ ವಸೂಲಾಗುವ ಹಾಗೆ ಮಾಡಬೇಕಾಗುತ್ತದೆ. ಸ್ವಲ್ಪ ಒಳ್ಳೆಯ ರೀತಿಯಲ್ಲಿ ಮಾತನಾಡಿ ಸ್ವಲ್ಪ ಕನ್‌ಸೇಷನ್ ಕೊಟ್ಟು ಹಣ ವಸೂಲಿ ಮಾಡಬೇಕಾಗುತ್ತದೆ. ಆಮೇಲೆ ಮುಂದೆ ಯೋಚನೆ ಮಾಡೋಣ.

ಇದನ್ನು ಧೈರ್ಯವಾಗಿ ಮಾಡಿ. ತಮಗೆ ಏನೂ ಆಗುವುದಿಲ್ಲ. ಇದು ನನ್ನ ಅನುಭವ ಮಿಕ್ಕಿದ್ದು ತಮಗೆ ಬಿಟ್ಟಿದ್ದು. ತಾವು ಸುಮ್ಮನೆ ಇದ್ದರೆ ಕಾಲ ಹೊರಟು ಹೋಗುತ್ತದೆ. ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಆಗುವುದಿಲ್ಲ. ಕಡೆಗೆ ನಾವೇ ಟಾಂ ಟಾಂ ಹಾಕುವುದಕ್ಕೆ ಅವಕಾಶ ಕೊಡಬೇಡಿ, ಧೈರ್ಯ ಮಾಡಿ ತಾವು ಕೆಲಸ ಮಾಡಿ. ಮುಂದೆ ತೊಂದರೆ ಬಂದಾಗ ನಾವು ಸಹ ನಿಮ್ಮ ಜೊತೆ ಬರುತ್ತೇವೆ ಹೋಗೋಣ. ಮಾನ್ಯ ಮುಖ್ಯ ಮಂತ್ರಿಗಳು ಸಾಲ ಮನ್ನಾ ಬಗ್ಗೆ ಡೆಲಿಗೇಷನ್ ಹೋಗೋಣ ಎಂದು ಹೇಳಿದ್ದರು. ಈಗ ಕೇಂದ್ರ ಸರ್ಕಾರದವರು ಸಾಲ ವಜಾ ಮಾಡುತ್ತೇವೆ ಎಂದು ಹೇಳಿರುವಾಗ ಡೆಲಿಗೇಷನ್ ಹೋಗುವ ಅವಶ್ಯಕತೆ ಬರುವುದಿಲ್ಲ. ನಬಾರ್ಡ್‌ಗೆ ಹೋಗುವುದಾದರೆ ನಾವು ಬರುತ್ತೇವೆ. ರಾಜ್ಯದ ರೈತನ ಹಿತಾಸಕ್ತಿ ಬಗ್ಗೆ ಗಮನಕೊಟ್ಟು ನೋಡಬೇಕು. ಈ ರೀತಿ ಇರುವುದರಿಂದ ನಾವು ಸಹ ನಿಮ್ಮ ಜೊತೆಗೆ ಬರುವುದಕ್ಕೆ ತಯಾರು ಆಗಿದ್ದೇವೆ. ಧೈರ್ಯವಾಗಿ ಮಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—೪೫ ಕೋಟಿ ರೂಪಾಯಿ ಆಗ ರಿಇಂಬರ್ಸ್ ಮಾಡಿದ್ದರೆ ಈ ಪ್ರಶ್ನೆ ಬರುತ್ತಾ ಇರಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಹೆಗಡೆ ಅವರ ಮನೆಯಿಂದ ತಂದು ಕೊಡಲಿಕ್ಕೆ ಆಗುತ್ತದೆಯೇ. ಹಿಂದೆ ೪ ವರ್ಷಗಳ ಕಾಲ ಕ್ಷಾಮ ಬಂದಿತ್ತು, ನೂರಾರು ಕೋಟಿ ರೂಪಾಯಿಗಳನ್ನು ಅದಕ್ಕೋಸ್ಕರ ಖರ್ಚು ಮಾಡಿದ್ದೇವೆ. ನೀವೂ ಮಾಡಿ ಸ್ವಾಮಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದಕ್ಕೆ ನಾವು ಯಾವುದನ್ನೂ ಹೇಳುತ್ತಿಲ್ಲ. ಯಾವುದು ಆಗುತ್ತದೆ ಅದನ್ನು ಮಾತ್ರ ಹೇಳುತ್ತೇವೆ ಯಾವ ಕೆಲಸ ಆಗುವುದಿಲ್ಲ ಅದನ್ನು ಆಗುವುದಿಲ್ಲ ಎಂದು ಹೇಳುತ್ತೇವೆ. ಆದರೆ ನೀವು ಎ ಟು ಜೆಡ್ ಎಂದು ಹೇಳಿದಿರಿ.

ಶ್ರೀ ಆರ್. ಎಲ್. ಜಾಲಪ್ಪ.—ಅಸಲು ಮಾಫಿ ಮಾಡಿಲ್ಲ. ಬಡ್ಡಿ ಮಾತ್ರ ಮಾಫಿ ಮಾಡಿದ್ದೇವೆ. ಒಂದು ವರ್ಷ ಮಾತ್ರ ಬಡ್ಡಿ ವಜಾ ಮಾಡಿದ್ದೇವೆ. ಅಸಲು ವಿಚಾರದಲ್ಲಿ ಟಚ್ ಮಾಡಲಿಕ್ಕೆ ಹೋಗಿಲ್ಲ. ನನಗೂ ಕೂಡ ೨೫ ವರ್ಷದ ಅನುಭವ ಆಗಿದೆ. ಯಾರು ಸರಿಯಾಗಿ ಹಣ ಕಟ್ಟುತ್ತಾರೆ ಅವರಿಗೆ ೭ ಪರ್‌ಸೆಂಟ್ ಬಡ್ಡಿ ಹಾಕಿದ್ದೆವು. ಇಷ್ಟು ವಿಚಾರಗಳನ್ನು ಹೇಳಿ ಈ ಆಯವ್ಯಯವನ್ನು ನಾನು ಒಪ್ಪದೆ ವಿರೋಧ ಮಾಡುತ್ತಿದ್ದೇನೆ. ಈಗ ತಾವು ತಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ಅದು ರೈತರಿಗೆ, ಕಾಮನ್ ಮ್ಯಾನ್‌ಗೆ ತಲುಪಿಲ್ಲ. ಪುಸ್ತಕದಲ್ಲಿಯೇ ಇದೆ. ಇದನ್ನು ಅವರಿಗೆ ತಲುಪಿಸಿದರೆ ಬರುವ

ವರ್ಷ ತಮ್ಮನ್ನು ಅಭಿನಂದಿಸುತ್ತೇನೆ ಎಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ).—ಸನ್ಮಾನ್ಯ ಅಧ್ಯಕ್ಷಣಿಯವರೇ ಸಮಗ್ರ ಗ್ರಾಮೀಣ ಅಭಿವೃದ್ಧಿ, ವಿದ್ಯುತ್ ಉತ್ಪಾದನೆ ಹಾಗೂ ನೀರಾವರಿ ವಿಸ್ತರಣೆಯ ಯೋಜನೆಗಳಿಗೆ ಆದ್ಯತೆಯನ್ನು ಕೊಟ್ಟು ಆಯವ್ಯಯವನ್ನು ಆರ್ಥಿಕ ಮಂತ್ರಿಗಳು ಮಂಡಿಸಿದ್ದೀರಿ. ಇದನ್ನು ನಾನು ಸ್ವಾಗತಿಸುತ್ತೇನೆ. ಈ ಒಂದು ಆಯವ್ಯಯದಲ್ಲಿ ಹೆಂಡ ಮಾರಾಟದ ನಿಷೇಧ ಹಾಗೂ ಗ್ರಾಮೀಣ ಜನತೆಗೆ ಅಗತ್ಯವಿದ್ದ ನಿರ್ಮಲ ಗ್ರಾಮ ಯೋಜನೆ, ಕನ್ನಡ ವಿಶ್ವವಿದ್ಯಾನಿಲಯ ಇಂತಹ ಒಂದು ಮಹತ್ತಾದ ಕಾರ್ಯಕ್ರಮ ರೂಪಿಸಿಕೊಂಡಂತಹ ಮಾನ್ಯ ಹಣಕಾಸು ಸಚಿವರನ್ನು ಅಭಿನಂದಿಸಿ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಕಾವೇರಿ ಕಣಿವೆ ಯೋಜನೆ ಹಾಗೆಯೇ ವಿದ್ಯುತ್‌ಗೆ ಭಾರತ ಸರ್ಕಾರದ ಸಹಾಯದೊಡನೆ ವಿದೇಶಗಳಿಂದ ಸಂಪನ್ಮೂಲವನ್ನು ಕ್ರೋಢೀಕರಿಸುವ ಪ್ರಯತ್ನ ನಡೆದಿರುವುದು ಸಂತೋಷಕರವಾದ ವಿಷಯ. ಕಾವೇರಿ ಕಣಿವೆ ಯೋಜನೆಯಲ್ಲಿ ಅನೇಕ ನೀರಾವರಿ ಯೋಜನೆಗಳು ಬಹಳ ವರ್ಷದಿಂದ ಇನ್ನು ಕೂಡ ನಿರ್ಮಾಣ ಹಂತದಲ್ಲಿಯೇ ಇದೆ. ಈ ಯೋಜನೆಯನ್ನು ತ್ವರಿತ ಗತಿಯಲ್ಲಿ ಮುಗಿಸಲಿಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಬಹು ಮುಖ್ಯವಾದ ವಿಚಾರ ಎಂದರೆ ಕೃಷ್ಣರಾಜ ಸಾಗರದ ವಿಶ್ವೇಶ್ವರಯ್ಯ ನಾಲೆ ಆಧುನೀಕರಣ, ಕಳೆದ ಹತ್ತು ವರ್ಷಗಳಿಂದ ಈ ಕಾರ್ಯವನ್ನು ಕೈಗೊಂಡಿದ್ದರೂ ಇನ್ನೂ ಸಂಪೂರ್ಣ ಆಗಿಲ್ಲ. ಈ ಯೋಜನೆಯ ಮುಖ್ಯ ಉದ್ದೇಶ ಆದರೂ ನಾಲೆಯ ಪ್ರದೇಶದ ಕೊನೆಯ ರೈತನಿಗೆ ನೀರಿನ ಬವಣೆ ತೀರಿಸುವುದಕ್ಕೋಸ್ಕರ ಈ ಒಂದು ಯೋಜನೆಯನ್ನು ಕೈಗೊಳ್ಳಲಾಯಿತು. ಈ ಯೋಜನೆಗೆ ಪ್ರಸಕ್ತ ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ಒದಗಿಸಿರುವುದಿಲ್ಲ. ಇದೇ ರೀತಿ ಮುಂದುವರೆಸಿದರೆ ಇನ್ನು ೧೦–೧೫ ವರ್ಷವಾಗುತ್ತದೆ. ರೈತರು ಕೂಡ ಬಹಳ ಆಶಾ ಮನೋಭಾವನೆಯಿಂದ ಆಧುನೀಕರಣ ಯೋಜನೆಯನ್ನು ಎದುರು ನೋಡುತ್ತಿದ್ದಾರೆ. ದಯಮಾಡಿ ಈ ವಿಶ್ವೇಶ್ವರಯ್ಯ ನಾಲೆಯನ್ನು ಆಧುನೀಕರಣ ಮಾಡಬೇಕು, ಈ ಯೋಜನೆಗೆ ಹೆಚ್ಚಿನ ಹಣವನ್ನು ಒದಗಿಸಬೇಕು. ಇನ್ನು ಕಬ್ಬಿನ ಮೇಲಿನ ಉದ್ದೇಶಿತ ತೆರಿಗೆ ಏನು ಇದೆ ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಈಗಾಗಲೇ ಸಹಕಾರಿ ಸಕ್ಕರೆ ಕಾರ್ಖಾನೆಗಳು ಆಡಳಿತ ವ್ಯವಸ್ಥೆಯವರ ಒನೇ ವೇಜ್ ಬೋರ್ಡ್‌ನ ಅಡಿಯಲ್ಲಿ ಕೆಲವು ನಿಯಮಗಳನ್ನು ಜಾರಿಗೆ ತಂದದ್ದರಿಂದ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ರೈತರು ಬೆಳೆದಂತಹ ಕಬ್ಬಿಗೆ ಸರಿಯಾದಂತಹ ಬೆಲೆಯನ್ನು ಕೇಳಿದರೆ ಕಾರ್ಖಾನೆಯವರು ಆಡಳಿತ ಮಂಡಲಿಯ ಆರ್ಥಿಕ ಪರಿಸ್ಥಿತಿಯನ್ನು ಮುಂದಿಡುತ್ತಾರೆ, ಈ ತೆರಿಗೆಯಿಂದ ರೈತರಿಗೆ ಸರಿಯಾದಂತಹ ಬೆಲೆ ಸಿಗುವುದಿಲ್ಲ, ಹಿಂದೆ ಒಂದು ಟನ್ ಕಬ್ಬಿಗೆ ಎಷ್ಟು ಬೆಲೆ ಇತ್ತು ಅದಕ್ಕೆ ಎಷ್ಟು ಮಾರಾಟ ತೆರಿಗೆ ಇತ್ತು ಎಂಬುದನ್ನು ವಿಚಾರ ಮಾಡಬೇಕು, ಆಗ ರೈತರಿಗೆ ಇನ್‌ಸೆಂಟೀವ್ ಅನ್ನು ಕೂಡ ಕೊಡುತ್ತಿದ್ದರು. ಈ ಉದ್ದೇಶಿತ ತೆರಿಗೆಯ ಬಗ್ಗೆ ಸರಕಾರ ಪುನರ್ ಆಲೋಚನೆ ಮಾಡಬೇಕು. ಎಂದು ರೈತರ ಪರವಾಗಿ ಮನವಿ ಮಾಡುತ್ತೇನೆ. ಇದರ ಜೊತೆಗೆ ರೈತರು ಬೆಳೆದಂತಹ ಬೆಳೆಗೆ ಯೋಗ್ಯ ಬೆಲೆಯನ್ನು ಕೊಡಬೇಕು. ರೈತರು ಬೆಳೆದಂತಹ ಬೆಳೆಗೆ ಯೋಗ್ಯ ಬೆಲೆಯನ್ನು ಕೊಡತಕ್ಕಂತಹ ಕಾರ್ಯಕ್ರಮವನ್ನು ಸರಕಾರ ತನ್ನ ನೀತಿ ನಿರೂಪಣೆಯಲ್ಲಿ ಅಳವಡಿಸಿಕೊಳ್ಳಬೇಕು ಎಲ್ ಐ ಸಿ. ಹುಡ್ಕೋ ಯೋಜನೆಯ ಸಹಾಯದಿಂದ ಅನೇಕ ನಗರಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಕೈಗೊಂಡಿದ್ದಾರೆ ಇದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇನ್ನು ಕಾವೇರಿ ೨ನೇ ಹಂತದ ಯೋಜನೆ ಅನುಷ್ಠಾನಕ್ಕೆ ಬರಬೇಕಾಗಿದೆ. ನಮ್ಮ ಮಂಡ್ಯ ನಗರಕ್ಕೆ ಅನುಕೂಲವಾಗುವಂತೆ ಕಾವೇರಿ ೨ನೇ ಹಂತದ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಸರಕಾರ ಕೈಗೊಳ್ಳಬೇಕು. ಪರಿಶಿಷ್ಟ ಜಾತಿ, ಹಿಂದುಳಿದವರ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡುವಂತಹ ಹಣವನ್ನು ಹೆಚ್ಚು ಮಾಡಿದ್ದಾರೆ. ಅದೇ ರೀತಿ ಅನೇಕ ವಿದ್ಯಾರ್ಥಿ ನಿಲಯಗಳಿಗೆ ಸರಿಯಾದಂತಹ ಕಟ್ಟಡ ಇರುವುದಿಲ್ಲ ಇವುಗಳಿಗೆ ಹಂತಹಂತವಾಗಿ ಕಟ್ಟಡಗಳನ್ನು ಕಟ್ಟಿಸಿ ಕೊಡುವ ವ್ಯವಸ್ಥೆ ಮಾಡಬೇಕು. ಇನ್ನು ರೈತರು ಉಪಯೋಗಿಸತಕ್ಕಂತಹ ಟ್ರಾಕ್ಟರು ಟ್ರೈಲರ್ಸ್‌ಗಳಿಗೆ ವಿಧಿಸಿರತಕ್ಕಂತಹ ತೆರಿಗೆಯನ್ನು ಪುನರ್ ಆಲೋಚನೆ ಮಾಡಿ ಪುನರ್ ವಿಮರ್ಶಿಸಬೇಕು.

ಇನ್ನು ವೃತ್ತಿ ತೆರಿಗೆಯನ್ನು ಕೂಡ ಪುನರ್ ವಿಮರ್ಶೆ ಮಾಡಬೇಕಾಗಿದೆ ಎಂದು ತಿಳಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ಅಧ್ಯಕ್ಷಣಿಯವರೇ, ನಾನು ನಮ್ಮ ಕರ್ನಾಟಕ ರಾಜ್ಯದ ಅರ್ಥ ಸಚಿವರು ಈ ಸದನದ ಮುಂದೆ ೧೯೮೦–೮೧ನೇ ಸಾಲಿನ ಆಯವ್ಯಯವನ್ನು ಏನು ಮಂಡಿಸಿದ್ದಾರೆ ಅದನ್ನು ಸ್ವಾಗತಿಸುತ್ತಾ ನನ್ನ ಹಲವಾರು ಅನಿಸಿಕೆಗಳನ್ನು ಈ ಸಭೆಯ ಮುಂದೆ

ಮಂಡಿಸುತ್ತಿದ್ದೇನೆ. ಕರ್ನಾಟಕ ರಾಜ್ಯದ ಜನತೆಯ ಅಭಿವೃದ್ಧಿಗೆ ಮತ್ತು ಈ ಜನತೆಯ ಯೋಗ ಕ್ಷೇಮದ ದೃಷ್ಟಿಯಿಂದ ಹಲವಾರು ವಿಚಾರಗಳನ್ನು ಸಭೆಯ ಮುಂದಿಡುತ್ತಿದ್ದೇನೆ. ಈ ಆಯವ್ಯಯ ಏನು ಇದೆ ಇದನ್ನು ಅನೇಕ ಬುದ್ಧಿ ಜೀವಿಗಳೂ ಸಹ ಸ್ವಾಗತಿಸಿದ್ದಾರೆ. ವೈಯುಕ್ತಿಕವಾಗಿ ನಾನೂ ಕೂಡ ಸ್ವಾಗತ ಮಾಡುತ್ತೇನೆ.

೩-೦೦ ಪಿ. ಎಂ.

ಇವತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಎಡಿಟೋರಿಯಲ್‌ನಲ್ಲಿ, ಪ್ರಜಾವಾಣಿ ಪತ್ರಿಕೆಯ ಎಡಿಟೋರಿಯಲ್‌ನಲ್ಲಿ ಹಾಗೂ ಇನ್ನು ಬಹುತೇಕ ಪತ್ರಿಕೆಗಳಲ್ಲಿ ಕೂಡ ಈ ಆಯವ್ಯಯವನ್ನು ಸ್ವಾಗತಿಸಿ ಇದು ಸಮತೋಲನ ಆಯವ್ಯಯ ಪತ್ರ ಎಂದು ಹೇಳಿವೆ. ಹಿಂದೆ ಏನು ಆರ್ಥಿಕ ದಿವಾಳಿತನ ಈ ರಾಜ್ಯದಲ್ಲಿತ್ತು ಅದು ಈಗ ಪರಿಹೋಗುತ್ತದೆಂದು ತಮ್ಮ ಅನಿಸಿಕೆಯನ್ನು ಅವು ವ್ಯಕ್ತಪಡಿಸಿವೆ. ಆ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ನಾನಾ ರೀತಿಯ ಕಾರಣಗಳು ತಮ್ಮ ಮುಂದಿವೆ. ಹಿಂದೆ ಮಾನ್ಯ ರಾಮಕೃಷ್ಣಹೆಗಡೆಯವರು ಆಯವ್ಯಯ ಪತ್ರವನ್ನು ಮಂಡಿಸಿದಾಗ ನಿರೀಕ್ಷಿಸಿದ್ದ ರಾಜಸ್ವ ೩೪೨೯.೨೪ ಕೋಟಿ ರೂಪಾಯಿಗಳು ಆಗಿದ್ದರೆ ಕೊರತೆ ೨೬೭.೮೩ ಕೋಟಿ ರೂಪಾಯಿ ಆಗಿತ್ತು. ಅದೇ ರೀತಿ ೮೯-೯೦ರಲ್ಲಿ ಮಾನ್ಯ ಬೊಮ್ಮಾಯಿಯವರು ೩೯೨೧.೭೮ ಕೋಟಿ ರೂಪಾಯಿ ರಾಜಸ್ವ ಜಮಾವಣೆಯಲ್ಲಿ ೩೨೯.೭೯ ಕೋಟಿ ರೂಪಾಯಿಗಳ ಕೊರತೆಯನ್ನು ತೋರಿಸಿದ್ದರು. ಈಗ ನಮ್ಮ ಆರ್ಥಿಕ ಸಚಿವರು ಏನು ರಾಜಸ್ವವನ್ನು ನಿರೀಕ್ಷಣೆ ಮಾಡಿದ್ದಾರೆ ಅದು ೩೫೫೫.೯೨ ಕೋಟಿ ರೂಪಾಯಿಗಳು ಆದರೆ ಇದರಲ್ಲಿ ಕೊರತೆಯನ್ನು ತೋರಿಸಿರತಕ್ಕದ್ದು ಕೇವಲ ೫೬.೮೩ ಕೋಟಿ ರೂಪಾಯಿ ಮಾತ್ರ, ಈ ಸಂಖ್ಯೆಯನ್ನು ಗಮನಿಸಿದರೆ ಕೊರತೆಯನ್ನು ಕಡಿಮೆ ಮಾಡಿ ಆರ್ಥಿಕ ಸಮತೋಲನವನ್ನು ಸ್ಥಾಪಿಸುವುದಕ್ಕೆ ಮಾನ್ಯ ಸಚಿವರು ಬಹಳಷ್ಟು ಪ್ರಯತ್ನ ಮಾಡಿದ್ದಾರೆ. ಜನತೆಯ ಹಿತದೃಷ್ಟಿಯಿಂದ ಇದು ಬಹಳ ಒಳ್ಳೆಯದು. ಬಹಳ ಹಿಂದಿನಿಂದಲೂ ಕೊರತೆಯ ಬಳುವಳಿ ಏನು ಬಂದಿತ್ತು ಇದಕ್ಕೆ ಕಾರಣ ಏನು ಎಂದು ಸೂಕ್ಷ್ಮವಾಗಿ ಗಮನಿಸಿದರೆ ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ೮೯-೯೦ರಲ್ಲಿ ಬಹಳ ಹೆಚ್ಚಿಗೆ ಇದ್ದುದರಿಂದ ಫುಡ್ ಪ್ರೊಡಕ್ಷನ್ ಕಡಿಮೆ ಆಯಿತು. ಫುಡ್ ಪ್ರೊಡಕ್ಷನ್ ಕಡಿಮೆಯಾಗುವುದಕ್ಕೆ ಕಾರಣ ವಿದ್ಯುಚ್ಛಕ್ತಿ ಉತ್ಪಾದನೆ ಕಡಿಮೆ ಆದುದು. ಯಾವಾಗ ದೇಶದಲ್ಲಿ ಫುಡ್ ಪ್ರೊಡಕ್ಷನ್ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆ ಕುಂಠಿತವಾಯಿತೋ ಆಗ ಆರ್ಥಿಕ ಅರಾಜಕತೆ ಹೆಚ್ಚಾಯಿತು. ರಾಜ್ಯದಲ್ಲಿ ನಾನ್ ಪ್ಲಾನ್ಡ್ ಎಕ್ಸ್‌ಪೆಂಡಿಚರ್ ಹೆಚ್ಚಾದುದಕ್ಕೆ ಅವರು ಕೊಟ್ಟ ಕಾರಣ ಎಂದರೆ ಆಗ ಮಳೆ ಬೆಳೆ ಆಗದೆ ಅಭಾವ ತಲೆದೋರಿತು ಎಂಬುದು. ಅಭಾವ ತಲೆದೋರಿತ್ತು ಎಂಬುದು ನಿಜ. ನಾನು ಒಪ್ಪಿಕೊಳ್ಳುತ್ತೇನೆ. ೧೯೮೩ರಲ್ಲಿ ನಾನು ಕೂಡ ಈ ಸದನದಲ್ಲಿ ಸದಸ್ಯನಾಗಿದ್ದೆ. ಆಗ ಸಾಕಷ್ಟು ಸಮರ್ಪಕವಾಗಿ ಕೆಲಸ ಮಾಡಿದರು. ೮೩ ರಿಂದ ೮೫ರವರೆಗೆ ಬಹಳ ಚೆನ್ನಾಗಿ ಆಡಳಿತ ನಡೆಯಿತು. ೮೫ರ ನಂತರ ನಾನ್‌ಪ್ಲಾನ್ಡ್ ಎಕ್ಸ್‌ಪೆಂಡೀಚರ್ ಜಾಸ್ತಿಯಾಯಿತು ಕಾರಣ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಯ ಬಿಲ್ಲನ್ನು ಅವರು ತಂದರು. ಅಧಿಕಾರ ವಿಕೇಂದ್ರೀಕರಣ ಮಾಡಬೇಕು, ತನ್ಮೂಲಕ ಜನರು ಏನು ಬಯಸುತ್ತಾರೆ ಅದು ಅವರಿಗೆ ತಕ್ಷಣ ಸಿಗಬೇಕು ಎಂಬುದು ಅವರ ಉದ್ದೇಶವಾಗಿತ್ತು. ಆದರೆ ಆ ರೀತಿ ಬಂದಂಥ ಕಾಯಿದೆ ಕೇವಲ ಕಾಗದದ ಮೇಲೆ ಮತ್ತು ರಾಜಕಾರಣಿಗಳು ಮಾತನಾಡುವುದಕ್ಕೆ ಮಾತ್ರ ಆಯಿತು, ವಾಸ್ತವಾಂಶ ಏನೆಂದರೆ ಆ ಕಾಯ್ದೆಯನ್ನು ಜಾರಿಗೆ ತಂದಾಗ ನಾನ್ ಪ್ಲಾನ್ಡ್ ಎಕ್ಸ್‌ಪೆಂಡೀಚರ್ ಜಾಸ್ತಿಯಾಯಿತು. ಇವತ್ತು ಜಿಲ್ಲಾ ಪರಿಷತ್ತುಗಳಲ್ಲಿ ಕೆ. ಎ. ಎಸ್. ಅಧಿಕಾರಿಗಳು ೫-೬ ಜನರಿದ್ದಾರೆ, ಐ.ಎ.ಎಸ್. ಅಧಿಕಾರಿಗಳು ವಿಭಾಗಾಧಿಕಾರಿಗಳ ಮಟ್ಟದವರು ಅಲ್ಲಿ ಚೀಫ್ ಸೆಕ್ರೆಟರಿ ಆಗಿದ್ದಾರೆ. ಅಲ್ಲಿ ಶಿಕ್ಷಣ ಇಲಾಖೆ, ಹೈಸ್ಕೂಲು, ಆರೋಗ್ಯ ಇಲಾಖೆ ಹೀಗೆ ಎಲ್ಲಾ ಇಲಾಖೆಗಳಿಗೂ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇರುತ್ತಾರೆ. ಅದೇರೀತಿ ಇಲ್ಲಿ ಎಲ್ಲಾ ಇಲಾಖೆಗಳಿಗೂ ಮಂತ್ರಿಗಳು ಇರುತ್ತಾರೆ. ಇದರಿಂದ ಅನ್‌ಸ್ಲಾಟ್ ಆಗುತ್ತದೆ. ಈ ರೀತಿಯ ಅನ್‌ಸ್ಲಾಟ್ ಆದಾಗ ನಾನ್‌ಪ್ಲಾನ್ಡ್ ಎಕ್ಸ್‌ಪೆಂಡೀಚರ್ ತಾನೇತಾನಾಗಿ ಜಾಸ್ತಿಯಾಗಿ ಆರ್ಥಿಕ ದಿವಾಳಿತನವಾಗುತ್ತದೆ. ನಮ್ಮ ಮೂಲಭೂತವಾದ ಪ್ರಶ್ನೆ ಏನು ಇದೆ ಜಿಲ್ಲಾಪರಿಷತ್ ಮುಖ್ಯವಾಗಿ ಅದನ್ನು ವಿಕೇಂದ್ರೀಕರಣ ಮಾಡಿ ಜನರಿಗೆ ನಾವು ಅಧಿಕಾರವನ್ನು ಕೊಡಬೇಕು ಎಂದು ಏನು ಉಲ್ಲೇಖಿಸಿದ್ದಾರೆ ಅದರ ಸ್ವರೂಪವನ್ನೆ ಬದಲಿಸಬೇಕೆಂದು ಬಹಳ ಬುದ್ಧಿವಂತಿಕೆಯಿಂದ ಹೇಳಿದ್ದಾರೆ. ಅದು ಯಾವರೀತಿ ಇರಬೇಕೆಂದರೆ ನನ್ನ ಅನಿಸಿಕೆ ಹಿಂದೆ ಏನು ಇತ್ತು ಆ ರೀತಿ ಇರಬೇಕು. ಮಾನ್ಯ ಜಾಲಪ್ಪನವರು ಭಾಷಣ ಮಾಡುತ್ತಾ ಹೇಳಿದರು ಗ್ರಾಮ ಪಂಚಾಯಿತಿ ಏನು ೪-೫ ಹಳ್ಳಿಗಳು ಸೇರಿ ಗ್ರಾಮ ಪಂಚಾಯತಿ ಆಗಬೇಕೆಂದು ನನ್ನ ಅನಿಸಿಕೆ. ಇದರಿಂದಾಗಿ ಬಹಳಷ್ಟು ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ಖರ್ಚು ಕಡಿಮೆಯಾಗುತ್ತದೆ. ಗ್ರಾಮ ಪಂಚಾಯತಿಗಳನ್ನು ಮಾಡುವಾಗ ಅಲ್ಲಿ ಕೆಳಮಟ್ಟದ ಸ್ಪರ್ಧೆ ಇರಬಾರದು ರಾಜಕೀಯ ಪಕ್ಷಗಳು ಅಲ್ಲಿ ತಲೆತೂರಬಾರದೆಂದು ನನ್ನ ಆಶಯ. ನಮ್ಮ ಸಮಾಜದಲ್ಲಿ ಆರ್ಥಿಕ ಅರಾಜಕತೆ ಮತ್ತು ಸಾಮಾಜಿಕ

ಅರಾಜಕತೆ ತಲೆ ಎತ್ತುತ್ತಿದೆ ಆದ್ದರಿಂದ ಮುಂದೆ ಇದನ್ನು ಮಾರ್ಪಾಡು ಮಾಡುವಾಗ ಗ್ರಾಮ ಪಂಚಾಯತಿಗಳು ಮತ್ತು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್, ಡಿಸ್ಟ್ರಿಕ್ಟ್ ಡೆವೆಲಪ್‌ಮೆಂಟ್ ಬೋರ್ಡ್ ಲೆವೆಲ್‌ನಲ್ಲಿ ಸಲಹಾ ಸಮಿತಿಗಳನ್ನು ಮಾಡಿ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ಏನು ಇದೆ ಅದಕ್ಕೆ ಕಡಿವಾಣವನ್ನು ಹಾಕಿ ಆರ್ಥಿಕ ಸಮತೋಲನವನ್ನು ಮಾಡುವುದಕ್ಕೆ ಅರ್ಥಮಂತ್ರಿಗಳು ಪ್ರಯತ್ನ ಮಾಡಬೇಕು.

ಹಾಗೆಯೇ ಬಹಳಷ್ಟು ನಮ್ಮ ಬಜೆಟ್ ಮೇಲೆ ಯೋಚನೆ ಮಾಡಿಕೊಂಡು ಹೋದರೆ ಕೆಲವಾರು ಪ್ರಗತಿಪರವಾದ ಕಾರ್ಯಕ್ರಮಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಜಿಲ್ಲಾಪರಿಷತ್‌ರೋಡ್‌ಗಳನ್ನು ತೆಗೆದು ಕೊಂಡರೆ ಈ ರೋಡ್ಸ್‌ಗಳ ಕೆಲಸ ಯಾವುದನ್ನು ಅವರು ಮಾಡಿಲ್ಲ. ಬಜೆಟ್‌ನಲ್ಲಿ ದುಡ್ಡನ್ನು ಪ್ರವೈಡ್ ಮಾಡಿದ್ದರೂ ಆ ದುಡ್ಡನ್ನು ಖರ್ಚು ಮಾಡುವುದಕ್ಕಾಗಲಿಲ್ಲ, ಅಲ್ಲೂ ಕೂಡ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ ವಿಪರೀತವಾಗಿ ಜಿಲ್ಲಾಪರಿಷತ್ ಅಧ್ಯಕ್ಷರ ಖರ್ಚು ೨೦–೨೫ ಸಾವಿರ ಬರುತ್ತಿದೆ. ಅವರ ಬಗ್ಗೆ ನನಗೇನು ಭಿನ್ನಾಭಿಪ್ರಾಯವಿಲ್ಲ. ಪ್ರತಿಯೊಬ್ಬರ ಖರ್ಚು ೨೦ ಸಾವಿರ ರೂಪಾಯಿಗಳು ಬರುತ್ತಿದೆ.

ಮತ್ತೊಂದು ವಿಚಾರವೆಂದರೆ ಗಡಿ ತಾಲ್ಲೂಕುಗಳ ಅಭಿವೃದ್ಧಿಯ ಬಗ್ಗೆ ಬಜೆಟ್‌ನಲ್ಲಿ ಹೇಳಿದ್ದಾರೆ. ನಮ್ಮ ಮಾಲೂರು ತಾಲ್ಲೂಕು ತಮಿಳುನಾಡಿನ ಗಡಿಯಲ್ಲಿ ಇದೆ. ತಮಿಳುನಾಡಿನವರೆಗೆ ರೋಡ್‌ಗಳು ಬಹಳ ಸಮರ್ಪಕವಾಗಿ ಡೆವಲಪ್‌ಮೆಂಟ್ ಮಾಡಿದ್ದಾರೆ. ಬಹುಶಃ ಕಾಲುದಾರಿಯಂತಿರುವ ರೋಡ್ ಗಳಿಗೂ ಅವರು ಟಾರ್ ಹಾಕಿಬಿಟ್ಟಿದ್ದಾರೆ. ಆದ್ದರಿಂದ ಗಡಿ ಪ್ರದೇಶಗಳನ್ನು ಇಂಪ್ರೂವ್‌ಮೆಂಟ್ ಮಾಡುವಾಗ ಮಾಲೂರು ತಾಲ್ಲೂಕನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಪಡಿಸಬೇಕೆಂದು ಕೋರಿ ಕೊಳ್ಳುತ್ತೇನೆ.

ಮತ್ತೆ ಒಂದು ಯೋಜನೆ ಸರ್ಕಾರದಲ್ಲಿ ಪೆಂಡಿಂಗ್ ಇದೆ. ೧೭೦ ಕೋಟಿ ರೂಪಾಯಿಗಳ ಈ ಯೋಜನೆ ಕಾವೇರಿ ನದಿಯಿಂದ ಮಾಲೂರು–ತೇಕಲ್–ಕೋಲಾರ ಮತ್ತು ಕೆ.ಜಿ.ಎಫ್.ಗಳಿಗೆ ಕುಡಿಯುವ ನೀರನ್ನು ಕೊಡುವಂಥ ಯೋಜನೆ. ಸುಮಾರು ೯೦೦ ಕಿಲೋಮೀಟರ್ ದೂರ. ಅದರ ಅಂದಾಜು ೧೦೦೦ ಕೋಟಿ ರೂಪಾಯಿಗಳಾಗುತ್ತದೆ. ಇದನ್ನು ಮುಂದಿನ ಬಜೆಟ್‌ನಲ್ಲಿ ಸೇರಿಸಬೇಕೆಂದು ಹೇಳುತ್ತಿದ್ದೇನೆ. ಇವತ್ತು ಕೋಲಾರ ಜಿಲ್ಲೆಗೆ ಬೋರ್‌ವೆಲ್ ಸ್ಕೀಮ್ ಬಂದಾಗ ಸುಮಾರು ೧೨೦ ಅಡಿ ಕೊರೆದರೆ ನೀರು ಸಿಗುತ್ತಿತ್ತು. ಈಗ ನೀರು ಸಿಗಬೇಕಾದರೆ ೪೦೦ ಅಡಿ ಕೆಳಗೆ ಹೋಗಬೇಕಾಗಿದೆ. ಮೊದಲು ನೀರನ್ನು ಎತ್ತಬೇಕಾದರೆ ಸುಮಾರು ೬೦ ಹೆಚ್. ಪಿ. ಮೋಟಾರ್ ಸಾಕಾಗಿತ್ತು. ಆದರೆ ಇವತ್ತು ೯೦೦ ಹೆಚ್.ಪಿ, ಕಂಪಲ್‌ಸರಿಯಾಗಿ ಹಾಕಬೇಕು. ಇದನ್ನು ಮಾಡದಿದ್ದರೆ ಕುಡಿಯುವುದಕ್ಕೆ ನೀರೇ ಸಿಗುವುದಿಲ್ಲ, ಅಂಥ ಒಂದು ಪರಿಸ್ಥಿತಿ ಉದ್ಭವವಾಗಿದೆ. ಪರಿಸ್ಥಿತಿಯನ್ನು ಗಮನಿಸಿ ಜವಾಬ್ದಾರಿ ಯಿಂದ ಮುನ್ನೆಚ್ಚರಿಕೆಯನ್ನು ವಹಿಸಿ ದಯವಿಟ್ಟು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕಾಗಿದೆ. ಏತಕ್ಕೆಂದರೆ ೯೦೦ ಅಡಿ ಆಳದಲ್ಲಿ ದೊರೆಯುವ ನೀರಿಗೆ ಹ್ಯಾಂಡ್ ಪಂಪ್‌ನ್ನು ಅಳವಡಿಸಿದರೆ ಪಂಪಿನಿಂದ ನೀರೇ ಬರುವುದಿಲ್ಲ. ಮಿನಿಮಮ್ ೪೦೦ ಓಲ್ಟ್ ವಿದ್ಯುಚ್ಛಕ್ತಿ ಮೋಟರನ್ನು ಅಳವಡಿಸಬೇಕಾಗುತ್ತದೆ. ಆದ್ದರಿಂದ ಕಾವೇರಿ ನೀರು ಸರಬರಾಜು ಯೋಜನೆ ಏನು ಇದೆ ಅದನ್ನು ಕಾರ್ಯಾಚರಣೆಗೆ ತರಬೇಕೆಂದು ಈ ಮೂಲಕ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆ ಬಹಳಷ್ಟು ರಾಜಕೀಯ ಪಕ್ಷಗಳು ಏನು ಉಳಿದಿವೆ ಅವೆಲ್ಲ ನಮ್ಮ ಸರ್ಕಾರದ ಮೇಲೆ ರೈತರ ಸಾಲ ಮನ್ನಾ ಮಾಡಬೇಕೆಂದು ಬಹಳ ಒತ್ತಾಯಪೂರ್ವಕವಾಗಿ ಪ್ರಯತ್ನ ಮಾಡುತ್ತಿವೆ. ಅವರು ಮಾಡುವುದು ರೈತರ ಹಿತದೃಷ್ಟಿಯಿಂದ ಒಳ್ಳೆಯ ಕೆಲಸ ಅನ್ನುವುದಕ್ಕೆ ಮೊದಲು ೧೯೮೯–೯೦ರ ಬಡ್ಜೆಟಿನಲ್ಲಿ ಬೊಮ್ಮಾಯಿಯವರು ಒಂದು ಮಾತು ಹೇಳಿರುವುದನ್ನು ಗಮನಿಸಬೇಕಾಗುತ್ತದೆ. ಅದೇನೆಂದರೆ,

> "It is both appropriate and timely for the Finance Commission and the Union Government to consider the write off of loans, re-scheduling of the loans and the reduction of the interest on loans."

ಅವರು ಈ ಸರ್ಕಾರವನ್ನು ನಡೆಸುತ್ತಿರಬೇಕಾದರೆ ಲೋನ್ ಅಂದರೆ ರೈತರ ಲೋನ್ ಅಲ್ಲ ಎಲ್ಲಾ ಲೋನ್‌ಗಳನ್ನು ಸೇರಿಸಬೇಕು ಎಂದು ಹೇಳಿದ್ದಾರೆ. ರಾಜ್ಯ ಸರ್ಕಾರ ಏನು ಲೋನ್ ಪಡೆದಿದೆ ಅದೆಲ್ಲ ವನ್ನು ರೈಟ್ ಆಫ್ ಮಾಡಬೇಕೆಂದು ಬೇಡಿಕೆ ಸಲ್ಲಿಸಿದ್ದಾರೆ. ಇವತ್ತು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಲೋನ್ ರೈಟ್ ಆಫ್ ಮಾಡಬೇಕೆಂದು ಮನವಿ ಸಲ್ಲಿಸುವುದು ಸರಿಯಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ಅವರು ಬಡ್ಜೆಟ್ ತಯಾರು ಮಾಡುವಾಗ ಕೇಂದ್ರ ಸರ್ಕಾರಕ್ಕೆ ಲೋನ್ ರೈಟ್ ಆಫ್ ಮಾಡಬೇಕೆಂದು ಕೇಳಿರುವ ನಿದರ್ಶನ ಇದರಲ್ಲಿದೆ. ಆದುದರಿಂದ ಕೇಂದ್ರ ಸರ್ಕಾರದವರು ಲೋನ್

ಅನ್ನು ರೈಟ್ ಆಫ್ ಮಾಡುವ ವಿಚಾರದಲ್ಲಿ ರಾಜ್ಯ ಸರ್ಕಾರಗಳ ಒಂದು ನೆರವಿಗೆ ಬಾರದಿದ್ದರೆ ಆಘಾತ ಪರಿಸ್ಥಿತಿ ಬರುತ್ತದೆ. ಬಾಂಬೆಯಲ್ಲಿ ಈಗಿನ ಕೇಂದ್ರದ ಅರ್ಥಮಂತ್ರಿಗಳಾದ ಮಧುದಂಡವತೆಯವರು ಏನಿದ್ದಾರೆ ಅವರು ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ, ರೈತರು ಮಾಡಿರುವ 10 ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡುವುದಕ್ಕಾಗುವುದಿಲ್ಲ. ಶ್ರೀಮಂತ ರೈತರೂ ಕೂಡ 10 ಸಾವಿರ ರೂಪಾಯಿ ವರೆಗೆ ಸಾಲ ಮಾಡಿದ್ದಾರೆ: ಯಾರು ಇನ್‌ಸ್ಟಾಲ್‌ಮೆಂಟುಗಳನ್ನು ಸರಿಯಾಗಿ ಕಟ್ಟಿಕೊಂಡು ಮರಳಿ ಲೋನ್ ಕೊಡಬೇಕೆಂದು ಕೇಳಬೇಕೆಂದಿದ್ದವರ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಅಂಥವರ ಸಾಲವನ್ನು ರೈಟ್ ಆಫ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್ ನಬಾರ್ಡ್ ಇದೆ, ನಾವು ಬ್ಯಾಂಕುಗಳ ಸಮತೋಲನವನ್ನು ಕಾಪಾಡಿಕೊಂಡು ಹೋಗಿದ್ದೇವೆಂದು ಬಹಳ ಚೆನ್ನಾಗಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ವಿಚಾರ ಮಾನ್ಯ ವಿರೋಧಪಕ್ಷದ ನಾಯಕರ ಗಮನದಲ್ಲೂ ಇದೆ. ಅವರು ಭಾಷಣ ಮಾಡುತ್ತಾ ಹೇಳಿರಬಹುದು, ಆದುದರಿಂದ ಕೇಂದ್ರ ಸರ್ಕಾರದವರು ರೈತರ ಸಾಲವನ್ನು ಮನ್ನಾ ಮಾಡುವುದರಲ್ಲಿ ನಮ್ಮ ನೆರವಿಗೆ ಬಾರದಿದ್ದರೆ ಕಷ್ಟವಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ಟ್ಯಾಡಿಯನ್ನು ರಾಜ್ಯದಲ್ಲಿ ನಿಷೇಧ ಮಾಡಬೇಕೆಂಬ ಉದ್ದೇಶವನ್ನು ಈ ಬಡ್ಜೆಟ್ಟಿನಲ್ಲಿ ತಂದಿದ್ದಾರೆ. ಆದರೆ ಟ್ಯಾಡಿ ನಿಷೇಧ ಮಾಡುವುದರ ಜೊತೆಗೆ ಅರಾಕ್‌ಗೆ ಟ್ಯಾಕ್ಸ್ ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಅರಾಕ್‌ಗೆ ಟ್ಯಾಕ್ಸ್ ಹೆಚ್ಚು ಮಾಡುವುದರಲ್ಲಿ ತಮಿಳ್ನಾಡು ಮತ್ತು ಆಂಧ್ರ ಮತ್ತು ಕೇರಳ ರಾಜ್ಯಗಳನ್ನು ಟ್ಯಾಲಿ ಮಾಡಿಕೊಂಡು ಮಾಡಬೇಕಾಗುತ್ತದೆ, ಇದರಲ್ಲಿ ಬಹಳ ಸೂಕ್ಷ್ಮವಾದ ಅಂಶ ಇದೆ. ಅದೇನೆಂದರೆ ಇಲ್ಲಿ ಅರಾಕಗೆ ಟ್ಯಾಕ್ಸ್ ಜಾಸ್ತಿ ಮಾಡಿದರೆ ಪಕ್ಕದ ರಾಜ್ಯಗಳಲ್ಲಿ ಕಡಿಮೆ ಇದ್ದರೆ ಅಲ್ಲಿಂದ ಇಲ್ಲಿಗೆ ಕಳ್ಳತನದಿಂದ ತಂದು ಮಾರುವಂತಹ ಪ್ರಸಂಗಗಳು ಬಹಳವಾಗಿ ಎಕ್ಸೈಜ್‌ ಮೇಲೆ ಪ್ರಭಾವವಾಗುತ್ತದೆ. ಆದುದರಿಂದ ಅರಾಕ್ ಟ್ಯಾಕ್ಸನ್ನು ರೈಸ್ ಮಾಡುವಾಗ ಈ ಮೂರು ರಾಜ್ಯಗಳನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ನನ್ನ ಅರಿಕೆ. ತಾವು ಬಡ್ಜೆಟ್ ಮೇಲೆ ಭಾಷಣ ಮಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಮಕೃಷ್ಣ (ಕಮಲಾಪುರ) —ಮಾನ್ಯ ಸಭಾಧ್ಯಕ್ಷಿಣೀಯವರೆ, ನಮ್ಮ ರಾಜದ ಹಣಕಾಸಿನ ಸಚಿವರು ಮಂಡಿಸಿರತಕ್ಕ ಈ ಬಜೆಟ್ಟನ್ನು ನಾನು ಸ್ವಾಗತಿಸುತ್ತೇನೆ. ಈ ಬಜೆಟ್ಟನ್ನು ನಾವು ನೋಡಿದಮೇಲೆ ನಿಜವಾಗಿಯೂ ಬಹಳಷ್ಟು ವಿವರವಾಗಿ ಸೂಕ್ಷ್ಮವಾಗಿ ರಾಜ್ಯದ ಜನತೆ ಮೇಲೆ ಯಾವರೀತಿ ಕರಭಾರ ಹಾಕಬೇಕು, ಎಂಥವರ ಮೇಲೆ ಕರ ಹಾಕಬೇಕು, ಯಾವರೀತಿ ಸಂಪನ್ಮೂಲಗಳನ್ನು ಸಂಗ್ರಹಿಸಬೇಕು ಎನ್ನುವ ಬಗ್ಗೆ ಬಹಳಷ್ಟು ವಿಚಾರ ಮಾಡಿ ಆಯವ್ಯಯ ಪತ್ರವನ್ನು ತಯಾರು ಮಾಡಿದ್ದಾರೆ ಎಂದು ಹೇಳಬಹುದು. ಇದು ನಮ್ಮ ರಾಜ್ಯದ ಜನತೆಯ ಮೇಲೆ ಯಾವರೀತಿ ಪರಿಣಾಮವಾಗುತ್ತದೆ ಎಂಬುದು ಬಹಳಷ್ಟು ವಿಚಾರ ಮಾಡಿ ನೋಡತಕ್ಕದ್ದು. ಇದರಲ್ಲಿ ಕೆಲವೊಂದು ಮುಖ್ಯವಾದ ಅಂಶಗಳನ್ನು ಎತ್ತಿತೋರಿಸಲಾಗಿದೆ. ಒಂದನೆಯದಾಗಿ ರೆವಿನ್ಯೂ ಭೂಮಿಯಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಹೇಳಿದ್ದಾರೆ, ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಪ್ರತಿಯೊಂದು ನಗರದಲ್ಲಿಯೂ ನೋಡಿದರೆ ಇಲ್ಲಿಯವರೆಗೂ ರೆವಿನ್ಯೂ ಸೈಟ್ ಮೇಲೆ ಬಹಳಷ್ಟು ಬಡವರು ಕಟ್ಟಡಗಳನ್ನು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಪಟ್ಟಣ ಪ್ರದೇಶದಲ್ಲಿ, ನಗರ ಪ್ರದೇಶದಲ್ಲಿ, ತಾಲ್ಲೂಕು ಪ್ರದೇಶಗಳಲ್ಲಿ ಬಹಳಷ್ಟು ಬಡವರು ಮನೆ ಕಟ್ಟಿಕೊಂಡಿದ್ದಾರೆ. ಸರ್ಕಾರ ಕಾಯಿದೆ ದೃಷ್ಟಿಯಿಂದ ಖುಲ್ಲಾ ನಿವೇಶನ ಸಿಗದೇ ಇರುವುದಕ್ಕಾಗಿ ರೆವಿನ್ಯೂ ಜಾಗದಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಆದರೂ ಸಹ ಆ ಮನೆ ಕಟ್ಟಿಕೊಂಡಿರತಕ್ಕ ಜನರಿಗೆ ಮನೆ ಕಟ್ಟುವವರೆಗೆ ಒಂದು ತೊಂದರೆಯಾಗುತ್ತದೆ. ಬಹಳಷ್ಟು ಜನ ರೆವಿನ್ಯೂ ಸೈಟ್‌ಗಳಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ. ಮುನಿಸಿಪಾಲಿಟಿಗಳಾಗಲೀ ಕಾರ್ಪೊರೇಷನ್‌ಗಳಾಗಲೀ ಆ ಬಡಾವಣೆಗಳಿಗೆ ಲೈಟಿನ ವ್ಯವಸ್ಥೆ ನೀರಿನ ವ್ಯವಸ್ಥೆ ಮತ್ತು ರೋಡಿನ ವ್ಯವಸ್ಥೆ ಮಾಡಬೇಕಾಗುತ್ತದೆ. ಬಹಳಷ್ಟು ಕಡೆ ಹಳ್ಳಿಗಳಲ್ಲಿ. ನಗರಗಳಲ್ಲಿ ಸಾವಿರಾರು ಬಡಾವಣೆಗಳು ಬಂದಿರುವುದು ಕಾಣುತ್ತದೆ. ಇಲ್ಲಿಯವರೆಗೆ ಮೊದಲಿದ್ದ ಸರ್ಕಾರ ಇದೇರೀತಿ ಪ್ರಸ್ತಾವನೆ ತಂದಿತ್ತು. ರೆವಿನ್ಯೂ ಸೈಟ್‌ಗಳ ಮೇಲೆ ಬಡವರು ಮನೆಗಳನ್ನು ಕಟ್ಟಿಕೊಂಡಿದ್ದರೆ ಆ ಜಾಗವನ್ನು ರೆಗ್ಯುಲರೈಸ್ ಮಾಡುತ್ತೇವೆ ಎಂದು ಹಿಂದಿನ ಸರ್ಕಾರ ಹೇಳಿತ್ತು. ಆದರೆ ಹಿಂದಿನ ಸರ್ಕಾರ ಹೇಳಿದಂತೆ ಯಾವುದೂ ಇಲ್ಲಿಯವರೆಗೆ ಮಾಡಿಲ್ಲ. ಬಹಳಷ್ಟು ಹೇಳಿಕೊಂಡರು ಅವರು. ಆದರೆ ಏನೂ ಮಾಡುವುದಕ್ಕೆ ಆಗಲಿಲ್ಲ ಎಂದು ಹೇಳಬೇಕಾಗುತ್ತದೆ. ನಮ್ಮ ಸರ್ಕಾರ ಇವತ್ತು ಈ ಜಮೀನಿನಲ್ಲಿ ಮನೆಕಟ್ಟಿಕೊಂಡವರಿಗೆ ರೆಗ್ಯುಲರೈಸ್ ಮಾಡಿ ಸಹಾಯ ಮಾಡತಕ್ಕ ಮಾತು ಏನು ಹೇಳಿದೆ ಅದು ನಿಜವಾಗಿಯೂ ಸ್ವಾಗತಾರ್ಹವಾದುದು. ಬಡವರ ಹಿತದ ಬಗ್ಗೆ ಈ ರೀತಿ ನಿರ್ಣಯ ತೆಗೆದುಕೊಳ್ಳುವುದು ಉಚಿತವಾಗಿದೆ. ಹೈದರಾಬಾದ್ ಕರ್ನಾಟಕಕ್ಕೆ ನಮ್ಮ ಪ್ರದೇಶ ಬರುತ್ತದೆ. ಇಲ್ಲಿಯವರೆಗೆ ರಾಜ್ಯದ ಎಲ್ಲಾ ಪ್ರದೇಶಗಳಿಗೆ ಹೋಲಿಸಿ ನೋಡಿದರೆ ಹೈದರಾಬಾದ್

ಕರ್ನಾಟಕ ಹಿಂದುಳಿದ ಪ್ರದೇಶ ಎಂದು ಬಹಳ ದಿನಗಳಿಂದ ಹೇಳುತ್ತಿದ್ದೇವೆ. ಇದಕ್ಕೆ ಮೊದಲಿದ್ದ ಸರ್ಕಾರದವರು ಹೈದರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶ, ಇದಕ್ಕೆ ಸಹಾಯವಾಗಬೇಕು, ಬೇರೆ ಜಿಲ್ಲೆಯಂತೆ ಬೇರೆ ಭಾಗದಂತೆ ಒಳ್ಳೆಯಭಾಗ ಆಗಬೇಕೆಂಬ ದೃಷ್ಟಿಯಿಂದ ಸದನದಲ್ಲಿ ಬಹಳಷ್ಟು ಮಾತನಾಡುತ್ತಿದ್ದರು. ಬೇರೆ ಜಿಲ್ಲೆಗೆ ಸರಿಸಮಾನವಾಗುವಂತೆ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಮಾಡಬೇಕೆಂಬ ಭಾವನೆ ಇಟ್ಟುಕೊಂಡು ಹಿಂದಿನ ಸರ್ಕಾರ ವ್ಯವಸ್ಥೆ ಮಾಡಲಿಲ್ಲ. ಆದರೆ ಇವತ್ತು ಸರ್ಕಾರ ಬಹಳಷ್ಟು ವಿಚಾರ ಮಾಡಿ ಈ ಭಾಗ ಹಿಂದೆ ಬಿದ್ದಿದೆ, ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕೆಂಬ ದೃಷ್ಟಿಯಿಂದ ಸುಮಾರು ೪೦ ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೆ ಇಟ್ಟಿದೆ. ಅಲ್ಲಿಯ ಜನರಾಗಲಿ, ಶಾಸಕರಾಗಲಿ, ನಾಯಕರಾಗಲೀ ಅದಕ್ಕಾಗಿ ಅಭಿನಂದನೆ ಸಲ್ಲಿಸಬೇಕಾಗುತ್ತದೆ. ಏಕೆಂದರೆ ಈ ಭಾಗ ಬಹಳ ಹಿಂದೆಬಿದ್ದ ಭಾಗವಾಗಿದೆ. ಇವತ್ತು ಆ ಭಾಗದ ರಸ್ತೆಗಳನ್ನು ನೋಡಿದರೆ ಆ ಕಡೆ ಬರುವುದಕ್ಕೇ ಜನರು ಹೆದರುತ್ತಾರೆ. ಬಹಳ ಜನರು ಗುಲ್ಬರ್ಗ, ಬೀದರ್, ರಾಯಚೂರು ಭಾಗಕ್ಕೆ ಕರೆದರೆ ಬೇಡೋ ಮಹರಾಯ ಎಂದು ಹೇಳುತ್ತಾರೆ. ಏಕೆಂದರೆ ಆ ಭಾಗದಲ್ಲಿರುವ ರಸ್ತೆಗಳು ಎಷ್ಟು ಹದಗೆಟ್ಟಿವೆ ಎಂದರೆ ೧ ಗಂಟೆಯಲ್ಲಿ ಉಪಕ್ರಮಿಸಬೇಕಾದ ದೂರವನ್ನು ಒಂದು ಕಾರು ಹೋಗಲು ೪ ಗಂಟೆ ತೆಗೆದುಕೊಳ್ಳುತ್ತದೆ. ಅದೂ ಕೂಡಾ ೪ ಗಂಟೆಗಳಲ್ಲಿ ಮಧ್ಯದಲ್ಲಿ ರಸ್ತೆ ದುರಸ್ತಿಯಿಂದ ಕಾರು ಕೆಟ್ಟು ನಿಲ್ಲುವ ಸಂಭವವೇ ಹೆಚ್ಚು. ಇಂತಹ ಒಂದು ಭಾಗದ ಬಗ್ಗೆ ಸರ್ಕಾರ ಇವತ್ತು ಏನು ನಿರ್ಣಯವನ್ನು ತೆಗೆದುಕೊಂಡಿದೆ ಅದನ್ನು ನಾನು ಸ್ವಾಗತ ಮಾಡುತ್ತೇನೆ ಇವತ್ತು ಹಾಸ್ಟೆಲುಗಳಲ್ಲಿ ಓದುವ ವಿದ್ಯಾರ್ಥಿಗಳ ಬಗ್ಗೆ ಒಂದೆರಡು ವಿಷಯ ಹೇಳಬೇಕಾಗಿದೆ. ಒಂದು ಕಾಲದಲ್ಲಿ ಹಳ್ಳಿಗಳಲ್ಲಿ ೧೦ ಪೈಸೆಗೆ ಚಹಾ ಸಿಕ್ಕುತ್ತಿದ್ದುದು ಇವತ್ತು ೧ ರಿಂದ ೧.೫೦ ರೂಪಾಯಿ ಆಗಿದೆ. ಇವತ್ತಿನದಿವಸ ಎಸ್‌ಸಿ ಹುಡುಗರು ಇರುವ ಹಾಸ್ಟೆಲುಗಳಲ್ಲಿ ಮುಂಜಾನೆ ಮತ್ತು ಸಾಯಂಕಾಲ ಎರಡು ಹೊತ್ತು ಊಟ ಕೊಡಬೇಕಾಗಿದೆ. ಅವರಿಗೆ ಊಟಕ್ಕೆ ಕೊಡುವುದು ೧೨೫ರಿಂದ ೧೫೦ ರೂಪಾಯಿಗಳು ಮಾತ್ರ. ಇದರಲ್ಲಿ ಆತ ಎರಡುಸಲದ ಊಟದ ವ್ಯವಸ್ಥೆ, ಬಿಲ್ಡಿಂಗ್‌ರೆಂಟ್, ಲೈಟ್‌ಚಾರ್ಜ್ ಎಲ್ಲ ಕೊಡಬೇಕಾದ್ದರಿಂದ ಆ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿತ್ತು. ಇವತ್ತು ಹಳ್ಳಿಗಾಡಿನಲ್ಲಿ, ತಾಲ್ಲೂಕು ಮಟ್ಟದಲ್ಲಿ ಸರ್ಕಾರದಿಂದ ತೆರೆದ ಹಾಗೂ ಖಾಸಗೀ ಹಾಸ್ಟೆಲುಗಳಲ್ಲಿ ಓದಿ ಒಳ್ಳೆಯವರಾಗಬೇಕೆನ್ನುವ ಭಾವನೆಯನ್ನು ಇಟ್ಟುಕೊಂಡು ಓದಲು ಬರುವ ವಿದ್ಯಾರ್ಥಿಗಳಿಗೆ ಇವೆಲ್ಲಾ ಕೊರತೆ ಎದ್ದು ಕಾಣುತ್ತಿದ್ದುದನ್ನು ಸರ್ಕಾರ ಮನಗಂಡು, ವಿದ್ಯಾರ್ಥಿಗಳಿಗೆ ಎಷ್ಟು ಖರ್ಚು ಆಗುತ್ತದೆ ಅದಕ್ಕೆ ತಕ್ಕ ಪ್ರಮಾಣದಲ್ಲಿ ಕೊಡಬೇಕೆಂದು ಮನಗಂಡು ಈ ವಿದ್ಯಾರ್ಥಿವೇತನವನ್ನು ತಿಂಗಳಿಗೆ ೨೦೦ ರೂಪಾಯಿಗೆ ಏರಿಸಿರುವುದು ಅಭಿನಂದನೆ ಸಲ್ಲಿಸಬೇಕಾದ ವಿಚಾರವಾಗಿದೆ. ಮತ್ತೆ ಆಯವ್ಯಯದಲ್ಲಿ ಆಡಳಿತವನ್ನು

ಚುರುಕುಗೊಳಿಸಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಇಲ್ಲಿ ನನ್ನ ಸ್ನೇಹಿತರು ಹಲವರು ಮಾತನಾಡಿದರು ಇವತ್ತು ಈ ಅಧಿಕಾರಿಗಳಿಂದ ಎಷ್ಟು ಕಷ್ಟವಾಗುತ್ತದೆ, ಏನು ತೊಂದರೆ ಆಗುತ್ತದೆಂದು ನಮಗೆ ಗೊತ್ತು. ಇವತ್ತು ಒಬ್ಬ ಡಿ. ಸಿ. ಹತ್ತಿರ, ಡಿವಿಜನಲ್ ಕಮೀಷನರ್ ಹತ್ತಿರ ನಾವು ಸಾರ್ವಜನಿಕ ಕೆಲಸಗಳ ಬಗ್ಗೆ ಹೋಗುವ ಪ್ರಸಂಗ ಬರುತ್ತದೆ ಹಾಗೆ ಹೋದಾಗ ಬನ್ನಿ ಕುಳಿತುಕೊಳ್ಳಿ, ಏನು ಸಮಸ್ಯೆ ಇದೆ ಎಂದು ಕೇಳುವಂತಹ ಅಧಿಕಾರಿಗಳೇ ಇಲ್ಲ, ಬಹಳಷ್ಟು ಇಲ್ಲ. ಏನೋ ಬರುತ್ತಾರೆ ಹೋಗುತ್ತಾರೆ ಎನ್ನುವ ಭಾವನೆ ಬಹಳ ಅಧಿಕಾರಿಗಳಲ್ಲಿ ಇದೆ. ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡು ಕೆಲಸ ಮಾಡಿದರೆ ರಾಜ್ಯದ ಜನರ ಕಲ್ಯಾಣವಾಗುವುದಿಲ್ಲ. ಇವತ್ತು ರಾಜ್ಯದ ಜನತೆಯ ಕಲ್ಯಾಣದ ಭಾವನೆ ಇಟ್ಟುಕೊಂಡು ಕ್ಷೇತ್ರದ ಜನರ ಕೆಲಸಗಳ ಬಗ್ಗೆ ನಾವು ಹೋದಾಗ ಅದಕ್ಕೆ ಅಡೆತಡೆ ಮಾಡುವ ವ್ಯವಸ್ಥೆ ಈ ಅಧಿಕಾರವರ್ಗದಲ್ಲಿ ಇದೆ ಎಂದು ಹೇಳುತ್ತೇನೆ. ಇವತ್ತು ಶಾಸಕರು ಹೋದಾಗಲೇ ಗಮನ ಹರಿಸದವರು ಬಡವರು ಹೋದಾಗ ಇನ್ನು ಯಾವ ರೀತಿ ನಡೆದುಕೊಳ್ಳುತ್ತಾರೆಂದು ಊಹೆ ಮಾಡಬಹುದು. ಇವತ್ತು ಮೇಲ್ಮಟ್ಟದ ಅಧಿಕಾರಿಗಳು ಅಂತಸ್ತಿನ ಮೇಲೆ ಅಂತಸ್ತಿನ ಕಟ್ಟಡಗಳನ್ನು ಕಟ್ಟಿಕೊಂಡು ಅದರಲ್ಲಿ ಆರಾಮವಾಗಿದ್ದಾರೆ. ಇಂತಹವರ ಮೇಲೆ ಬಿಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಅರಿತು ಸಾರ್ವಜನಿಕ ಕೆಲಸ ಕಾರ್ಯಗಳ ಬಗ್ಗೆ ಗಮನಹರಿಸಬೇಕು. ಜನರ ಸೇವೆಯನ್ನು ಸಲ್ಲಿಸಬೇಕೆನ್ನುವ ಭಾವನೆಯನ್ನು ಇಟ್ಟುಕೊಂಡು ಕೆಲಸ ಮಾಡಬೇಕು. ಇವತ್ತು ನಿರ್ಲಕ್ಷ್ಯದಿಂದಿರುವ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಹಾಕಿಕೊಳ್ಳಬೇಕು. ಇವತ್ತು ಸಾರ್ವಜನಿಕರಿಗೆ ತೊಂದರೆ ಆದರೆ ಸರ್ಕಾರ ನಮಗೆ ಬಿಡುವುದಿಲ್ಲ ಎನ್ನುವ ಭಾವನೆಯಿಂದ ಅವರು ಕೆಲಸ ಮಾಡಬೇಕು.

ಇಲ್ಲದಿದ್ದರೆ ಆಗಲಿಕ್ಕೆ ಸಾಧ್ಯವಿಲ್ಲ. ಇಲ್ಲಿ ರಾಜಕಾರಣಿಗಳಾದ ನಾವು ಶಾಸಕರು ಅಧಿಕಾರಿಗಳು ಒಟ್ಟಿಗೆ ಸೇರದಿದ್ದರೆ ಪ್ರಗತಿಯಾಗುವುದಿಲ್ಲ. ಏನು ಸಾಧಿಸಬೇಕೆಂದು ಇದ್ದೇವೆ ಅದನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ. ಎಲ್ಲರೂ ಕೂಡಿ ಹೇಳುತ್ತೇವೆ, ಅಧಿಕಾರಿವರ್ಗ ನಾವು ಎಲ್ಲರೂ ಸೇರಿದರೆ ಸಾಧ್ಯವಾಗುತ್ತದೆ. ಇಂದಿನ

ಅಧಿಕಾರಿ ವರ್ಗದ ಪ್ರವೃತ್ತಿಯೇ ಬೇರೆ. ಅವರು ಜನತೆಗೆ ಸಂಬಂಧಪಟ್ಟಿಲ್ಲ. ಏಕೆಂದರೆ ಸಂಬಂಧಪಟ್ಟವರು ನಾವು, ಅವರು ಇಂಡಿಪೆಂಡೆಂಟ್ ಇದ್ದೇವೆಂದು ತಿಳಿದುಕೊಂಡಿದ್ದಾರೆ. ಅಂಥವರಿಗೆ ಸರ್ಕಾರದವರು ಏನು ಶಿಕ್ಷೆ ಕೊಡುತ್ತಾರೆ ? ಮಾಡಿದರೆ ಟ್ರಾನ್ಸ್ ಫರ್ ಮಾಡುತ್ತಾರೆ. ಇಲ್ಲಿಲ್ಲದಿದ್ದರೆ ಮತ್ತೊಂದು ಕಡೆ ಹೋಗುತ್ತೇವೆಂದು ಏನೋ ಒಂದು ಭಾವನೆಯನ್ನು ಇಟ್ಟುಕೊಂಡಿದ್ದಾರೆ ಮೊದಲು ಅದು ಹೋಗಬೇಕು. ಅಧಿಕಾರಿಗಳು ತಿಳಿದುಕೊಂಡು ನಡೆಯಬೇಕಾಗುತ್ತದೆ. ನಮಗೆ ಏನಾದರೂ ಸ್ಥಾನಮಾನ ಸಿಕ್ಕಿದರೆ ಅದು ಜನರ ರಕ್ಷಣೆಗಾಗಿ, ಜನರ ಸಲುವಾಗಿ ಸಿಕ್ಕಿದೆ ನಾವು ಜನರ ಸಲುವಾಗಿ ಕೆಲಸ ಮಾಡಬೇಕು ಎನ್ನುವುದನ್ನು ಅವರು ಅರ್ಥಮಾಡಿಕೊಳ್ಳಬೇಕು. ನಾವು ಕುರ್ಚಿಯಲ್ಲಿ ಕುಳಿತುಕೊಂಡಿದ್ದೇವೆ, ಏತಕ್ಕೆ ಕುಳಿತುಕೊಂಡಿದ್ದೇವೆ ಎನ್ನುವ ಭಾವನೆ ಅವರಲ್ಲಿರಬೇಕು. ಅವರು ಮಾತನಾಡುವುದಕ್ಕೆ ಟೈಮ್ ಸಿಗುವುದಿಲ್ಲವೆಂದರೆ ರಾಜ್ಯದ ಮತ್ತು ಜನರ ಕೆಲಸ ಹೇಗಾಗುತ್ತದೆ ? ಜನರ ಕೆಲಸದ ಸಲುವಾಗಿ ಬಹಳಷ್ಟು ಒತ್ತಡ ಏರಿ ನಾವು ಕೆಲಸವನ್ನು ತೆಗೆಯಬೇಕು. ಸರ್ಕಾರಿ ನೌಕರರು ರಾಜ್ಯಾದ್ಯಂತ ಮುಷ್ಕರ ಮಾಡಿದರು, ಸತ್ಯಾಗ್ರಹ ಮಾಡಿದರು. ಆಫೀಸುಗಳಲ್ಲಿ ಕೆಲಸ ಮಾಡತಕ್ಕ ಜನ ಹೇಗಿರುತ್ತಾರೆಂಬುದರ ಬಗ್ಗೆ ಹೇಳುತ್ತೇನೆ, ಇಲ್ಲಿ ಸೆಕ್ರೆಟರಿಯೇಟ್‌ನಲ್ಲಿ ಕೆಲಸ ಮಾಡತಕ್ಕವರ ಬಗ್ಗೆ ಹೇಳುತ್ತೇನೆ. ಮುಂಜಾನೆ ೧೦.೩೦ಕ್ಕೆ ಆಫೀಸಿಗೆ ಬರುತ್ತಾರೆ ಆಲ್‌ಮೆರಾದಲ್ಲಿರತಕ್ಕ ಫೈಲುಗಳನ್ನು ತೆಗೆದು ಟೇಬಲ್ ಮೇಲೆ ಇಟ್ಟು ಹೊರಗೆ ಹೋಗುತ್ತಾರೆ. ಒಬ್ಬ ಸಾಧಾರಣ ಮನುಷ್ಯ ಏನಾದರೂ ಒಂದು ಕೆಲಸಕ್ಕೆ ಬಂದು ಎಲ್ಲಿ ಹೋದರೂ ಎಂದು ಕೇಳಿದರೆ ಕಾಫಿಗೆ ಹೋದರು ಎಂದು ಹೇಳುತ್ತಾರೆ ಅವರ ಡ್ಯೂಟಿ ಏನೆಂದರೆ ಕಡತಗಳನ್ನು ತೆಗೆದು ಟೇಬಲ್ ಮೇಲೆ ಇಡುವುದು, ಬಂದ ತಕ್ಷಣ ಕಾಫಿಗೆ ಹೋಗುವುದು ಕಾಫಿಗೆ ಹೋದಮೇಲೆ ೧ ಗಂಟೆಯಾದ ಮೇಲೆ ಬಂದು ಒಬ್ಬರು ಇಬ್ಬರು ವಿಚಾರವನ್ನು ಕೇಳಿ ಮತ್ತೆ ಊಟಕ್ಕೆ ಹೋಗುತ್ತಾರೆ ಊಟಕ್ಕೆ ಹೋಗಿ ಎಷ್ಟು ಹೊತ್ತಿಗೆ ಬರುತ್ತಾರೆಂದರೆ ಮೂರೂವರೆ ನಾಲ್ಕು ಗಂಟೆಗೆ ಬರುತ್ತಾರೆ. ಮತ್ತೆ ಕಾಗದವನ್ನು ಟೇಬಲ್ ಮೇಲಿಟ್ಟು ಎಲ್ಲಿಗೆ ಹೋದರೂ ಅಂದರೆ ಕಾಫಿಗೆ ಹೋದರು, ಆಮೇಲೆ ಬಂದು ಎಲ್ಲಿಗೆ ಹೋದರು ಎಂದು ಕೇಳಿದರೆ ಮನೆಗೆ ಹೋದರು. ಇಂತಹವರು ಸತ್ಯಾಗ್ರಹ ಮಾಡುವುದು ೫೦ ಎಕರೆ ಭೂಮಿ ಇರತಕ್ಕ ಒಬ್ಬ ರೈತನ ಬಗ್ಗೆ ವಿಚಾರ ಮಾಡಿ ನೋಡುವುದಾದರೆ, ಅವನು ಅವನ ಹೆಂಡತಿ ಮಕ್ಕಳು ಎತ್ತುಗಾಡಿ ಹಗಲು ರಾತ್ರಿ ಮಳೆಗಾಲ ಚಳಿಗಾಲ ಎನ್ನದೆ ದುಡಿದರೂ ಅವನಿಗೆ ತಿಂಗಳಿಗೆ ಸಾವಿರ ರೂಪಾಯಿ ಸಿಗುವುದಿಲ್ಲ. ಆತನ ಆಸ್ತಿಯಲ್ಲಿ ಮನೆ ಮಂದಿಯೆಲ್ಲ ಉಣಲಿಕ್ಕೆ ಅಲ್ಲೇ ತೆಗೆದುಕೊಂಡು ಹೋಗಿ ದುಡಿದರೂ ತಿಂಗಳಿಗೆ ಸಾವಿರ ಪಗಾರ ಸಿಗುವುದಿಲ್ಲ. ಅವರು ಎಷ್ಟು ಸಮಯ ಕೆಲಸ ಮಾಡುತ್ತಾರೆ ? ಇವರು ಎಷ್ಟು ಸಮಯ ಕೆಲಸ ಮಾಡುತ್ತಾರೆ ? ಸರ್ಕಾರಿ ನೌಕರರು ಎರಡು ತಾಸು ಕೆಲಸ ಮಾಡತಕ್ಕವರು. ಅಲ್ಲಿರತಕ್ಕವರು ಹಗಲು ರಾತ್ರಿ ದುಡಿದರೂ ಏನೂ ಸಿಗುವುದಿಲ್ಲ. ಇಷ್ಟು ಪಗಾರ ಸಿಗುತ್ತಿದ್ದರೂ ಮತ್ತೆ ಬೇಕೆನ್ನುವ ಭಾವನೆ ಸರಿಯಾದುದಲ್ಲ, ಅವರು ಬೇಡಲಿ ಕೊಡಬಾರದೆನ್ನುವ ಭಾವನೆ ನಮಗೆ ಇಲ್ಲ. ರಾಜ್ಯದ ಅಭಿವೃದ್ಧಿಗೆ ಕೆಲಸ ಮಾಡತಕ್ಕವರು ನಾವು ರಾಜ್ಯಕ್ಕೆ ಏನು ಕೊಡುತ್ತೇವೆ ಎನ್ನುವ ಭಾವನೆ ಅವರಲ್ಲಿರಬೇಕು. ಸರ್ಕಾರಿ ನೌಕರರು ನಾವು ಕೆಲಸಕ್ಕೆ ಹೋಗದಿದ್ದರೂ ಪಗಾರ ಬರುತ್ತದೆ, ಕೆಲಸ ಮಾಡದಿದ್ದರೂ ಪಗಾರ ದೊರೆಯುತ್ತದೆನ್ನುವ ಭಾವನೆ ಹೋಗಬೇಕು. ನಾವು ರಾಜ್ಯಕ್ಕಾಗಿ ದುಡಿಯುತ್ತಿದ್ದೇವೆ, ಇದು ರಾಜ್ಯದ ಕೆಲಸವೆನ್ನುವ ಭಾವನೆ ಇರಬೇಕು. ಆ ಭಾವನೆ ಇರದಿದ್ದರೆ ದೇಶ ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಸರ್ಕಾರದ ಮೇಲೆ ಒತ್ತಡ ತಂದು, ಸಂಘಸಂಸ್ಥೆಗಳ ಮೂಲಕ ಚಳುವಳಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ನನಗನ್ನಿಸುತ್ತದೆ ಈ ಸಂಘಸಂಸ್ಥೆಗಳನ್ನು ರದ್ದು ಮಾಡಬೇಕು. ಸಂಘಸಂಸ್ಥೆಗಳು ಇವು ಇರಬಾರದು. ಒಳ್ಳೆಯದಕ್ಕಾಗಲೀ ಕೆಟ್ಟದಕ್ಕಾಗಲೀ ಇದೇ ಅಸ್ತ್ರವನ್ನು ಉಪಯೋಗ ಮಾಡುವುದು ಸರಿಯಾದುದಲ್ಲ. ರಾಜ್ಯದಲ್ಲಿರತಕ್ಕ ಜನಗಳಿಗೆ ಏನು ಮಾಡಿದ್ದೇವೆ ಎನ್ನುವ ಭಾವನೆ ಸರ್ಕಾರಿ ನೌಕರರಲ್ಲಿ ಇಲ್ಲ. ಯಾವುದೇ ಆಫೀಸರ್ ಹತ್ತಿರ ಒಬ್ಬ ಬಡವ ೮-೧೦ ಸಾರಿ ತಿರುಗಾಡಬೇಕು. ಆಫೀಸುಗಳಲ್ಲಿ ಒಂದು ಕೆಲಸ ಸಹ ಆಗುವುದಿಲ್ಲ. ಬಡವ ಬಡಿದುಕೊಂಡು ಬಡಿದುಕೊಂಡು ಸಾಯುತ್ತಾನೆ. ದಿನಾ ಬರುತ್ತಾನೆ ಹೋಗುತ್ತಾನೆ ಒಂದು ದಿನ ಸಿಕ್ಕಿದರೆ ಒಂದು ಹೇಳುತ್ತಾರೆ. ಹೀಗೆ ದಿನಕ್ಕೊಂದು ಸಬೂಬು ಹೇಳುತ್ತಾ ಹೋಗುವುದು ಕೆಲಸವಾಗುವುದಿಲ್ಲವೆಂದು ಬಡವರು ಹೇಳುತ್ತಾರೆ. ನೂರಕ್ಕೆ ಒಬ್ಬರೋ ಇಬ್ಬರೋ ಕರೆದು ಕೆಲಸ ಮಾಡತಕ್ಕವರು ಇದ್ದಾರೆ ಇಲ್ಲವೆಂದು ಹೇಳುವುದಿಲ್ಲ. ಇನ್ನು ೯೯ ಮಂದಿ ಕಿರುಕುಳ ಕೊಡತಕ್ಕವರೇ ಇದ್ದಾರೆ. ಇಂತಹವರ ಮೇಲೆ ವ್ಯವಸ್ಥಿತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಜನಗಳಿಗೆ ನೆಮ್ಮದಿಯಿಂದ ಈ ರಾಜ್ಯದಲ್ಲಿ ಬಾಳಲಿಕ್ಕೆ ಸಾಧ್ಯವಿಲ್ಲ. ಇದಕ್ಕೆ ಸರ್ಕಾರ ಮುಂದೆ

೩-೩೦ ಪಿ.ಎಂ.:

ಬರತಕ್ಕ ದಿನಗಳಲ್ಲಿ ಬಹಳಷ್ಟು ಕಠಿಣವಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲವೆನ್ನುವ ಭಾವನೆ ನನಗೆ ಇದೆ. ಇನ್ನು ಕೊಳಚೆ ಪ್ರದೇಶಗಳ ಬಗ್ಗೆ ಹೇಳಿದ್ದೀರಿ. ಈ ಕೊಳಚೆ ಪ್ರದೇಶಗಳ

ಬಗ್ಗೆ ಹೇಳಬೇಕಾದರೆ ಈ ರಾಜ್ಯದಲ್ಲಿ ಬಹಳಷ್ಟು ಕೊಳಚೆ ಪ್ರದೇಶಗಳು ಇವೆ. ಈ ಕೊಳಚೆ ಪ್ರದೇಶಗಳಲ್ಲಿ ರತಕ್ಕಂಥ ಬಹಳಷ್ಟು ಜನ ಬಡವರು. ಪರಿಶಿಷ್ಟ ಜನಾಂಗಕ್ಕೆ ಸಂಬಂಧಪಟ್ಟವರು, ಹಿಂದುಳಿದ ಜನಾಂಗಕೆ ಸಂಬಂಧಪಟ್ಟವರು. ಅವರು ಬಹಳಷ್ಟು ಕಾಳಜಿಯಿಂದ ನೋಡುತ್ತಿದ್ದಾರೆ. ಯಾವ ಸರ್ಕಾರ ಬಂದರೂ ಕೊಳಚೆ ನಿರ್ಮೂಲನದ ಬಗ್ಗೆ ಒಂದು ಪ್ರಾರ್ಥ ಇರುತ್ತದೆ. ಬರೇ ಪ್ರಾರ್ಥ ಇದ್ದರೆ ಮಾತ್ರ ಸಾಧ್ಯ ಇಲ್ಲ. ಹಿಂದಿನ ಸರ್ಕಾರದಲ್ಲಿ ನೋಡಿದ್ದೇವೆ. ಏನು ಇವತ್ತು ಅಧಿಕಾರ ಕಳೆದುಕೊಂಡು ಕುಳಿತಿರುವಂಥ ಪಕ್ಷ ಇದೆ, ಅವರು ಏನು ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಆದರೆ ಏನು ಆಗಲಿಲ್ಲ. ಎಷ್ಟು ಕೊಳಚೆಪ್ರದೇಶಗಳು ಇದ್ದವೋ, ಅವುಗಳು ಹಾಗೆಯೇ ಇವೆ. ಎಲ್ಲೋ ಅಲ್ಲಿ ಇಲ್ಲಿ ಹಳ್ಳಿಗಳ ಮೂಲೆಯಲ್ಲಿ ಕೆಲವು ಮನೆಗಳನ್ನು ಕಟ್ಟಿರಬಹುದು. ಆದರೆ ಅದೂ ಕೂಡ ಅಸ್ತವ್ಯಸ್ಥವಾಗಿದೆ. ಈ ಸರ್ಕಾರ ಬಹುತೇಕ ಬಹಳಷ್ಟು ಕಾಳಜಿ ಇಟ್ಟುಕೊಂಡು ಕೊಳಚೆ ನಿರ್ಮೂಲನಕ್ಕಾಗಿ ತೀವ್ರಗತಿಯಲ್ಲಿ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡು ಒಳ್ಳೆಯ ರೀತಿಯಲ್ಲಿ ಅದನ್ನು ಪಾಲಿಸುತ್ತದೆ ಎಂಬ ಭಾವನೆ ನನಗಿದೆ. ಆಮೇಲೆ ಈಗ ಇನ್ನೊಂದು ಏನಾಗಿದೆ ಎಂದರೆ, ವಿಶೇಷವಾಗಿ ಪ್ರತಿಯೊಂದು ಬಜೆಟ್‌ನಲ್ಲಿಯೂ ನೋಡುತ್ತೇವೆ. ವಿಶೇಷ ಘಟಕ ಯೋಜನೆಯಲ್ಲಿ ಈ ರಾಜ್ಯದಲ್ಲಿರತಕ್ಕಂಥ ಪರಿಶಿಷ್ಟ ಜಾತಿ ಮತ್ತು ಜನಾಂಗಗಳಿಗೆ ವಿಶೇಷವಾದಂಥ ಸೌಲಭ್ಯಗಳು, ಅನುಕೂಲತೆಗಳು ಆಗಿಲ್ಲ. ಏನಾದರೂ ಅವರಿಗೆ ಒಳ್ಳೆಯದಾಗಲಿ ಎಂದು ಅವರ ಸಲುವಾಗಿ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳತಕ್ಕಂಥ ದೃಷ್ಟಿಯಿಂದ ಕೇಂದ್ರ ಸರ್ಕಾರ ಈ ರೀತಿಯ ಸ್ಪೆಶಲ್ ಕಾಂಪೋನೆಂಟ್ ಸ್ಕೀಮನ್ನು ತೆಗೆದುಕೊಂಡುಬಂದಿತು. ಆದರೆ ಇವತ್ತು ಏನಾಗಿದೆ ಎಂದರೆ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಈ ಹಣವನ್ನು ಹಂಚಿಬಿಡುತ್ತಾರೆ. ಸುಮಾರು ೧೫–೨೦ ಕೋಟಿ ರೂಪಾಯಿ ಕೇಂದ್ರದಿಂದ ಬಂದರೆ ಇವರು ಏನು ಮಾಡುತ್ತಾರೆ ಎಂದರೆ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ಗಳಿಗೆ, ಹಂಚಿಬಿಡುತ್ತಾರೆ. ಅವರು ಕೆಲಸ ಎಷ್ಟು ಮಾಡುತ್ತಾರೆ, ನಿಜವಾಗಿಯೂ ಈ ಜನರಿಗೆ ಆಗುತ್ತದೆಯೋ ಇಲ್ಲವೋ ಎಂದು ಯಾರೂ ನೋಡುವುದಿಲ್ಲ. ಇದು ಏನಾಗುತ್ತಿದೆ ಎಂದರೆ ಪ್ರತಿಯೊಂದು ಕಡೆಯಲ್ಲೂ ಹೀಗೆ ಬರತಕ್ಕಂಥ ದುಡ್ಡನ್ನು ಬೇರೆಯದಕ್ಕೆ ಖರ್ಚು ಮಾಡುತ್ತಾರೆ. ಹರಿಜನರಿಗೆ ಸಂಬಂಧಪಟ್ಟ ರೋಡ್‌ಗಳು ಆಗುವುದಿಲ್ಲ, ಹರಿಜನ ಕೇರಿಗಳ ರಸ್ತೆಗಳು ಆಗುವುದಿಲ್ಲ. ಏನೋ ನೂರರಲ್ಲಿ ಒಂದೋ, ಎರಡೋ ರಸ್ತೆಗಳನ್ನು ಮಾಡಿದಹಾಗೆ ಮಾಡಿ ಉಳಿದ ಹಣವನ್ನು ಅವರ ಹೆಸರಿನಲ್ಲಿ ಖರ್ಚು ಮಾಡಿಬಿಡುತ್ತಾರೆ. ನೂರಕ್ಕೆ ಎಂಬತ್ತು ಭಾಗದಷ್ಟು ಹೀಗೆ ಬಂದ ಹಣ ಬೇರೆಯವರಿಗಾಗಿಯೇ ಖರ್ಚಾಗುತ್ತಿದೆ. ಈ ದುಡ್ಡು ಈ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಖರ್ಚು ಮಾಡಲಿಕ್ಕಾಗಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಬಂದಿರುವಂಥಾದ್ದು. ನಾಳೆ ಒಂದು ವರ್ಷ ಆದಮೇಲೆ ಲೆಕ್ಕ ತೆಗೆದರೆ ಎಲ್ಲಾ ದುಡ್ಡೂ ಖರ್ಚಾಗಿದೆ ಎಂದು ಹೇಳುತ್ತಾರೆ. ಆದರೆ ನಿಜವಾಗಿಯೂ ಈ ಹಣ ಅವರಿಗೆ ಸಂದಿರುವುದಿಲ್ಲ. ಯಾವ ಸವಲತ್ತೂ ಕೂಡ ಅವರಿಗೆ ಸಲ್ಲುತ್ತಿಲ್ಲ. ಅವರಿಗಾಗಿ ಖರ್ಚು ಆಗಬಾರದು ಎಂಬ ಭಾವನೆಯಿಂದಲೇ ಎಲ್ಲಾ ಹಣವನ್ನು ಬೇರೆ ಕಡೆಗಳಲ್ಲಿ ಖರ್ಚು ಮಾಡುತ್ತಾರೆ, ಜಿಲ್ಲಾ ಪರಿಷತ್ತುಗಳಲ್ಲಿ, ಮಂಡಲ ಪಂಚಾಯತಿಗಳಲ್ಲಿ ಇದನ್ನು ನೋಡುತ್ತಿದ್ದೇವೆ. ಪರಿಶಿಷ್ಟ ಜಾತಿ, ಜನಾಂಗದವರ ದುಡ್ಡು ಏನಿದೆ, ಅದು ಅವರಿಗಾಗಿ ಖರ್ಚೇ ಆಗಿರುವುದಿಲ್ಲ. ಅದನ್ನು ಬೇರೆ ಕಡೆಯೇ ಖರ್ಚು ಮಾಡುತ್ತಾರೆ. ಈಗ ಸರ್ಕಾರದಲ್ಲಿ ಲೋಕೋಪಯೋಗಿ ಇಲಾಖೆಯಾಗಲೀ, ನೀರಾವರಿಯಾಗಲೀ ಎಲ್ಲಾ ಇಲಾಖೆಗಳನ್ನು ಇಟ್ಟುಕೊಂಡು ಮೂರು–ನಾಲ್ಕು ಜನ ಚೀಫ್ ಇಂಜಿನಿಯರ್ ಸೂಪರಿಂಟೆಂಡೆಂಟ್ ಇಂಜನಿಯರ್‌ಗಳು ಸುಮ್ಮನೆ ಕುಳಿತಿದ್ದಾರೆ. ನಾನು ಹೇಳುವುದೇನೆಂದರೆ ಈ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗಾಗಿಯೇ ಒಂದು ಡಿಪಾರ್ಟ್‌ಮೆಂಟ್‌ನ್ನು ಮಾಡಿ. ಈ ಹಣವನ್ನು ಹರಿಜನರಿಗೆ ಅವರ ಏಳಿಗೆಗಾಗಿಯೇ ಖರ್ಚು ಮಾಡಬೇಕೆಂದು ಭಾವನೆ ಮಾಡಿ ಇಂತಹ ಒಂದು ಡಿಪಾರ್ಟ್‌ಮೆಂಟ್ ಮಾಡಿದರೆ ನಿಜವಾಗಿಯೂ ಪರಿಶಿಷ್ಟ ಜಾತಿ, ಜನಾಂಗದವರಿಗೆ ಒಳ್ಳೆಯ ದಾಗಿ ಹೆಚ್ಚಿನ ದುಡ್ಡನ್ನು ಎಲ್ಲರಿಗೂ ಹಂಚಿ ಯಾರು ಬೇಕಾದರೂ ಉಪಯೋಗ ಮಾಡಿಕೊಳ್ಳಬಹುದು ಎಂಬ ಭಾವನೆ ಇಟ್ಟುಕೊಂಡು ಆಮೇಲೆ ಲೆಕ್ಕಕೊಟ್ಟು ಇಷ್ಟು ಖರ್ಚು ಮಾಡಿದ್ದೇವೆ ಎಂದು ಹೇಳತಕ್ಕದ್ದು ಸರಿಯಲ್ಲ. ಅದಕ್ಕಾಗಿ ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಪರಿಶಿಷ್ಟ ಜಾತಿ, ಜನಾಂಗದವರಿಗಾಗಿ ಖರ್ಚು ಮಾಡತಕ್ಕ ಈ ವಿಶೇಷ ಘಟಕದ ಯೋಜನೆ ಏನಿದೆ, ಇದಕ್ಕಾಗಿ ಒಂದು ಪ್ರತ್ಯೇಕ ಡಿಪಾರ್ಟ್‌ಮೆಂಟನ್ನು ಮಾಡಬೇಕು. ಆಗ ಮಾತ್ರ ಹರಿಜನರಿಗೆ ಏನಾದರೂ ಅನುಕೂಲವಾಗುತ್ತದೆ. ಹಿಂದಿನ ಸರ್ಕಾರ ಮನಸ್ಸಿಗೆ ಬಂದಹಾಗೆ ಮಾಡಿತ್ತು. ಏನಾದರೂ ಸಹಿತ ಇನ್ನುಮುಂದೆ ಈ ರಾಜ್ಯಕ್ಕೆ ಬರತಕ್ಕಂಥ ಸ್ಪೆಶಲ್ ಕಾಂಪೋನೆಂಟ್ ಸ್ಕೀಮ್‌ನ ಹಣ ಒಳ್ಳೆಯ ರೀತಿಯಿಂದ ಉಪಯೋಗವಾಗುವಂತೆ ಮಾಡಬೇಕು. ಪ್ರತ್ಯೇಕವಾದ ಇಲಾಖೆಯನ್ನು ಮಾಡಿ ಈ ಹಣವನ್ನು ಅವರಿಗೆ ಕೊಟ್ಟರೆ ಈ ವರ್ಗದ ಜನರಿಗೆ ಒಳ್ಳೆಯದಾಗುತ್ತದೆ ಎಂದು ನಾನು ಹೇಳುತ್ತೇನೆ. ಅದಕ್ಕೆ ಸರ್ಕಾರ ನಿಜವಾಗಿಯೂ ಆ ನಿಟ್ಟಿದಲ್ಲಿ ನಿರ್ಣಯ ತೆಗೆದುಕೊಂಡಿದ್ದ ಆದರೆ, ಈ ರಾಜ್ಯದಲ್ಲಿರತಕ್ಕ ಜನರಿಗೆ ಅನುಕೂಲವಾಗುತ್ತದೆ. ಇಂತಹ ಸರ್ಕಾರದಲ್ಲಿ ನಮಗೆ ಅನುಕೂಲ ವಾಯಿತು ಎಂಬ ಮಾತೂ ಬರುತ್ತದೆ. ಕೊನೆಯದಾಗಿ, ಬಹಳಷ್ಟು ಮಹತ್ವವುಳ್ಳ ಮಾತನ್ನು ಹೇಳ

ಬೇಕಾದರೆ, ನಮ್ಮ ರಾಜ್ಯದಲ್ಲಿರತಕ್ಕ ಬಡ ಜನ, ಪರಿಶಿಷ್ಟ ಜನ, ಹಿಂದುಳಿದ ಜನರು ಸೇಂದಿ, ಸಾರಾಯಿಯನ್ನು ಹಗಲು ರಾತ್ರಿ ಕುಡಿದು ಕಷ್ಟಕ್ಕೆ ಈಡಾಗತಕ್ಕಂಥ ಈ ಜನ ಇದ್ದಾರೆ. ಈ ಜನರಿಂದ, ಇವತ್ತು ರಾಜ್ಯದ ಪರಿಸ್ಥಿತಿ ಏನಾಗುತ್ತಿದೆ ಎಂದರೆ, ದಿನನಿತ್ಯ ಅನೇಕ ಜಗಳಗಳಾಗುತ್ತಿವೆ, ಮನೆಗಳು ಒಡೆದು ಹೋಗುತ್ತಿವೆ. ಈ ರೀತಿಯಾಗಿ ಕುಡಿದು ಬೀದಿಗೆ ಹೋಗತಕ್ಕ ಜನರು ಯಾರು ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಹಿಂದುಳಿದಂಥ ಜನರು. ಇವರಲ್ಲಿ ಕೆಲವರು ಸೇಂದಿ ಕುಡಿಯುತ್ತಾರೆ, ಮತ್ತೆ ಕೆಲವರು ಸಾರಾಯಿ ಕುಡಿಯುತ್ತಾರೆ. ಇಂತಹವರ ಮನೆಗಳು ಹಾಳಾಗಿ ಹೋಗುತ್ತಿವೆ. ಸರ್ಕಾರ ಬಹಳಷ್ಟು ಲೆಕ್ಕಹಾಕಿ, ರಾಜ್ಯದಲ್ಲಿರತಕ್ಕ ಬಡವರನ್ನು ಉಳಿಸಬೇಕು, ಅವರ ಜೀವನವನ್ನು ಒಳ್ಳೆಯದು ಮಾಡಬೇಕೆಂದು, ಈ ಸೇಂದಿಯನ್ನು ಬಂದ್ ಮಾಡುತ್ತೇವೆಂದು ಹೇಳಿರುವುದಕ್ಕೆ ನಾನು ಸರ್ಕಾರವನ್ನು ಸ್ವಾಗತಿಸುತ್ತೇನೆ. ಈ ರೀತಿಯ ಸೇಂದಿಯನ್ನು ಬಂದ್ ಮಾಡಿದ್ದೇ ಆದರೆ ಬಡ ಜನರು ಮೇಲೆ ಏಳುತ್ತಾರೆ. ನಾವು ಒಮ್ಮೆ ಹಳ್ಳಿಗೆ ಹೋಗಿ ಏನಮ್ಮ ನಿಮ್ಮ ಗಂಡ ಏನು ಮಾಡುತ್ತಾರೆಂದು ಕೇಳಿದರೆ, ಅವರು ಕೆಲಸಕ್ಕೆ ಹೋಗುತ್ತಾರೆ. ದಿನಕ್ಕೆ ೨೦ ರೂಪಾಯಿ ಪಗಾರ ತರುತ್ತಾರೆ ಎಂದು ಹೇಳುತ್ತಾರೆ. ನಾವು ಈ ೨೦ ರೂಪಾಯಿಯಲ್ಲಿ ಏನಾಗುತ್ತದೆ ನಿಮಗೆ ತೊಂದರೆಯಾಗುವುದಿಲ್ಲವೇ ಎಂದು ಕೇಳಿದಾಗ ಅವರು ಈ ೨೦ ರೂಪಾಯಿ ಕತೆ ಹೇಳುತ್ತಾರೆ. ಅವರು ದುಡಿಯುತಕ್ಕ ಈ ೨೦ ರೂಪಾಯಿಯಲ್ಲಿ, ತಮ್ಮ ದಣಿವು ನೀಗಿಸಿಕೊಳ್ಳುವುದಕ್ಕಾಗಿ ೫ ರೂಪಾಯಿ ಸೇಂದಿಗಾಗಿ ಖರ್ಚು ಮಾಡುತ್ತಾರೆ. ಒಂದು ಬಾಟಲ್ ಸೇಂದಿ ಸಾಕಾಗುವುದಿಲ್ಲವೆಂದು ಮತ್ತೆ ಇನ್ನೊಂದು ಬಾಟಲ್ ಕುಡಿದು ೧೦ ರೂಪಾಯಿ ಖರ್ಚು ಮಾಡುತ್ತಾರೆ. ಮನೆಗೆ ತೆಗೆದುಕೊಂಡು ಹೋಗತಕ್ಕ ಹಣದಲ್ಲಿ, ೧೦ ರೂಪಾಯಿ ಹೋಯಿತು. ಇನ್ನು ಸೇಂದಿ ಕುಡಿಯುವಾಗ ಏನಾದರೂ ತಿಂಡಿ ತಿಂದರೆ, ಅದಕ್ಕೊಂದು ೫ ರೂಪಾಯಿ, ಒಟ್ಟು ೧೫ ರೂಪಾಯಿ ಖರ್ಚಾಗುತ್ತದೆ. ಇನ್ನು ಉಳಿದ ೫ ರೂಪಾಯಿಗಳನ್ನು ಮನೆಗೆ ತೆಗೆದುಕೊಂಡು ಹೋಗುತ್ತಾನೆ. ಇನ್ನು ಕೆಲವರಿಗೆ ಎರಡು ಬಾಟಲ್ ಸೇಂದಿ ಕುಡಿದರೂ ಸಾಕಾಗುವುದಿಲ್ಲ. ಆದ್ದರಿಂದ ೩ ಬಾಟಲ್ ಕುಡಿದು, ಉಳಿದ ೫ ರೂಪಾಯಿಗಳಿಗೆ ಏನಾದರೂ ತಿಂಡಿ ತಿಂದು, ೨೦ ರೂಪಾಯಿಗಳನ್ನು ಅಲ್ಲಿಯೇ ಖರ್ಚು ಮಾಡುತ್ತಾರೆ. ಇದನ್ನೆಲ್ಲಾ ನೋಡಿದಾಗ, ಇವತ್ತು ಎಷ್ಟೋ ಲಕ್ಷಾಂತರ ಮನೆಗಳು ಇದರಿಂದ ಹಾಳಾಗಿವೆ. ಲಕ್ಷಾಂತರ ಮನೆಗಳು ಬಡತನಕ್ಕೆ ಬರುತ್ತಿವೆ. ಸರ್ಕಾರ ಐ ಆರ್.ಡಿ.ಪಿ. ಮುಂತಾದ ಸ್ಕೀಮ್‌ಗಳನ್ನು ತಂದು, ಹೆಚ್ಚಿಗೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಸರ್ಕಾರ ಬಹಳಷ್ಟು ಮುಂದೆ ಹೋಗಿ ಇಂತಹ ಕಾರ್ಯಕ್ರಮ ತೆಗೆದುಕೊಂಡಿದ್ದರಿಂದ ಬಡವರು ಮುಂದೆ ಬರುತ್ತಾರೆ, ಈ ಜನಗಳಿಗೆ ಒಳ್ಳೆಯದಾಗುತ್ತದೆ ಎಂಬ ಭಾವನೆ ಇದೆ. ಸರ್ಕಾರ ಈ ಸೇಂದಿಯನ್ನು ಬಂದ್ ಮಾಡುತ್ತೇವೆಂದು ಹೇಳಿರುವುದಕ್ಕಾಗಿ, ನಾನು ಇದನ್ನು ಸ್ವಾಗತಿಸುತ್ತೇನೆ. ಈ ರಾಜ್ಯದ ಜನತೆಯನ್ನು ಪ್ರತಿಯೊಂದು ಕಡೆಯಿಂದಲೂ ನೋಡಬೇಕಾಗುತ್ತದೆ. ಇವತ್ತು ಎಷ್ಟೋ ಹೆಣ್ಣುಮಕ್ಕಳು, ಹೇಳುತ್ತಿದ್ದಾರೆ. ಸರ್ಕಾರ ಒಳ್ಳೆಯ ಕೆಲಸ ಮಾಡಿದೆ ಅವರಿಗೆ ಪುಣ್ಯ ಬರಲಿ ನಾವೂ ಕೂಡ ನೆಟ್ಟಗಾಗುತ್ತೇವೆ ಎಂದು ಹೇಳುತ್ತಾರೆ. ಈ ರೀತಿ ಕೆಲಸ ಮಾಡಿದರೆ ನಾವು ಬಡವರಿಗೆ ಏನಾದರೂ ಸೇವೆ ಸಲ್ಲಿಸಿದ ಹಾಗೆ ಆಗುತ್ತದೆ. ಸರ್ಕಾರದ ಈ ಕಾರ್ಯಕ್ರಮ ಬಹಳಷ್ಟು ಉತ್ತಮವಾದ ಕಾರ್ಯಕ್ರಮ. ಬಡವರ, ಹಿಂದುಳಿದವರ್ಗದ ಹಿತದೃಷ್ಟಿಯಿಂದ ಹಾಕಿಕೊಂಡಿರತಕ್ಕ ಈ ಕಾರ್ಯಕ್ರಮವನ್ನು ಒಳ್ಳೆಯ ರೀತಿಯಿಂದ ನಡೆಸಿಕೊಂಡು ಹೋಗಿದ್ದೇ ಆದರೆ, ಈ ಜನತೆ ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ.ಕೆ. ಶಿವಕುಮಾರ್ (ಸಾತನೂರು).—ಮಾನ್ಯ ಅಧ್ಯಕ್ಷಿಣಿಯವರೇ, ನಾನು ಈ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಂಡಿದ್ದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ೧೬ನೇ ತಾರೀಖು ನಮ್ಮ ಆರ್ಥಿಕ ಮಂತ್ರಿಗಳು ಮಂಡಿಸಿದ ಆಯವ್ಯಯ ಪತ್ರದ ಬಗ್ಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಒಂದೆರಡು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಬಡವರ, ರೈತರ ಮತ್ತು ಹಿಂದುಳಿದ ವರ್ಗದವರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಆದರೆ ಎರಡು ವಿಚಾರದಲ್ಲಿ ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ನಮ್ಮ ರಾಜ್ಯದಲ್ಲಿ ೫೨ ಲಕ್ಷ ರೈತರು ರೇಷ್ಮೆ ಕೃಷಿ ವ್ಯವಸಾಯ ಅಳವಡಿಸಿಕೊಂಡಿದ್ದಾರೆ. ಆದರ ಬಗ್ಗೆ ಹುರಿ ತಯಾರಿಸುವ ವಿಚಾರದಲ್ಲಿ ನಾಲ್ಕು ಪರ್ಸೆಂಟ್ ತೆರಿಗೆಯನ್ನು ಹಾಕಬೇಕೆಂದು ನಮ್ಮ ಸರಕಾರ ಆಲೋಚನೆ ಮಾಡಿದೆ. ಸರಕಾರ ಈ ರೀತಿ ಏನು ಯೋಚನೆ ಮಾಡಿದೆ ಇದರಿಂದ ನಮ್ಮ ರೈತರಿಗೆ ತೊಂದರೆಯಾಗುತ್ತದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸುಮಾರು ಮೂರು ನಾಲ್ಕು ಲಕ್ಷ

ಕಾರ್ಮಿಕರು ನಮ್ಮ ರಾಜ್ಯದಲ್ಲಿ ಟ್ವಿಸ್ಟಿಂಗ್ ಮಾಡುವ ಉದ್ಯೋಗವನ್ನು ನಡೆಸಿಕೊಂಡು ಬರುತ್ತಿದ್ದಾರೆ ಈ ರೀತಿ ತೆರಿಗೆ ಹಾಕಿದರೆ ಈ ಉದ್ಯೋಗವನ್ನು ಅವಲಂಬಿಸಿರುವ ಮೂರು ನಾಲ್ಕು ಲಕ್ಷ ಜನ ಬೀದಿಪಾಲಾಗಬೇಕಾದ ಪರಿಸ್ಥಿತಿ ಬರುತ್ತದೆ. ಏತಕ್ಕೆಂದರೆ ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಇದರ ಮೇಲೆ ಯಾವುದೇ ರೀತಿಯಾದ ತೆರಿಗೆ ಇಲ್ಲ ಆಂಧ್ರದಲ್ಲಿ ಯಾವುದೇ ರೀತಿಯ ತೆರಿಗೆ ಇಲ್ಲ, ನಮ್ಮ ರಾಜ್ಯದಲ್ಲಿ ನಾಲ್ಕು ಪರ್ಸೆಂಟ್ ವಿಧಿಸಿರುವುದನ್ನು ನೋಡಿದರೆ ಇದರಿಂದ ತೊಂದರೆಯಾಗುತ್ತದೆ. ಮೊದಲೇ ಈಗ ಒಂದು ಪರ್ಸೆಂಟ್ ಮಾರ್ಕೆಟ್‌ನಲ್ಲಿ ರೈತರು ಕೊಡುತ್ತಾರೆ, ಇನ್ನೊಂದು ಪರ್ಸೆಂಟ್ ಮಾರ್ಕೆಟ್‌ನಲ್ಲಿ ವೀವರ್ಸ್ ಕೊಡುತ್ತಾರೆ. ನಾಲ್ಕು ಪರ್ಸೆಂಟ್ ರೇಷ್ಮೆ ಫೈನಲ್ ಫಿನಿಷಿಂಗ್ ಸ್ಟೇಜ್‌ನಲ್ಲಿ ಕೊಡುತ್ತಾರೆ. ಈ ರೀತಿ ಈಗಾಗಲೇ ೭ ಪರ್ಸೆಂಟ್ ತೆರಿಗೆ ವಿಧಿಸಿರುವ ಸಂದರ್ಭದಲ್ಲಿ, ಇನ್ನೂ ೪ ಪರ್ಸೆಂಟ್ ಹಾಕಿದರೆ ತೊಂದರೆಯಾಗುತ್ತದೆ. ಏನು ರೇಷ್ಮೆ ಹುರಿ ತಯಾರು ಮಾಡುತ್ತಿದ್ದಾರೆ, ಅದರಲ್ಲಿ ನೂರಕ್ಕೆ ೪೦ ಭಾಗ ರೇಷ್ಮೆ ಬಟ್ಟೆ ಮಾಡುವುದಕ್ಕೆ ಉಪಯೋಗಿಸುತ್ತಿದ್ದೇವೆ. ಇನ್ನು ೬೦ ಭಾಗ ಹೊರಗಡೆ ರಾಜ್ಯಕ್ಕೆ ಕಳುಹಿಸಲಾಗುತ್ತಿದೆ ೪೦% ಕಾಟೇಜ್ ಅಥವಾ ಹೋಮ್ ಇಂಡಸ್ಟ್ರಿಯಲ್ಲಿ ಇದನ್ನು ಉಪಯೋಗಿಸುತ್ತಿದ್ದೇವೆ. ಇದರ ಮೇಲೆ ತೆರಿಗೆ ಹೆಚ್ಚು ಮಾಡುವುದರಿಂದ ನಮ್ಮ ರಾಜ್ಯದ ಎಲ್ಲರಿಗೂ ತೊಂದರೆಯಾಗಿ, ಪಕ್ಕದ ತಮಿಳುನಾಡಿನ ಹೊಸೂರಿಗೆ ಈ ಕಾರ್ಖಾನೆಯನ್ನು ತೆಗೆದುಕೊಂಡು ಹೋಗಬೇಕಾದ ಪರಿಸ್ಥಿತಿ ಬರುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿ ಇದನ್ನು ಕೈಬಿಡಬೇಕೆಂದು ಮನವಿ ಮಾಡುತ್ತೇನೆ.

ಇನ್ನು ಚಿತ್ರರಂಗದ ವಿಚಾರದಲ್ಲಿ ಅಲ್ಲೂ ಕೂಡಾ ೫ ಪರ್ಸೆಂಟ್ ತೆರಿಗೆಯನ್ನು ಈ ಕಥಾ ಚಿತ್ರಕ್ಕೆ ವಿಧಿಸಿದ್ದಾರೆ. ಚಿತ್ರ ತೆಗೆಯುವುದಕ್ಕೂ, ನಮ್ಮ ಸರ್ಕಾರದಿಂದ ಅಥವಾ ಎನ್.ಎಫ್.ಡಿ.ಸಿ ಯಿಂದ ಕರ್ನಾಟಕ ರಾಜ್ಯದಲ್ಲಿ ಯಾವ ತರಹದ ಅವಕಾಶವೂ ಇಲ್ಲ. ಚಿತ್ರಮಂದಿರ ಕಟ್ಟುವುದಕ್ಕೂ ಅವಕಾಶ ಇಲ್ಲ. ಹಿಂದೆ ರಾಮಕೃಷ್ಣ ಹೆಗಡೆ ಸರಕಾರದವರು ಇದರ ಮೇಲೆ ತೆರಿಗೆ ಹಾಕಿದಾಗ ೧೫-೨೦ ದಿನಗಳ ಕಾಲ ಚಿತ್ರಮಂದಿರದವರು ಮತ್ತು ಫಿಲ್ಮ್ ಇಂಡಸ್ಟ್ರಿಯವರು ಮುಷ್ಕರ ಮಾಡಿ, ಹೋರಾಟ ಮಾಡಬೇಕಾದ ಪರಿಸ್ಥಿತಿ ಬಂತು. ಅವತ್ತು ಕೂಡಾ ಸರಕಾರದ ಮೇಲೆ ಒತ್ತಾಯ ಮಾಡಿ ಅವರು ಏನು ೫ ಪರ್ಸೆಂಟ್ ತೆರಿಗೆಯನ್ನು ಹಾಕಬೇಕೆಂದು ಹೊರಟಿದ್ದರು ಅದನ್ನು ಕೈಬಿಡಬೇಕಾದ ಪರಿಸ್ಥಿತಿ ಬಂತು. ಇದರಿಂದ ಕೂಡಾ ನಮ್ಮ ಉದ್ಯಮಕ್ಕೆ ತೊಂದರೆಯಾಗಿದೆ. ಈ ದೃಷ್ಟಿಯಿಂದ ನೀವು ಪರಿಶೀಲನೆ ಮಾಡಿ ಇವೆರಡರ ವಿಚಾರದಲ್ಲಿ ಹಾಕಿರುವ ತೆರಿಗೆಯನ್ನು ಕೈಬಿಡಬೇಕೆಂದು ಮನವಿ ಮಾಡಿಕೊಳ್ಳುತ್ತಾ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ನಾರಾಯಣರಾವ್ ಮನಳ್ಳಿ (ಬೀದರ್) — ಸನ್ಮಾನ್ಯ ಸಭಾಧ್ಯಕ್ಷರೇ ಈ ವರ್ಷದ ಬಜೆಟ್‌ನಲ್ಲಿ, ಮುಂದೆ ನಮ್ಮ ಎದುರಿಗೆ ಬರುವಂತಹ ವರ್ಷದಲ್ಲಿ ರಾಜ್ಯಕ್ಕೆ ಮತ್ತು ರಾಜ್ಯದ ಜನತೆಗೆ ಒಳ್ಳೆಯದಾಗಬೇಕು, ಪ್ರಗತಿಪರ ಕಾರ್ಯಕ್ರಮ ತೆಗೆದುಕೊಂಡು ಅವರನ್ನು ಉದ್ಧಾರ ಮಾಡಬೇಕು ಎಂಬ ಉದ್ದೇಶ ಇಟ್ಟುಕೊಂಡು, ಈ ಬಜೆಟ್‌ನ್ನು ಮಾಡಿದ್ದಾರೆ. ಆದರೆ ಅದರಲ್ಲಿ ಬಹುಶಃ ಬಜೆಟ್ ಬುಕ್ ನೋಡಿದಾಗ, ಬಹುತೇಕ ಹಳೆಯ ಕೆಲಸಗಳ ಮೇಲೆ ಹಣಕಾಸಿನ ವ್ಯವಸ್ಥೆ ಆಗಿದೆಯೇ ಹೊರತು ಯಾವುದೇ ಹೊಸ ಕೆಲಸಗಳು ಅದರಲ್ಲಿ ಕಾಣುತ್ತಿಲ್ಲ. ವಿಶೇಷವಾಗಿ ಹೈದರಾಬಾದ್ ಕರ್ನಾಟಕದ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಬಜೆಟ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅನೇಕ ಹಳ್ಳಿಯ ಜನರು ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ವಲಸೆ ಹೋಗುತ್ತಿದ್ದಾರೆ ಅದನ್ನು ತಡೆಗಟ್ಟಬೇಕು ಎಂಬ ಒಂದು ಚಿಂತನೆಯನ್ನು ಬಜೆಟ್‌ನಲ್ಲಿ ಕಾಣಿಸಿದೆ. ಇದು ತುಂಬಾ ಸ್ವಾಗತಾರ್ಹವಾದ ಸಂಗತಿ.

ಆದರೆ ಇದನ್ನು ತಡೆಗಟ್ಟತಕ್ಕಂಥ ಯಾವ ಯೋಜನೆ ಬೇಕು ಬಹುಶಃ ಅದು ಈ ಬಜೆಟ್‌ನಲ್ಲಿ ಅವರು ಅನುಕೂಲ ಮಾಡಿಕೊಡಲಿಲ್ಲ. ಇನ್ನು ಮನೆ ಮಠ ಇಲ್ಲದೆ ಹಳ್ಳಿ ಬಿಟ್ಟು ಬೇರೆ ಕಡೆ ಹೋಗಬೇಕೆನ್ನುವ ಪರಿಸ್ಥಿತಿ ಬಂದಾಗ ಆ ಹಳ್ಳಿಯಲ್ಲಿ ಅವರಿಗೆ ಹೊಟ್ಟೆ ಬಟ್ಟೆಗೆ ಏನೂ ಸಿಗುತ್ತಿಲ್ಲವೆಂದು ಮನವರಿಕೆಯಾದಾಗ ವಿಧಿ ಇಲ್ಲದೆ ಪಟ್ಟಣಗಳಿಗೆ ವಲಸೆ ಹೋಗತಕ್ಕಂಥ ಪರಿಸ್ಥಿತಿ ಬರುತ್ತದೆ. ಅವರಿಗೆ ಹಳ್ಳಿಗಳಲ್ಲಿ ಉದ್ಯೋಗ ಸಿಕ್ಕಿ ಕೂಲಿ ಸಿಕ್ಕಿದರೆ ಬಹುಶಃ ಹಳ್ಳಿ ಬಿಟ್ಟು ಮನೆ ಬಿಟ್ಟು ಯಾರೂ ಪಟ್ಟಣಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಇನ್ನು ಯಾವುದೇ ಯೋಜನೆಗೆ ಎಷ್ಟೇ ಹಣ ಬಜೆಟ್‌ನಲ್ಲಿ ಇಟ್ಟರೂ ಕೆಲಸ ಮಾತ್ರ ಆಗುವುದಿಲ್ಲ. ಎಷ್ಟೋ ಸಲ ಬಜೆಟ್‌ನಲ್ಲಿ ಕೆಲಸ ಸೇರಿಸಿರುತ್ತಾರೆ. ಆದರೆ ಆ ಕೆಲಸ ಪೂರ್ತಿಯಾಗುವಂತೆ ಇಲ್ಲ. ಬಜೆಟ್ ಪುಸ್ತಕದಲ್ಲಿ ಬರೆದು ಕೆಲಸಗಳು ಆಗದಿದ್ದರೆ ಏನು ಪ್ರಯೋಜನ ? ಬಜೆಟ್ ಪುಸ್ತಕದಲ್ಲಿ ಬಂದ ಕೆಲಸಕಾರ್ಯಗಳು ಪೂರ್ಣವಾಗಲು ಪ್ರಾಮಾಣಿಕ ಕೆಲಸ ಮಾಡಬೇಕಾಗುತ್ತದೆ ಇದುವರೆವಿಗೂ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅವರೆಲ್ಲಾ ಹೇಳಿದ್ದುದು ಏನೆಂದರೆ ಮಾರ್ಚಿ ತಿಂಗಳಲ್ಲಿ ಮಾತ್ರ ಹಣ ಖರ್ಚು ಮಾಡಿ ಏನೋ ಅಲ್ಪಸ್ವಲ್ಪ ಕೆಲಸ

ಕಾರ್ಯಗಳನ್ನು ಮಾಡುತ್ತಾರೆ. ಉಳಿದಂತೆ ಏನೂ ಕೆಲಸಕಾರ್ಯಗಳು ಆಗುವುದಿಲ್ಲ. ಇದಕ್ಕೆ ನಾನು ಒಂದೇ ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ಭಾಗದಲ್ಲಿ ಕರ್ನಾಟಕ ಆಂಧ್ರ ಇಂಟರ್ ಲಿಂಕ್ ಬ್ರಿಡ್ಜ್ ಒಂದು ಇದೆ. ಅದಕ್ಕೆ ಮಂಜೂರಾತಿ ಸಿಕ್ಕಿ ಆಡಳಿತಾತ್ಮಕ ಅಪ್ರೂವಲ್ ಸಹ ಸಿಕ್ಕಿದೆ. ಇದಕ್ಕೆ ಬಜೆಟ್ ಇಟ್ಟಿರುವುದು ನಮ್ಮ ಸರ್ಕಾರದವರು. ಬಜೆಟ್‌ನಲ್ಲಿ ಸೇರಿಸಿ ಸುಮಾರು ೩ ವರ್ಷಗಳು ಆಯಿತು. ಆದರೂ ಕೂಡ ಕೆಲಸ ಆಗಿಲ್ಲ. ಅನೇಕ ರೈತರು ಇದರಿಂದ ತೊಂದರೆ ಪಡುತ್ತಿದ್ದಾರೆ. ಇಂತಹ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ ಬಜೆಟ್ ಇರುತ್ತದೆ. ಕೆಲಸ ಮಾತ್ರ ಆಗುವಂತೆ ಇಲ್ಲ. ಇಂತಹ ಬಜೆಟನ್ನು ನಾವು ಮಾಡಬಾರದು. ನಾವು ಮಾಡಿದಂತಹ ಪ್ಲಾನ್ ಆಗಲಿ ಯೋಜನೆ ಆಗಲಿ ಅದು ಪೂರ್ತಿಯಾಗಬೇಕು. ಇನ್ನು ನಮ್ಮ ಭಾಗದಲ್ಲಿ ಇರತಕ್ಕಂಥ ಕಾರಂಜಾ ಯೋಜನೆ ಸುಮಾರು ೨೨ ವರ್ಷಗಳು ಆದರೂ ಇದುವರೆವಿಗೂ ಪೂರ್ತಿಯಾಗಲಿಲ್ಲ. ಯಾವಾಗ ಪೂರ್ತಿಯಾಗುತ್ತದೆ ಎನ್ನುವುದು ನಮಗಂತೂ ಅರ್ಥವಾಗುತ್ತಿಲ್ಲ. ನಮ್ಮಲ್ಲಿ ಕಾಡಾ ಡೆವಲಪ್‌ಮೆಂಟ್‌ನಲ್ಲಿ ಸಾಕಷ್ಟು ಭೂಮಿ ಡೆವಲಪ್‌ಮೆಂಟ್ ಮಾಡಬೇಕಾಗಿದೆ. ಯೋಜನೆಗಳನ್ನು ರೂಪಿಸಿ, ಆ ಯೋಜನೆ ನಿಗದಿತ ವೇಳೆಯಲ್ಲಿ ಆಗದಿದ್ದರೆ ಯೋಜನಾ ವೆಚ್ಚ ಜಾಸ್ತಿಯಾಗುತ್ತದೆ. ಮತ್ತು ಆ ಯೋಜನೆ ಶಿಥಿಲಗೊಳ್ಳುತ್ತದೆ.

ಇನ್ನು ನಾನು ಇಂಡಸ್ಟ್ರಿ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಯಾವ ಭಾಗದಲ್ಲಿ ಯಾವ ಯಾವ ಸಂಪನ್ಮೂಲಗಳು ಇವೆ ಯಾವ ಯಾವ ರಿಸೋರ್ಸಸ್ ಇದೆ ಅಲ್ಲಿ ಅಂತಹ ಇಂಡಸ್ಟ್ರಿಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ ಹಳ್ಳಿಗಾಡು ಪ್ರದೇಶಗಳಲ್ಲಿ ನಾವು ಬೆಳೆದಂತಹ ಕಬ್ಬು ಅಥವಾ ಹಾಲು ಉತ್ಪತ್ತಿ ಮಾಡುತ್ತೇವೆ ಅದಕ್ಕೆ ಸಂಬಂಧಪಟ್ಟಂತಹ ಇಂಡಸ್ಟ್ರಿಗಳು ಅಲ್ಲಿ ಇರಬೇಕಾಗುತ್ತದೆ. ಅದು ಬಿಟ್ಟು ಟೆಕ್ನಿಕಲ್ ಇಂಡಸ್ಟ್ರಿಗಳನ್ನು ಸ್ಥಾಪನೆ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅಗ್ರಿಕಲ್ಚರ್ ಬೇಸ್ಡ್ ಇಂಡಸ್ಟ್ರೀ ಮಾಡಬೇಕು. ಅಲ್ಲಿ ಶುಗರ್ ಫ್ಯಾಕ್ಟರಿ, ಫಾಡರ್ ಫ್ಯಾಕ್ಟರಿ ಮಾಡಿದರೆ ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಬೀದರ್ ಡಿಸ್ಟ್ರಿಕ್ಟನ್ನು ಕೇಂದ್ರ ಸರ್ಕಾರ ನೋ ಇಂಡಸ್ಟ್ರಿ ಎಂದು ಡಿಕ್ಲೇರ್ ಮಾಡಿದ ಮೇಲೆ ಅನೇಕ ಇಂಡಸ್ಟ್ರಿಗಳು ಸ್ಥಾಪನೆ ಮಾಡಿದರು. ಆದರೆ ಒಂದು ವಿಶೇಷ ಸಂಗತಿ ಎಂದರೆ ಅವರು ಸಬ್ಸಿಡಿ ಹಣ ತೆಗೆದುಕೊಂಡು ಇಂಡಸ್ಟ್ರೀಯನ್ನು ಲಾಕ್ ಮಾಡಿ ಹೋದರು. ಆದರೂ ಇನ್ನು ಕೆಲವು ಇಂಡಸ್ಟ್ರಿಗಳು ನಡೆಯುತ್ತಿವೆ. ಅವರಿಗೆ ಸರಿಯಾದ ವಿದ್ಯುತ್ ಸಪ್ಲೈ ಇಲ್ಲ. ನೀರಿನ ಸಪ್ಲೈ ಇಲ್ಲ ಅವರು ಗೋಳಾಡುತ್ತಿದ್ದಾರೆ. ಇಂಡಸ್ಟ್ರಿಗಳನ್ನು ಮಾಡುವುದಕ್ಕಾಗಿ ಜಮೀನುಗಳನ್ನು ತೆಗೆದುಕೊಂಡರೆ, ಜಮೀನುಗಳನ್ನು ಕಳೆದುಕೊಂಡ ಪ್ರತಿಮನೆಯಲ್ಲಿ ಒಬ್ಬರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡುತ್ತೇವೆಂದು ಆಗಿನ ಸರ್ಕಾರ ಹೇಳಿತ್ತು. ಈ ನಿಯಮವನ್ನು ಇಂಡಸ್ಟ್ರಿ ಪಾಲಿಸಿಯೊಳಗೆ ಅಳವಡಿಸಲಾಗಿದೆ. ಆದರೆ ಜಮೀನು ಕಳೆದುಕೊಂಡ ಜನರಿಗೆ ಇದುವರೆಗೂ ಉದ್ಯೋಗ ಸಿಕ್ಕಿಲ್ಲ, ಇಂಥ ಘಟನೆಗಳು ಹಲವೊಂದು ಕಡೆ ಆಗಿವೆ. ಅದರ ಕಡೆ ಸರ್ಕಾರ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ. ನಂತರ, ಹೈದರಾಬಾದ್ ಕರ್ನಾಟಕ ಬೋರ್ಡನ್ನು ರಚನೆ ಮಾಡುತ್ತೇವೆಂದು ಹೇಳಿ ಆ ಭಾಗದ ಅಭಿವೃದ್ಧಿ ಸಲುವಾಗಿ ಸ್ವಲ್ಪ ಕಳಕಳಿಯನ್ನು ತೋರಿಸಿದ್ದಾರೆ. ಇದು ಸ್ವಾಗತ ಮಾಡತಕ್ಕ ಅಂಶವಾಗಿದೆ. ಸಧ್ಯದಲ್ಲಿ ಇರುವಂಥ ಪರಿಸ್ಥಿತಿಯಲ್ಲಿ ೪೦ ಕೋಟಿ ರೂಪಾಯಿಗಳನ್ನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಸಲುವಾಗಿ ಇಡಲಾಗಿದೆ. ರೆಗ್ಯುಲರ್ ಯೋಜನೆಯಿಂದ ಕೊಡತಕ್ಕ ಹಣವನ್ನು ಬದಿಗಿಟ್ಟು ಕೇವಲ ೪೦ ಕೋಟಿ ರೂಪಾಯಿಯೊಳಗೆ ಎಲ್ಲಾ ಅಭಿವೃದ್ಧಿಯಾಗಬೇಕೆಂದು ಹೇಳುವ ಮನಸ್ಸು ತಮಗೆ ಇದ್ದರೆ ಆ ರೀತಿ ಮಾಡಬಾರದೆಂದು ನಾನು ಹೇಳುತ್ತೇನೆ. ರೆಗ್ಯುಲರ್ ಬಜೆಟ್‌ನ್ನು ಕೊಟ್ಟು ಅದರ ಜೊತೆಗೆ ಹೆಚ್ಚುವರಿಯಾಗಿ ೬೦ ಕೋಟಿ ರೂಪಾಯಿಗಳನ್ನು ಒದಗಿಸಿದರೆ ಮಾತ್ರ ಈ ಯೋಜನೆಯನ್ನು ಸ್ವಾಗತ ಮಾಡತಕ್ಕ ಅಂಶವಾಗಿದೆಯೆಂದು ಹೇಳಬಹುದು. ಅದರಲ್ಲೂ ನಮ್ಮ ಭಾಗ ಬಾರ್ಡರ್ ಭಾಗ. ನಮ್ಮ ಭಾಗದಲ್ಲಿ ರಸ್ತೆಗಳು ಸರಿಯಾಗಿಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ರಾಮಕೃಷ್ಣ ಅವರು ಮಾತನಾಡುವಾಗ ಹೇಳಿದ್ದಾರೆ. ನಮ್ಮ ಭಾಗದ ರಸ್ತೆಗಳಲ್ಲಿ ಈ ಕಡೆಯ ಜನರೇನಾದರೂ ಪ್ರಯಾಣ ಮಾಡಿದರೆ ಜನ್ಮ ಜನ್ಮಾಂತರದವರೆಗೂ ನೆನಪು ಇರುವಂಥ ರಸ್ತೆಗಳು ಇವೆ. ರಸ್ತೆಗಳು ಇಲ್ಲದೆ ನಾವುಗಳು ಬಹಳಷ್ಟು ತೊಂದರೆ ಅನುಭವಿಸುತ್ತಿದ್ದೇವೆ. ಇಂಥ ಕಷ್ಟ ಪರಿಸ್ಥಿತಿಯಲ್ಲಿ ನಾವುಗಳು ವಾಸ ಮಾಡಿಕೊಂಡು ಜೀವನ ಮಾಡುತ್ತಿದ್ದೇವೆ. ಅದೇ ನಮ್ಮ ಬಾರ್ಡರ್ ಬಿಟ್ಟು ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ಬಾರ್ಡರ್‌ಗಳಲ್ಲಿರುವ ರಸ್ತೆಗಳನ್ನು ನೋಡಿದರೆ ಬಹಳ ಉತ್ತಮ ಸ್ಥಿತಿಯಲ್ಲಿ ರಸ್ತೆಗಳನ್ನು ಅವರು ಇಟ್ಟಿದ್ದಾರೆ. ಫಸ್ಟ್ ಕ್ಲಾಸ್ ಡಾಂಬರ್ ರಸ್ತೆ ಮಾಡಿದ್ದಾರೆ. ನಮ್ಮ ಭಾಗದ ರಸ್ತೆಗಳ ಡೆವಲಪ್‌ಮೆಂಟ್‌ನ್ನು ಹಾಗೂ ಅವರ ಭಾಗದ ರಸ್ತೆಗಳ ಡೆವಲಪ್‌ಮೆಂಟ್‌ನ್ನು ನೋಡಿದಾಗ ನಮ್ಮ ಮನಸ್ಸಿಗೆ ಸ್ವಲ್ಪ ನೋವಾಗುತ್ತದೆ. ಬೇರೆ ಭಾಗದಲ್ಲಿ ಸ್ವಲ್ಪ ಕಡಿಮೆ ಅಭಿವೃದ್ಧಿ ಮಾಡಿದರೂ ಬಾರ್ಡರ್ ಜಾಗದಲ್ಲಿ ಹೆಚ್ಚು ಪ್ರಗತಿಪರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಈ ರೀತಿ ಮಾಡಿದರೆ, ಬೆಳಗಾಂ ಜಿಲ್ಲೆಯ ಗಡಿ ಬಗ್ಗೆ ಮಹಾರಾಷ್ಟ್ರದವರ ಸಮಸ್ಯೆ ಏನಿದೆಯೋ ಅದನ್ನು ಆಗಾಗ ಅಸೆಂಬ್ಲಿಯಲ್ಲಿ ಎತ್ತುವ ಪ್ರಶ್ನೆಯೇ ಬರಲಿಕ್ಕಿಲ್ಲ. ಆ ಭಾಗದ ಜನರು ಮಹಾರಾಷ್ಟ್ರವನ್ನು ನೆನಸಲಿಕ್ಕೂ ಇಲ್ಲ. ಆದ್ದರಿಂದ, ನಮ್ಮ ಬಾರ್ಡರ್ ಭಾಗದ ಅಭಿವೃದ್ಧಿ ಸಲುವಾಗಿ ಸಾಕಷ್ಟು ಹಣವನ್ನು ಒದಗಿಸಿ ಅಭಿವೃದ್ಧಿ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಆಮೇಲೆ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಬಗ್ಗೆ ಹೇಳಬೇಕಾದರೆ. ನಿಜವಾಗಿ ಅಧಿಕಾರ ವಿಕೇಂದ್ರೀಕರಣವಾಗಿದೆ. ಆದರೆ ಅಲ್ಲಿ ನಡೆಯುವಂಥ ಕೆಲಸಗಳನ್ನು ನೋಡಿದರೆ, ಜಿಲ್ಲಾಪರಿಷತ್ತಿನ ಸದಸ್ಯರುಗಳು, ಮಂಡಲ ಪಂಚಾಯಿತಿ ಪ್ರಧಾನರು ಇತರ ಸದಸ್ಯರುಗಳೇ ಎಲ್ಲಾ ಕಂಟ್ರ್ಯಾಕ್ಟ್ ಕೆಲಸಗಳನ್ನು ಮಾಡುತ್ತಿದ್ದಾರೆ. ಇವರೇ ಕಂಟ್ರ್ಯಾಕ್ಟ್‌ಗಳನ್ನು ಮಾಡಿಸುತ್ತಿದ್ದಾರೆಂದರೆ ಅಲ್ಲಿನ ದುಡ್ಡಿನ ಉಪಯೋಗ ಹೇಗಾಗುತ್ತಿದೆಯೆಂದು ತಾವೇ ಅರ್ಥಮಾಡಿಕೊಳ್ಳಬಹುದು. ಅಲ್ಲಿಗೆ ಕೊಡುವ ಹಣವು ಸದ್ವಿನಿಯೋಗವಾಗುವ ಬದಲು ದುರುಪಯೋಗವಾಗುತ್ತಿದೆ. ಸದಸ್ಯರುಗಳೇ ಕಂಟ್ರ್ಯಾಕ್ಟ್ ಮಾಡುತ್ತೇವೆಂದು ಹೇಳಿ ಬಿಲ್‌ಗಳನ್ನು ಮಾಡಿಸಿಕೊಂಡು ಹಣವನ್ನು ತಮ್ಮ ಕಿಸೆಯೊಳಗೆ ಸೇರಿಸುವ ಅನೇಕ ಉದಾಹರಣೆಗಳನ್ನು ಈ ರಾಜ್ಯದಲ್ಲಿ ನಾವು ಕಾಣುತ್ತಿದ್ದೇವೆ. ಇದರ ಮೇಲೆ ಸರ್ಕಾರದವರು ವಿಶೇಷ ಗಮನ ಹರಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆಮೇಲೆ, ಎ.ಪಿ.ಎಂ.ಸಿ. ಯವರು ಕೆಲವೊಂದು ರೋಡ್‌ಗಳನ್ನು ಮಾಡಬೇಕೆನ್ನುವ ಪ್ರಸ್ತಾಪವನ್ನು ಇಟ್ಟಿದ್ದೀರಿ. ನಾನು ಎ.ಪಿ.ಎಂ.ಸಿ. ಸದಸ್ಯನಾಗಿದ್ದಾಗ ಏನು ಮಾಡುತ್ತಿದ್ದೇವೆಂದರೆ, ನಮ್ಮ ಎ.ಪಿ.ಎಂ.ಸಿ. ಯಲ್ಲಿ ಇಂಜಿನಿಯರ್‌ಗಳು ಇಲ್ಲದೇ ಇದ್ದುದರಿಂದ ಹಣವನ್ನು ಪಿ.ಡಬ್ಲ್ಯು.ಡಿ. ಇಲಾಖೆಗೆ ಕೊಡುತ್ತಿದ್ದೆವು. ಅವರು ನಾವು ಕೊಟ್ಟ ಹಣವನ್ನು ಉಪಯೋಗಿಸಿ ರಸ್ತೆಗಳ ಕೆಲಸಗಳನ್ನು ಮಾಡಿಸುತ್ತಿದ್ದರು. ಇಂಥ ಪರಿಸ್ಥಿತಿಯೊಳಗೆ ಆ ಕೆಲಸ ಸರಿಯಾಗಿ ಆಗುತ್ತಿರಲಿಲ್ಲ. ಈಗಲೂ ಆ ತರಹ ಆಗಬಾರದು. ಆದ್ದರಿಂದ, ಇದರ ಕಡೆ ಸರ್ಕಾರ ಲಕ್ಷ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ,

ಮಾನ್ಯ ಅರ್ಥ ಸಚಿವರು ನಿರ್ಮಲ ಗ್ರಾಮ ಯೋಜನೆಯನ್ನು ಈ ಆಯವ್ಯಯದಲ್ಲಿ ತೋರಿಸಿದ್ದಾರೆ. ಯಾವುದೇ ಗ್ರಾಮವು ಸ್ವಚ್ಛವಾಗಿರಬೇಕು. ಆದರೆ ಅಲ್ಲಿಯ ಜನರ ಪ್ರವೃತ್ತಿಯೂ ಕೂಡ ಗ್ರಾಮದ ಸ್ವಚ್ಛತೆಯ ಕಡೆಗೆ ಇರುವ ಹಾಗೆ ನಾವು ಕೆಲಸ ಮಾಡಬೇಕಾಗುತ್ತದೆ. ಹಿಂದಿನ ಸರ್ಕಾರದವರು ಕೂಡ ಅಲ್ಲಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಲ್ಯಾಟ್ರಿನ್‌ಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಆದರೆ ಅವುಗಳು ಉಪಯೋಗವಾಗುತ್ತಾ ಇಲ್ಲ. ಕೆಲವೊಂದು ಅಂತರಾಷ್ಟ್ರೀಯ ಯೋಜನೆಯಡಿಯಲ್ಲಿ ರಾಜ್ಯದ ಯೋಜನೆಯಡಿಯಲ್ಲಿ ಇವನ್ನು ಕಟ್ಟಿಸಿಕೊಟ್ಟಿದ್ದಾರೆ. ಆದರೆ ಅದು ಸುವ್ಯವಸ್ಥಿತವಾಗಿಲ್ಲದ ಕಾರಣ ಉಪಯೋಗವಾಗುತ್ತಾ ಇಲ್ಲ. ಅಲ್ಲಿ ನೀರಿನ ಸರಿಯಾದ ವ್ಯವಸ್ಥೆ ಇಲ್ಲ. ನೀರಿಲ್ಲದೆ ಶೌಚಾಲಯವನ್ನು ಉಪಯೋಗಿಸುವುದು ಹೇಗೆ ಸಾಧ್ಯ ? ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಉಪಯೋಗಕ್ಕೆ ಬಾರದ ಹಾಗೆ ಮಾಡುವುದರಿಂದ ಏನು ಪ್ರಯೋಜನ ? ಈ ನಿರ್ಮಲ ಗ್ರಾಮ ಯೋಜನೆಯಡಿಯಲ್ಲಿ ಶೌಚಾಲಯವನ್ನು ಕಟ್ಟಿಸುವಾಗ ಒಂದು ಸೂಕ್ತವಾದ ಟೈಪ್‌ಡಿಸೈನ್ ಮಾಡಿ ಒಳ್ಳೆಯ ರೀತಿಯಲ್ಲಿ ಅದರ ಉಪಯೋಗ ಆಗುವ ಹಾಗೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಸಾಮಾನ್ಯ ಯೋಜನೆಗಳನ್ನು ಯೋಗ್ಯ ರೀತಿಯಲ್ಲಿ ಅಳವಡಿಸಿಕೊಂಡು ಕಾರ್ಯರೂಪಕ್ಕೆ ತಂದರೆ ಮಾತ್ರ ಇದರಿಂದ ಒಂದು ಒಳ್ಳೆಯ ವಾತಾವರಣವು ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ಮಾಣವಾಗುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ನ್ಯಾಯಬೆಲೆ ಅಂಗಡಿಗಳ ವಿಚಾರದಲ್ಲಿ ಹೇಳುವುದಾದರೆ, ಈ ವಿತರಣೆಯ ವಿಚಾರದಲ್ಲಿ ಹಳ್ಳಿ ಮತ್ತು ಪಟ್ಟಣಗಳ ನಡುವೆ ಭೇದ ಮಾಡಿರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಹಳ್ಳಿಯ ಭಾಗಗಳಿಗೆ ಎಂದಾದರೂ ಒಮ್ಮೆ ಸಕ್ಕರೆ, ಗೋಧಿ, ಮುಂತಾಗಿ ಒಂದು ತಲುಪಿದರೆ ಅದೂ ಅಸಮರ್ಪಕವಾಗಿ ವಿತರಣೆಯಾಗುತ್ತದೆ. ವಿತರಣೆಯಲ್ಲಿಯೂ ಕೂಡ ಪಟ್ಟಣ ಪ್ರದೇಶದವರಿಗೆ ಇಷ್ಟು ಯುನಿಟ್‌ಗೆ ಇಷ್ಟು ಸಕ್ಕರೆ, ಇಷ್ಟು ಅಕ್ಕಿ, ಗೋಧಿ, ಎಂದು ಹೆಚ್ಚಿಗೆ ಕೊಟ್ಟರೆ, ಹಳ್ಳಿಯವರಿಗೆ ತಿಂಗಳಿಗೊಮ್ಮೆ ಒಂದು ಕುಟುಂಬಕ್ಕೆ ಇಷ್ಟು ಎಂದು ಎಂದಾದರೂ ಒಮ್ಮೆ, ಕೊಡುತ್ತಾರೆ. ಅದು ಕನಿಷ್ಟ ಪ್ರಮಾಣದಲ್ಲಿ ಕೊಡುತ್ತಾರೆ. ಸಕ್ಕರೆ ಬಂದರೆ ಗೋಧಿ ಇಲ್ಲ, ಗೋಧಿ ಇದ್ದರೆ ಸಕ್ಕರೆ ಎನ್ನುವ ವಿತರಣೆ ವ್ಯವಸ್ಥೆಯು ಹಳ್ಳಿಗಳಿಗೆ ಖಾಯಂ ಆಗಿದೆ. ಇಂಥ ತಾರತಮ್ಯವನ್ನು ಸರ್ಕಾರದವರು ಏಕೆ ಮಾಡುತ್ತಿದ್ದಾರೆ ಎಂದು ತಿಳಿಯುತ್ತಿಲ್ಲ. ಹೀಗೆ ತಾರತಮ್ಯವನ್ನು ಮಾಡದೇ ಪಟ್ಟಣಗಳವರಿಗೆ ಎಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಕೊಡುತ್ತೀರೋ ಅಷ್ಟೇ ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶಗಳಿಗೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕುಡಿಯುವ ನೀರಿನ ವಿಚಾರದಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಬಹುಶಃ ಬೀದರ್ ಪಟ್ಟಣಕ್ಕೆ ನೀರು ಸರಬರಾಜು ವಿಚಾರದಲ್ಲಿ ಯಾವುದೇ ಪ್ರಸ್ತಾಪ ಇಲ್ಲ. ನಮ್ಮ ನಗರಕ್ಕೆ ನೀರು ಸರಬರಾಜು ಯೋಜನೆಯ ಬಗ್ಗೆ ೧೦ ವರ್ಷಗಳಿಂದ ಬೇಡಿಕೆ ಇಟ್ಟುಕೊಂಡು ಬಂದಿದ್ದೇವೆ. ಆದರೂ ಕೂಡ ದುರ್ದೈವವಶಾತ್ ಬಜೆಟ್‌ನಲ್ಲಿ ಬೀದರ್‌ನ ಹೆಸರೇ ಇಲ್ಲ.

ಬೀದರ್ ನಗರ ದಿನೇ ದಿನೇ ಬೆಳೆಯುತ್ತಿರುವ ನಗರವಾಗಿದೆ. ಪಕ್ಕದಲ್ಲಿ ಇಂಡಸ್ಟ್ರೀಯಲ್ ಏರಿಯಾ ಬೆಳೆಯುತ್ತಾ ಇದೆ. ಆದರೆ ಕುಡಿಯುವ ನೀರಿನ ಸಮರ್ಪಕವಾದ ಯಾವುದೇ ಯೋಜನೆ ಇಲ್ಲಿಗೆ ಆಗಲಿಲ್ಲ ಎರಡು ದಿನಕ್ಕೊಮ್ಮೆ ನೀರು ಜನರಿಗೆ ಬಿಡುವಂಥ ಪರಿಸ್ಥಿತಿಯಲ್ಲಿ ಇದೆ. ಸಮೀಪದಲ್ಲಿ ಮಂಜರಾ ಯೋಜನೆಯನ್ನು ಕೈಗೊಳ್ಳಬಹುದು. ಆಂಧ್ರ ಪ್ರದೇಶದವರು ತಮ್ಮ ಭಾಗದಲ್ಲಿ ಅಣೆಕಟ್ಟು ಕಟ್ಟಿಸಿಕೊಂಡಿದ್ದಾರೆ. ಹೀಗಾಗಿ ಬೀದರ್‌ಗೆ ಕೂಡಲೇ ಒಂದು ಕುಡಿಯುವ ನೀರಿನ ಯೋಜನೆಯನ್ನು ಮಾಡಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳವರು ಈ ಕುರಿತು ಗಮನ ಹರಿಸಿ ಜನಸಾಮಾನ್ಯರ ಒಂದು ತೊಂದರೆಯನ್ನು ನಿವಾರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಹೌಸಿಂಗ್ ಸ್ಕೀಮ್‌ನಲ್ಲಿ ಬಹಳ ತೊಂದರೆಯು ನಮ್ಮ ಬೀದರ್‌ನವರಿಗೆ ಆಗಿದೆ. ಅಲ್ಲಿ ಹೌಸಿಂಗ್ ಬೋರ್ಡ್‌ನವರು ಅನೇಕ ಮನೆಗಳನ್ನು ಕಟ್ಟಿದ್ದಾರೆ. ವಿತರಣೆ ಮಾಡಿದ್ದಾರೆ. ಅಂತೆಯೇ ಬಹಳಷ್ಟು ಜನರಿಗೆ ಮನೆ ಕೊಡುತ್ತೇವೆಂದು ಡಿಪಾಜಿಟ್ ತೆಗೆದುಕೊಂಡಿದ್ದಾರೆ. ಆದರೆ ಇನ್ನೂ ಹೊಸ ಮನೆಗಳು ಆಗಿಲ್ಲ. ಆದುದರಿಂದ ಬೇಡಿಕೆಗನುಸಾರವಾಗಿ ಇನ್ನೂ ಹೆಚ್ಚು ಹೆಚ್ಚು ಮನೆಗಳನ್ನು ಕಟ್ಟಿಸಿಕೊಟ್ಟು ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ, ನಮ್ಮ ಜಿಲ್ಲೆಯ ಕುರಿತು ಬಹಳಷ್ಟು ಬೇರೆ ಸದಸ್ಯರುಗಳು ಕೂಡ ಮಾತನಾಡಿದ್ದಾರೆ. ಒಟ್ಟಿನಲ್ಲಿ ಜಿಲ್ಲೆಯು ಹಿಂದುಳಿದ ಜಿಲ್ಲೆಯಾಗಿರುವುದರಿಂದ ಈ ಕಡೆಗೆ ಸ್ವಲ್ಪ ಹೆಚ್ಚಿನ ಗಮನವನ್ನು ಹರಿಸಿ ಆ ಭಾಗದವರಿಗೆ ಅನಾನುಕೂಲಗಳು ಆಗದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

೪-೦೦ ಪಿ.ಎಂ.

† ಶ್ರೀ ಆರ್. ದಯಾನಂದರಾವ್ (ಗಾಂಧಿನಗರ).—ಮಾನ್ಯ ಅಧ್ಯಕ್ಷಿಣೀಯರವರೇ ೧೯೯೦-೯೧ನೇ ಆಯವ್ಯಯವನ್ನು ಸ್ವಾಗತಿಸುತ್ತಾ ಅರ್ಥ ಸಚಿವರು ಜಾಣ್ಮೆಯಿಂದ ಜನರು ಮೆಚ್ಚುವಂತಹ ಆಯವ್ಯಯವನ್ನು ೧೬ನೇ ತಾರೀಖು ಸದನದಲ್ಲಿ ಮಂಡಿಸಿದ್ದಾರೆ. ಕೆಲವು ಕಾರ್ಯಕ್ರಮಗಳು ನಿಜವಾಗಿ ಸಾರ್ವಜನಿಕರ ಮನಸ್ಸನ್ನು ಸೆಳೆದಿವೆ. ೧೯೮೧ರಿಂದ ಸ್ಟಾಗ್ನೆಂಟಾಗಿ ಬಂದಿದ್ದ ಡೆಫಿಸಿಟ್ ೨೬೭ ಕೋಟಿ ರೂಪಾಯಿಯನ್ನು ೧೯೯೦-೯೧ರ ಹೊತ್ತಿಗೆ ೬೬.೭೩ ಕೋಟಿಗೆ ಇಳಿಸಿರುವುದು ನಿಜವಾಗಿಯೂ ಅವರ ಬುದ್ಧಿವಂತಿಕೆಯನ್ನು ತೋರಿಸುತ್ತದೆ. ಕೆಲವು ಕಾರ್ಯಕ್ರಮಗಳಲ್ಲಿ ಅಂದರೆ ಕೊಳಚೆ ಪ್ರದೇಶದ ನಿರ್ಮೂಲನಕ್ಕೆ ನಾನು ಮೊದಲನೆಯದಾಗಿ ಪ್ರಾತಿನಿಧ್ಯವನ್ನು ಕೊಡುತ್ತಿದ್ದೇನೆ. ಏಕೆಂದರೆ ನಾನು ಬೆಂಗಳೂರು ನಗರದ ಗಾಂಧಿನಗರದಿಂದ ಬರುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಸುಮಾರು ೧೩.೫ ಎಕರೆ ಜಮೀನನ್ನು ಕೊಳಚೆ ಪ್ರದೇಶವಾಗಿದ್ದು ನಮಗೆ ಸ್ವಾತಂತ್ರ್ಯ ಬಂದು ೪೩ ವರ್ಷಗಳಾಗಿವೆ. ಆದರೂ ಬೆಂಗಳೂರಿನಲ್ಲಿ ಕೊಳಚೆ ಪ್ರದೇಶಗಳನ್ನು ಸರಿ ಮಾಡಲು ಆಗಲಿಲ್ಲ. ಅದಕ್ಕೆ ಬೇಕಾದಷ್ಟು ಕಾರಣಗಳಿವೆ. ಕೊಳಚೆ ಪ್ರದೇಶಗಳಲ್ಲಿ ಡ್ರೈನೇಜ್ ಸಿಸ್ಟಮ್ ಮಾಡಿ, ಸ್ಯಾನಿಟರಿ ಲೈನ್ಸ್ ಏನು ಇದೆ ಅದು ಆಗಾಗ್ಗೆ ಕೆಟ್ಟುಹೋಗಿ ನಮ್ಮ ಅಧಿಕಾರಿಗಳು ಎಸ್ಟಿಮೇಟ್ ಮಾಡಿ, ಮಾಡಿ ದುಡ್ಡೆಲ್ಲ ಹಾಳಾಗುತ್ತಿತ್ತು. ಅದರ ಬದಲು ನಮ್ಮ ಸರ್ಕಾರ ಅರ್ಥ ಮಂತ್ರಿಗಳು ೧೮೦ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ಸ್ವಾಗತಾರ್ಹ ಬೆಂಗಳೂರಿನಲ್ಲಿ ಸುಮಾರು ೧೦೪ ಕೊಳಚೆ ಪ್ರದೇಶಗಳಿವೆ. ಅಥವಾ ವರ್ಷಕ್ಕೆ ೧೦ ಕೊಳಚೆ ಪ್ರದೇಶಗಳನ್ನು ತೆಗೆದುಕೊಂಡು ಅದರಲ್ಲಿ ವಸತಿ ಮತ್ತು ಇತರೆ ಸಂಸ್ಥೆಗಳಿಂದ ಹಣವನ್ನು ಪಡೆದು ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ ಹಾಕಿಕೊಂಡರೆ ಬಹಳ ಒಳ್ಳೆಯ ಸಲಹೆಯೆಂದು ಹೇಳುತ್ತಿದ್ದೇನೆ. ನಿಜವಾಗಿಯೂ ಬಡಜನರಿಗೆ ವಸತಿ ಕೊಡುವ ಕಾರ್ಯಕ್ರಮವನ್ನು ತೃಪ್ತಿಕರವಾಗಿ ಮಾಡುತ್ತೀರೆಂದು ಹೇಳುತ್ತಿದ್ದೇನೆ. ಅದೇ ರೀತಿಯಾಗಿ ನಿರ್ಮಲ ಗ್ರಾಮೀಣ ಯೋಜನೆ ಇದು ನಗರಕ್ಕೆ ಸೀಮಿತವಾಗಿದ್ದು ಇದರಲ್ಲಿ ಸುಮಾರು ೧೨ ಸಾವಿರ ಜನಸಂಖ್ಯೆಗೆ ಉದ್ಯೋಗ ದೊರೆಯಲಿದೆ. ಇದಕ್ಕೆ ೩.೬೦ ಕೋಟಿ ನಿಗದಿಪಡಿಸಿದ್ದೀರಿ ಹೌಸಿಂಗ್ ಬೋರ್ಡ್ ನಮಗೆ ಮುಂಚೆಯೇ ಕೊಟ್ಟಿದೆ. ಈ ಹೌಸಿಂಗ್ ಬೋರ್ಡ್‌ನವರು ಕಟ್ಟಿರುವ ಮನೆಗಳನ್ನು ನಗರದಲ್ಲಿ ಹೋಗಿ ನೋಡಬೇಕು. ಅದರಲ್ಲಿ ಸಿಮೆಂಟ್ ಇರುವುದಿಲ್ಲ. ಇಟ್ಟಿಗೆಯೂ ಸರಿಯಾಗಿರುವುದಿಲ್ಲ.

ಈ ಕಾರ್ಯಕ್ರಮಗಳನ್ನು ತಾವು ಏನು ತೆಗೆದುಕೊಂಡಿದ್ದೀರಿ, ಇದರಿಂದ ಸುಮಾರು ೬೫೦೦ ಜನರಿಗೆ ವಸತಿಯನ್ನು ಕೊಡುತ್ತೇವೆಂದು ತಾವು ತಿಳಿಸಿದ್ದೀರಿ. ಇನ್ನೂ ಸಹಕಾರಿ ಸಂಸ್ಥೆಗಳ ಸಹಾಯದಿಂದ ಮತ್ತಷ್ಟು ಹಣವನ್ನು ಗಳಿಸಿ ಆರು ಸಾವಿರದ ಐದು ನೂರಕ್ಕಿಂತ ಇನ್ನೂ ಹೆಚ್ಚು ಮನೆಗಳನ್ನು ತಾವು ಕಟ್ಟಿದರೆ ಬಹಳ ಅನುಕೂಲವಾಗುತ್ತದೆ. ಇದರಿಂದ ಬೆಂಗಳೂರು ನಗರದ ಜನಗಳಿಗೆ ಒಂದು ಒಳ್ಳೆಯ ಕಾರ್ಯಕ್ರಮವನ್ನು ಕೊಟ್ಟಂತೆ ಆಗುತ್ತದೆ ಎಂದು ನಾನು ಹೇಳುತ್ತೇನೆ. ಮೂರನೆಯದಾಗಿ ನಿರ್ಮಲ ಗ್ರಾಮದ ಯೋಜನೆ ಬಗ್ಗೆ ಹೇಳಿದ್ದೀರಿ. ನಿಜವಾಗಿಯೂ ಇದು ಜನಗಳಿಗೆ ಒಂದು ರೀತಿಯ ಖುಷಿಯನ್ನು ಮಾಡುವಂಥ ಒಂದು ಕಾರ್ಯಕ್ರಮವನ್ನು ತಾವು ಕೊಟ್ಟಿದ್ದೀರಿ. ಹಳ್ಳಿಗಳಲ್ಲಿ ವಾಸಿಸುವ ಮಹಿಳೆಯರಿಗೆ ತಾವು ಶೌಚಾಲಯಗಳನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ಕಾರ್ಯಕ್ರಮ ಹಳ್ಳಿಗಾಡಿನ ಜನರಿಗೆ ಬಹಳ ಅನುಕೂಲವಾಗುತ್ತದೆ ಇಲ್ಲಿಯವರಿಗೂ ಹಳ್ಳಿಗಾಡುಗಳಲ್ಲಿ ಹೆಂಗಸರಿಗೆ ಶೌಚಾಲಯಗಳು ಇರಲಿಲ್ಲ ಇದಕ್ಕಾಗಿ ನಾಲ್ಕು ಕೋಟಿ ರೂಪಾಯಿ ಇಟ್ಟು ಈ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ. ಒಂದು ಲಕ್ಷ ಕುಟುಂಬಗಳಿಗೆ ನಾಲ್ಕು ನೂರು ರೂಪಾಯಿ ಬೆಲೆಯ ಸಾಮಗ್ರಿಗಳ ರೂಪದಲ್ಲಿ ಹಣ ಹಾಗೂ ತಾಂತ್ರಿಕ ಮಾರ್ಗದರ್ಶನವನ್ನು ನೀಡಲಾಗುವುದು ಎಂದು ಹೇಳಿದ್ದೀರಿ. ನಿಜವಾಗಿಯೂ ಒಂದು ಒಳ್ಳೆಯ ಕಾರ್ಯಕ್ರಮವನ್ನು ನಮ್ಮ ಅರ್ಥಮಂತ್ರಿಗಳು ಕೊಟ್ಟಿದ್ದಾರೆ. ಮತ್ತೊಂದು ಕಾರ್ಯಕ್ರಮವನ್ನು ಹೇಳಿದ್ದಾರೆ, ಅದೇನೆಂದರೆ "ರಿಯಾಯಿತಿಗಳ ಪುನರ್‌ಪರಿಶೀಲನೆ". ಇದನ್ನು ನಾನು ಸ್ವಾಗತಿಸುತ್ತಾ ಹಿಂದಿನ ಸರ್ಕಾರ ಸೀರೆ ಪಂಚೆ ವಿತರಣೆ ಮಾಡಿದ್ದೇವೆಂದು ಹೇಳಿ ಜನಗಳಿಗೆ ಮೋಸ ಮಾಡಿದ್ದಾರೆ. ಈ ಸೀರೆ ಪಂಚೆ ನೀರಿನಲ್ಲಿ ಹಾಕಿದಾಗಲೇ ಇದರ ನಿಜ ಸ್ವರೂಪವನ್ನು ಕಳೆದುಕೊಂಡು ಇದರಲ್ಲಿ ಇದ್ದ ಗಂಜಿ ಕೂಡಾ ಹೋಗಿ ಇದನ್ನು ಉಡಲಿಕ್ಕೂ ಆಗದ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಪಠ್ಯಪುಸ್ತಕಗಳನ್ನು ಕೊಡುತ್ತಿದ್ದರು, ಪಠ್ಯಪುಸ್ತಕಗಳೂ ಕೂಡಾ ವಿದ್ಯಾರ್ಥಿಗಳಿಗೆ ಸರಿಯಾಗಿ ಲಭಿಸುತ್ತಿರಲಿಲ್ಲ. ಇದಾದ ಮೇಲೆ ಬಳಕೆದಾರರ ಹಿತರಕ್ಷಣೆ ನಮ್ಮ ದೇಶದಲ್ಲಿ ಮಾರಾಟಗಾರರದೇ ಮೇಲುಗೈಯಾಗಿದೆ. ಈಗ ಇದನ್ನು ಅವರು ಮಾರಿದ್ದೇ ಬೆಲೆ, ನಮ್ಮ ಜನರು ಹೋಗಿ ಕೊಂಡುಕೊಳ್ಳುತ್ತಿದ್ದರು. ಇದನ್ನು ತಾವು ತಡೆಯಲಿಕ್ಕೆ ನಮ್ಮ ಸರ್ಕಾರದವರು ಒಂದು ಆಯೋಗವನ್ನು ರಚಿಸಿದ್ದಾರೆ. ಇದು ಬಹಳ ಸಂತೋಷಕರವಾದಂಥ ಕಾರ್ಯಕ್ರಮ ಎಂದು ಹೇಳುತ್ತೇನೆ. ನಿಜವಾಗಿಯೂ ಎಲ್ಲರೂ ಇದಕ್ಕೆ ಪ್ರೋತ್ಸಾಹವನ್ನು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಕ್ಷೇತ್ರದಲ್ಲಿ ಬರುವ ಜೂಜು ತೆರಿಗೆಯ ಬಗ್ಗೆ ಹೇಳಿದ್ದಾರೆ. ಈ ಜೂಜು ತೆರಿಗೆಯನ್ನು ತಾವು ಎತ್ತುವುದನ್ನು ಜನಗಳಿಗೆ ಜಾಸ್ತಿ ಮಾಡಿದರೆ ಚೆನ್ನಾಗಿತ್ತು ಎಂದು ಕಾಣುತ್ತದೆ. ಏತಕ್ಕೆಂದರೆ ಅಲ್ಲಿ ಜನರು ಬೆಳಗ್ಗೆಯಿಂದಲೇ ಆ ರಸ್ತೆಯಲ್ಲಿ ಓಡಾಡುತ್ತಿರುತ್ತಾರೆ. ಇದು ಬೆಂಗಳೂರು ನಗರದಲ್ಲಿ 'ನ್ಯೂಸೆನ್ಸ್' ರೀತಿಯಲ್ಲಿ ಆಗಿದೆ. ಅಲ್ಲಿ ರೇಸ್ ಪುಸ್ತಕಗಳನ್ನು ತೆಗೆದುಕೊಂಡು ಜನಗಳು ತಮ್ಮ ಕುಟುಂಬಗಳನ್ನೇ ಮರೆತು ಅಷ್ಟೋ ಇಷ್ಟೋ ಇದ್ದಂಥ ದುಡ್ಡನ್ನು ಈ ರೇಸ್ ಆಡುವುದಕ್ಕೆ ಖರ್ಚು ಮಾಡಿ ತಮ್ಮ ಕುಟುಂಬಗಳನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇದರ ಮೇಲೆ ಜಾಸ್ತಿ ತೆರಿಗೆಯನ್ನು ಹಾಕಿದ್ದರೆ ಈ ರೀತಿ ಜನಗಳು ಅಲ್ಲಿಗೆ ಹೋಗುವುದು ತಪ್ಪುತ್ತಿತ್ತು. ಈ ಒಂದು ರೇಸ್ ಕೋರ್ಸನ್ನೇ ಸ್ಥಳಾಂತರ ಮಾಡಿದರೆ ಬೆಂಗಳೂರಿನಲ್ಲಿ ಎಷ್ಟೋ ಕುಟುಂಬಗಳು ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ತಮ್ಮಲ್ಲಿ ಹೇಳುತ್ತಿದ್ದೇನೆ. ಕೊನೆಯದಾಗಿ ಹೆಂಡದ ಮಾರಾಟದ ಬಗ್ಗೆ ಹೇಳುತ್ತೇನೆ. ಈ ಹೆಂಡದ ಮಾರಾಟದಲ್ಲಿ ನಮ್ಮ ಸರ್ಕಾರ ೬ ಕೋಟಿ ರೂಪಾಯಿಗಳನ್ನು ತೆಗೆದುಕೊಂಡರೂ ಸಹ ಈ ಒಂದು ಕಾರ್ಯಕ್ರಮ ಏನು ತೆಗೆದುಕೊಂಡಿದ್ದೀರಿ ಈ ಒಂದು ಕಾರ್ಯಕ್ರಮದಿಂದ ಜನಗಳಿಗೆ ಅದರಲ್ಲೂ ಹಳ್ಳಿಗಾಡಿನಲ್ಲಿರತಕ್ಕಂಥ ಜನಗಳಿಗೆ ಒಂದು ಒಳ್ಳೆಯ ಕಾರ್ಯಕ್ರಮವೆಂದು ನಾನು ತಿಳಿದುಕೊಂಡಿದ್ದೇನೆ. ೧.೭.೯೦ರಲ್ಲಿ ತಾವು ಇದಕ್ಕೆ ಪೂರ್ತಿಯಾಗಿ ನಿಷೇಧಾಜ್ಞೆಯನ್ನು ತರುತ್ತೀರೆಂದು ಹೇಳಿದ್ದೀರಿ. ಅದಕ್ಕೂ ಸ್ವಾಗತ ಮಾಡುತ್ತಾ ಒಂದು ಸಲಹೆಯನ್ನು ಮಾನ್ಯ ಅರ್ಥ ಮಂತ್ರಿಗಳಿಗೆ ತಮ್ಮ ಮೂಲಕ ಕೊಡುವುದಕ್ಕೆ ಇಷ್ಟಪಡುತ್ತೇನೆ. ಸೇಂದಿ ನಿಲ್ಲಿಸಿದ್ದೀರಿ. ಆದರೆ ಕಳ್ಳಭಟ್ಟಿ ಉದ್ಭವ ಆಗುವ ಸಂಭವ ಇದೆ. ಅದನ್ನು ತಡೆಗಟ್ಟಲಿಕ್ಕೆ ಸರ್ಕಾರ ಒಂದು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆಯೋ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷಣಿಯವರು ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ನಾನು ತಮಗೆ ಚಿರಋಣಿಯಾಗಿ ತಮಗ ವಂದನೆಯನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವರಾಜ್ (ಬ್ರಹ್ಮಾವರ್).— ಮಾನ್ಯ ಅಧ್ಯಕ್ಷಣಿಯವರೇ, ನಮ್ಮ ಮಾನ್ಯ ಅರ್ಥ ಮಂತ್ರಿಗಳು ೧೯೯೦-೯೧ನೇ ಸಾಲಿಗೆ ಆಯವ್ಯಯವನ್ನು ಏನು ಮಂಡಿಸಿದ್ದಾರೆ ಅದನ್ನು ಸ್ವಾಗತ ಮಾಡಿ ನನ್ನ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಇಲ್ಲಿ ಮಾತನಾಡಿದಂತಹ ಎಲ್ಲಾ ಸದಸ್ಯರೂ ಸಹ ನಮ್ಮ ಸರ್ಕಾರವು ಸೇಂದಿ ಮಾರಾಟವನ್ನು